ಕಳುಹಿಸಿಕೊಡಲಿ. ನಾನು ಬೇರೆ ಯಾವುದೇ ಪ್ರಭಾವಕ್ಕೆ ಒಳಗಾಗದ ರೀತಿಯಲ್ಲಿ ಅದನ್ನು ಪರಿಶೀಲಿಸುತ್ತೇನೆ. ನನ್ನ ಕೈಲಾದಷ್ಟು ಮಟ್ಟಿಗೆ ಪರಿಸ್ಥಿತಿಯನ್ನು ಸರಿ ಮಾಡುವ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ:- ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿನ ಮಕ್ಕಳ ಪರಿಸ್ಥಿತಿ ಏನಾಗಬೇಕು?

ಅಧ್ಯಕ್ಷರು:- ಆದಷ್ಟು ಬೇಗನೇ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರಲ್ಲಾ.

ಪ್ರೊ|| ಬಿ.ಕೆ. ಚಂದ್ರಶೇಖರ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಶಾಲೆಗಳನ್ನು ವರ್ಗಾಯಿಸಲಾಗಿದ್ದು, ಈ ಹಂತದಲ್ಲಿ ಮಾಡಲು ಕಷ್ಟವಾಗುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ:- ಮಾನ್ಯ ಅಧ್ಯಕ್ಷರೇ, ಹಿಂದಿನ ಶಿಕ್ಷಣ ಸಚಿವರೂ ಹೇಳಿದ್ದ ಮಾತನ್ನೇ ಇವರೂ ಹೇಳುತ್ತಿದ್ದಾರೆ. ಹೀಗಾದರೆ ಇದೂ ಕೂಡ ಮತ್ತೆ ನೆಕ್ಸ್ಟ್ ಇಯರ್‌ಗೆ ಹೋಗುತ್ತದೆ. ಎರಡು ಪ್ರೌಢ ಶಾಲೆಗಳನ್ನು ಆರಂಭಿಸುವುದರಿಂದ ಅದು ಸರ್ಕಾರಕ್ಕೇನೂ ದೊಡ್ಡ ಹೊರೆಯಾಗುವುದಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ಈ ರೀತಿ ನಾಲ್ಕು ನಾಲ್ಕು ಆದೇಶಗಳಾದರೆ, ಇಲ್ಲಿ ಆಡಳಿತ ಎಂಬುದು ಏನಿದೆ? ಆಡಳಿತ ಕುಸಿದು ಬಿದ್ದು ಹೋಗಿದೆ. ಶಿಕ್ಷಣ ಇಲಾಖೆಯಲ್ಲಿ ಈ ರೀತಿ ಆದರೆ ಮಕ್ಕಳ ಭವಿಷ್ಯ ಏನಾಗುತ್ತದೆ? ಮಾನ್ಯ ಮಂತ್ರಿಗಳು ದಯವಿಟ್ಟು ಸ್ಪಷ್ಟವಾಗಿ ನಾನು ಈ ವರ್ಷ ಎರಡು ಪ್ರೌಢ ಶಾಲೆಗಳನ್ನು ಕೊಡುತ್ತೇನೆ ಎಂದು ಭರವಸೆ ಕೊಡಬೇಕು.

ಪ್ರೊ|| ಬಿ.ಕೆ. ಚಂದ್ರಶೇಖರ್:- ದಯವಿಟ್ಟು ಮಾನ್ಯ ಸದಸ್ಯರು ಒಂದು ಅಂಶವನ್ನು ತಿಳಿದುಕೊಳ್ಳಬೇಕು. ನಾನು ಇನ್ನೊಂದು ಸಾರಿ ಅದನ್ನು ಪರಿಶೀಲನೆ ಮಾಡಬೇಕು. ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆಂದು, ಈಗಲೇ ಆ ಬಗ್ಗೆ ನಾನಿಲ್ಲಿ ಭರವಸೆ ಕೊಟ್ಟರೆ ಅದು ಬಹಳ ಲಘುವಾದ ಭರವಸೆಯಾಗುತ್ತದೆ. ನನಗೆ ಸಂಪೂರ್ಣ ಮಾಹಿತಿ ಬರಬೇಕು. ಇನ್ನೊಂದು ಸಾರಿ ಇನ್ಸ್‌ಪೆಕ್ಟ್ ಮಾಡಬೇಕು. ಅಗತ್ಯ ಬಿದ್ದರೆ ಅಲ್ಲಿಗೆ ನಾನೇ ಹೋಗಿ ಬರುತ್ತೇನೆ. ಅಲ್ಲಿಯವರೆಗೂ ಆ ರೀತಿಯ ಭರವಸೆಯನ್ನು ನಾನು ಹೇಗೆ ಕೊಡಲು ಸಾಧ್ಯ? ದಯಮಾಡಿ ನನ್ನ ಪರಿಸ್ಥಿತಿಯನ್ನೂ ಸಹಾ ತಾವು ಅರ್ಥ ಮಾಡಿಕೊಳ್ಳಬೇಕು. ನಾನು ಕೊಡುತ್ತಿರುವ ಭರವಸೆಯನ್ನು ಒಪ್ಪಿಕೊಂಡು ತಾವು ಕುಳಿತುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

2) ರಾಜ್ಯದಲ್ಲಿನ ರೇಷ್ಮೆ ಕೃಷಿಯು ಅವನತಿ ಅಂಚಿನತ್ತ ಸಾಗುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ

+ **ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್)**:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿನ ರೇಷ್ಮೆ ಕೃಷಿಯು ಅವನತಿ ಅಂಚಿನತ್ತ ಸಾಗುತ್ತಿದ್ದು, ಈ ಕೃಷಿಯನ್ನು ಅವಲಂಬಿಸಿರುವ ಲಕ್ಷಾಂತರ ಕುಟುಂಬಗಳು ಆತಂಕಕ್ಕೆ ಒಳಗಾಗಿರುವ ಬಗ್ಗೆ ನಾನು ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):- ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯದಲ್ಲಿ 1.16 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಹಿಪ್ಪುನೇರಳೆ ವ್ಯವಸಾಯವಿದ್ದು 2.56 ಲಕ್ಷ ಕುಟುಂಬಗಳು ಮತ್ತು 12000 ರೇಷ್ಮೆ ರೀಲರ್‌ಗಳು ಈ ಉದ್ಯಮವನ್ನು ಅವಲಂಭಿಸಿದ್ದಾರೆ.

ರಾಷ್ಟ್ರದಲ್ಲಿ ವಾರ್ಷಿಕ 14,500 ಮೆ. ಟನ್ ಕಚ್ಚಾ ರೇಷ್ಮೆ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಕರ್ನಾಟಕ ರಾಜ್ಯದ ಕೊಡುಗೆ 8700 ಮೆ.ಟನ್. ರಾಜ್ಯದಲ್ಲಿ ಹೆಚ್ಚು ಇಳುವರಿ ನೀಡುವ ಮತ್ತು ಗುಣಮಟ್ಟದ ರೇಷ್ಮೆ ಉತ್ಪಾದಿಸಬಹುದಾದ ಹೊಸ ದ್ವಿತಳಿಗಳನ್ನು ಅಭಿವೃದ್ಧಿಪಡಿಸಿ ನೂತನ ತಾಂತ್ರಿಕತೆಗಳ ಪ್ರಸರಣೆಯ ಮೂಲಕ ರೇಷ್ಮೆ ಬೆಳೆಗಾರರಲ್ಲಿ ಮತ್ತು ರೀಲರುಗಳಲ್ಲಿ ಗುಣಮಟ್ಟದ ಅರಿವು ಮೂಡಿಸಲು ರಾಜ್ಯ ಸರ್ಕಾರವು ಕೇಂದ್ರ ಮಂಡಳಿಯ ಜೊತೆಗೂಡಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ಚೈನಾ ದೇಶದಿಂದ ರೇಷ್ಮೆ ಆಮದು ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, 2001-02ನೇ ಸಾಲಿನಲ್ಲಿ 6,800 ಮೆ.ಟನ್ ರೇಷ್ಮೆ ಆಮದು ಆಗಿದೆ. ರೇಷ್ಮೆಯ ದರವು ಸಹ 2000-01ನೇ ಸಾಲಿನಲ್ಲಿ 24 ಡಾಲರ್ ಇದ್ದುದು ಪ್ರಸಕ್ತ ವರ್ಷ 13-14 ಡಾಲರ್‌ಗಳಿಗೆ ಇಳಿದಿದೆ. ಓ.ಜಿ.ಎಲ್. ಆಧಾರದಲ್ಲಿ ರೇಷ್ಮೆ ಆಮದು ಆಗುತ್ತಿದ್ದು ರಫ್ತು ಮಾಡುವ ಪ್ರತಿ ಕೆ.ಜಿ. ರೇಷ್ಮೆ ಜವಳಿಗೆ 1350 ಗ್ರಾಂ. ರೇಷ್ಮೆ ಆಮದು ಮಾಡಿಕೊಳ್ಳಲು ಅವಕಾಶವಿದೆ. ಕೇಂದ್ರ ಸರ್ಕಾರವು ಆಮದು ಸುಂಕವನ್ನು ಶೇ. 35 ರಿಂದ 2002-03ನೇ ಸಾಲಿನಲ್ಲಿ ಶೇ. 30ಕ್ಕೆ ಇಳಿಸಿದೆ. ಇದಲ್ಲದೆ ವಿವಿಧ ಯೋಜನೆಗಳಾದ

- Duty Exemption Scheme
- Duty Remission Scheme
- Duty Free Replenishment Certificate Scheme
- Duty Endoment Pass Book Scheme
- Export Oriented Unit Scheme
- Export Processing Zone Scheme
- Export Promotion Capital Goods Scheme

ಗಳಡಿ ಸುಂಕರಹಿತ ರೇಷ್ಮೆ ಆಮದು ಆಗುತ್ತಿದೆ.

ಗಡಿ ರಾಷ್ಟ್ರಗಳಾದ ನೇಪಾಳ ಮತ್ತು ಬಾಂಗ್ಲಾದೇಶಗಳ ಮೂಲಕ ಕಳ್ಳಸಾಗಾಣಿಕೆಯಿಂದ ನಮ್ಮ ದೇಶಕ್ಕೆ ರೇಷ್ಮೆ ಬರುತ್ತಿದೆ.

ಚೈನಾ ದೇಶದಿಂದ ಹೆಚ್ಚಿನ ಆಮದು ಮತ್ತು ಅನಧಿಕೃತವಾಗಿ ಬರುತ್ತಿರುವ ರೇಷ್ಮೆಯ ಕಾರಣ ನಮ್ಮ ರಾಜ್ಯದ ರೇಷ್ಮೆ ಬೆಳೆಗಾರರು ಮತ್ತು ರೀಲರ್‌ಗಳು ಸಂಕಷ್ಟಕ್ಕೆ ಒಳಗಾಗಿದ್ದು, ಆಮದು ರಫ್ತು ನೀತಿಯು ಕೇಂದ್ರ ಸರ್ಕಾರದ್ದಾದುದರಿಂದ ಮಾನ್ಯ ಪ್ರಧಾನ ಮಂತ್ರಿಗಳು, ಮಾನ್ಯ ಆರ್ಥಿಕ ಸಚಿವರು ಮತ್ತು ಮಾನ್ಯ ಜವಳಿ ಸಚಿವರನ್ನು ಕೆಳಕಂಡ ಅಂಶಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

1. ಆಮದು ಮಾಡುವ ರೇಷ್ಮೆಗೂ ರಫ್ತು ಮಾಡುವ ಜವಳಿಗೂ ಹೊಂದಾಣಿಕೆ ಇರದ ಕಾರಣ ರಫ್ತು ಮಾಡುವ ಪ್ರತಿ ಕೆ.ಜಿ. ರೇಷ್ಮೆ ಜವಳಿಗೆ ಬದಲಾಗಿ ಆಮದು ಮಾಡಿಕೊಳ್ಳುವ 1350 ಗ್ರಾಂ ರೇಷ್ಮೆ ಬದಲು ರಫ್ತು ಮಾಡುವ ಜವಳಿ ತಯಾರಿಕೆಗೆ ಬಳಸುವ ಪ್ರಮಾಣ ಮತ್ತು ಗುಣಮಟ್ಟದ ರೇಷ್ಮೆಯ ಆಮದಿಗೆ ಮಾತ್ರ ಅವಕಾಶ ಕಲ್ಪಿಸುವುದು.

2. ಆಮದು ಸುಂಕ ಹೆಚ್ಚಿಸುವುದು

3. ಕಳ್ಳ ಸಾಗಾಣಿಕೆ ಸ್ಥಗಿತಗೊಳಿಸುವುದು

4. ನೈಜ ರಫ್ತುದಾರರಿಗೆ ಮಾತ್ರ ಆಮದು ಮಾಡಿಕೊಳ್ಳುವ ಅವಕಾಶಕಲ್ಪಿಸುವುದು.

ಇದಲ್ಲದೆ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ರೇಷ್ಮೆ ಖರೀದಿಸಲು ಮತ್ತು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮಕ್ಕೆ ಗೂಡು ಖರೀದಿಸಲು ಕಡಿಮೆ ಬಡ್ಡಿ ದರದಲ್ಲಿ ಷೇರು ಬಂಡವಾಳ : ಸಾಲ ಒದಗಿಸಲು ಕೇಂದ್ರ ರೇಷ್ಮೆ ಮಂಡಳಿಯನ್ನು ಕೋಲಾಗಿದೆ.

ರೇಷ್ಮೆ ಗೂಡಿನ ಮತ್ತು ರೇಷ್ಮೆ ಧಾರಣೆ ಕಳೆದ ವರ್ಷಕ್ಕೆ ಹೋಲಿಸಿದಾಗ ಕಡಿಮೆಯಾಗಿದ್ದು, ಸಾಂಪ್ರದಾಯಿಕ ಜಿಲ್ಲೆಗಳ ರೇಷ್ಮೆ ಬೆಳೆಗಾರರು ಮೆರವಣಿಗೆ, ರಾಸ್ತಾರೋಕೋ, ಪತ್ರಿಕಾ ಪ್ರಕಟಣೆ ಮತ್ತು ವಿಚಾರ ಸಂಕಿರಣಗಳ ಮೂಲಕ ಚಳುವಳಿ ಪ್ರಾರಂಭಿಸಿರುತ್ತಾರೆ. ರೇಷ್ಮೆ ಬೆಳೆಗಾರರ ಸಮಸ್ಯೆಗಳನ್ನು ಸಮಗ್ರವಾಗಿ ಪರಿಶೀಲಿಸಿ ವರದಿ ನೀಡಲು ಸರ್ಕಾರವು ಉನ್ನತ ಅಧಿಕಾರಿಗಳು : ತಜ್ಞರು ಸಮಿತಿ ರಚಿಸಲಾಗಿದ್ದು, ಈ ಸಮಿತಿಯು ಚರಕಾ ರೇಷ್ಮೆಗೆ ಕೆ.ಜಿ.ಗೆ ರೂ. 860-00 ಮತ್ತು 20:22 ಡೀನಿಯರ್ ಫಿಲೇಚರ್ ರೇಷ್ಮೆಗೆ ರೂ. 1000-00 ಬೆಂಬಲ ಬೆಲೆ ನೀಡಬಹುದೆಂದು ಶಿಫಾರಸ್ಸು ಮಾಡಿದೆ. ಈ ವರದಿಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ರೇಷ್ಮೆ ಉದ್ಯಮ, ರೇಷ್ಮೆ ಬೆಳೆಗಾರರು ಮತ್ತು ರೀಲರ್‌ಗಳ ಹಿತ ಕಾಪಾಡಲು ಆಮದು ನಿಯಂತ್ರಿಸಿ, ಕಳ್ಳ ಸಾಗಾಣೆ ಸ್ಥಗಿತಗೊಳಿಸಿ, ಆಮದು ಸುಂಕವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಈಗಾಗಲೇ ಕೋರಲಾಗಿದೆ. ಕೇಂದ್ರ ಸರ್ಕಾರದ ಪ್ರತಿಕ್ರಿಯೆ ನಿರೀಕ್ಷಿಸಿದೆ.

ಶ್ರೀ ಎಸ್.ಪಿ. **ಮುದ್ದಹನುಮೇಗೌಡ (ಕುಣಿಗಲ್)**:- ಮಾನ್ಯ ಅಧ್ಯಕ್ಷರೆ, ರೇಷ್ಮೆ ಬಟ್ಟೆಗಳನ್ನು ಹಾಕಿಕೊಂಡಿರುವುದು ನೋಡುವುದಕ್ಕೆ ಕಣ್ಣಿಗೆ ಬಹಳ ಚೆನ್ನಾಗಿ ಕಾಣುತ್ತದೆ. ರೇಷ್ಮೆ ಬೆಳೆಯುವ ಬೆಳೆಗಾರರ ಕಷ್ಟವನ್ನು ನೋಡುವುದಕ್ಕೆ ಕಣ್ಣೀರು ಬರುತ್ತದೆ. ಇದು ಈವತ್ತಿನ ಪರಿಸ್ಥಿತಿ ಮಾನ್ಯ ರೇಷ್ಮೆ ಸಚಿವರು ಸ್ವತಃ ಮೈಸೂರು ಬಿತ್ತನೆ ವಲಯದ ಒಂದು ಭಾಗವನ್ನು ಪ್ರತಿನಿಧಿಸುತ್ತಿರತಕ್ಕಂತಹ ಶಾಸಕರೂ ಹೌದು. ರೇಷ್ಮೆ ಬೆಳೆಗಾರರ ಕಷ್ಟ ಸುಖಗಳ ಬಗ್ಗೆ ಎಲ್ಲರಿಗಿಂತ ಬಹಳ ಹೆಚ್ಚಿನ ಮಾಹಿತಿ ಅವರಿಗೆ ಇದೆ. ಒಂದು ವಿಷಯ ನಿರ್ವಿವಾದ. ರೇಷ್ಮೆ ಬೆಳೆಗಾರರ ಸಂಖ್ಯೆ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ಗಣನೀಯವಾದ ಇಳಿಮುಖವಾಗುತ್ತಿದೆ ಎಂಬ ಕಟು ಸತ್ಯವನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದಕ್ಕೆ ಕಾರಣವೇನೆಂದು ಕಂಡುಹಿಡಿದು ಸಾಂಪ್ರದಾಯಿಕ ರೇಷ್ಮೆಯನ್ನು ಕೃಷಿ ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ರಾಷ್ಟ್ರದಲ್ಲಿ ಉಳಿಸತಕ್ಕಂತಹ ಪ್ರಾಮಾಣಿಕ ಪ್ರಯತ್ನ ಇವತ್ತು ಆಗಬೇಕಾಗಿದೆ. ಮೂಲಭೂತವಾಗಿ ಈ ರೇಷ್ಮೆ ಕೃಷಿಗೆ ಬಹಳ ದೊಡ್ಡ ಪೆಟ್ಟು ಬೀಳುತ್ತಿರುವುದು, ಚೈನಾದಿಂದ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ, ನಮ್ಮ ರಾಜ್ಯದಲ್ಲಿ ಅಗತ್ಯತೆಗಿಂತ ಹೆಚ್ಚಿನ ಬೇಡಿಕೆ ಇರತಕ್ಕಂಥದ್ದು,

ಸುಮಾರು ಶೇಕಡ 20 ರಷ್ಟು ವ್ಯತ್ಯಾಸವನ್ನು ತುಂಬಲಿಕ್ಕೋಸ್ಕರ ಚೈನಾ ದೇಶದಿಂದ ಅಗತ್ಯತೆಗಿಂತ ಹೆಚ್ಚು ರೇಷ್ಮೆ ಕಳ್ಳ ಸಾಗಾಣಿಕೆ ಮೂಲಕ ಈ ರಾಷ್ಟ್ರಕ್ಕೆ ಬಂದು ನಮ್ಮ ಕೃಷಿಗೆ ದೊಡ್ಡ ಪೆಟ್ಟು ಬೀಳುತ್ತಿದೆ. ಕೃಷಿ ಮತ್ತು ರೇಷ್ಮೆ ಉದ್ಯಮದಲ್ಲಿ ಸುಮಾರು 30 ಲಕ್ಷ ಕುಟುಂಬಗಳು ಅದನ್ನು ನಂಬಿಕೊಂಡಿವೆ. ಆ ಕೃಷಿ ಉದ್ದಿಮೆ ವಿನಾಶದತ್ತ ಸಾಗುತ್ತಿದೆ ಎಂದು ನಾವೆಲ್ಲರೂ ಈ ಸದನದಲ್ಲಿ ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಮೂಲಭೂತವಾಗಿ ಕಚ್ಚಾ ರೇಷ್ಮೆಯನ್ನು ಚೈನಾದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಕಳ್ಳ ಸಾಗಾಣಿಕೆ ಮೂಲಕ ಬರುತ್ತಿದೆ, ಅದನ್ನು ನಿಲ್ಲಿಸುವುದಕ್ಕೆ ನಾವೆಲ್ಲರೂ ಇಲ್ಲಿ ಚರ್ಚೆ ಮಾಡಿದ್ದೇವೆ. ಆದರೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲಿಲ್ಲ. ಕಚ್ಚಾ ರೇಷ್ಮೆ ಆಮದು ಮಾಡಿಕೊಳ್ಳುತ್ತಿರುವುದರಿಂದ ರೇಷ್ಮೆ ಕೃಷಿಕರಿಗೆ ಅಷ್ಟೇ ತೊಂದರೆಯಾಗುತ್ತಿರುವುದು, ಉದ್ದಿಮೆಯಲ್ಲಿ ತೊಡಗಿರುವವರಿಗೆ ತೊಂದರೆಯಾಗಲಿಲ್ಲ. ರೇಷ್ಮೆ ಉದ್ದಿಮೆದಾರರಿಗೆ ಕಚ್ಚಾ ರೇಷ್ಮೆ ಏನು ಬೇಕಾಗುತ್ತಿತ್ತು ಅದು ದೊರಕಿ ಅನುಕೂಲವಾಗುತ್ತಿದೆ. ದುರಂತ ಏನೆಂದರೆ, ಅದು ರೇಷ್ಮೆ ಗೂಡನ್ನು ಬೆಳೆಯತಕ್ಕಂತಹ ರೈತರಿಗೆ ಇದರಿಂದ ತೊಂದರೆಯಾಗಿದೆ ಶೇಕಡ 70 ರಷ್ಟು ಈ ರಾಷ್ಟ್ರದ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಇದೆ. ಇದರಿಂದ ನಮ್ಮ ಬೆಳೆಗಾರರಿಗೆ ತೊಂದರೆಯಾಗುತ್ತಿದೆ. ಇವರಿಗೆ ಉಳಿಸತಕ್ಕಂತಹ ಕೆಲಸ ಮೊದಲನೆಯದಾಗಿ ಆಗಬೇಕಾಗಿದೆ. ಕಚ್ಚಾ ರೇಷ್ಮೆಯನ್ನು ಚೈನಾದಿಂದ ಕಡ್ಡಾಯವಾಗಿ ಏನು ತರಿಸುತ್ತಾರೆ ಅದು ಸಂಪೂರ್ಣವಾಗಿ ನಿಲ್ಲಬೇಕು. ಅದು ನಿಲ್ಲುವುದಕ್ಕೆ ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು, ಆಮದು ನೀತಿ ಮಾಡತಕ್ಕಂಥವರು ಕೇಂದ್ರ ಸರ್ಕಾರದವರು. ಅವರ ಮೇಲೆ ಯಾವ ರೀತಿಯ ಒತ್ತಡ ತರಬೇಕೆಂದು ನಾವು ಅದಕ್ಕೆ ಸನ್ನದ್ದರಾಗಬೇಕು. ಮಾನ್ಯ ರೇಷ್ಮೆ ಸಚಿವರು ನಮ್ಮೆಲ್ಲರನ್ನೂ ದೆಹಲಿಗೆ ನಿಯೋಗ ಕರೆದುಕೊಂಡು ಹೋಗಿ ಪ್ರಧಾನಿಯವರ ಮೇಲೆ ಒತ್ತಡ ತರತಕ್ಕಂಥದ್ದರ ಬಗ್ಗೆ ಕ್ರಮ ಜರುಗಿಸುತ್ತಾರೆಂದು ಹೇಳಿದ್ದಾರೆ ಸಂತೋಷ. ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬರಬೇಕಾಗುತ್ತದೆ. ರಾಜ್ಯ ಸರ್ಕಾರವೂ ಕೂಡ ಇದರ ಬಗ್ಗೆ ಜಾಗೃತವಾಗಿರಬೇಕಾಗುತ್ತದೆ. ಈ ಬಗ್ಗೆ ಮೂರು ಸಲಹೆಗಳನ್ನು ನಾನು ಕೊಡುತ್ತೇನೆ. ಕರ್ನಾಟಕದಲ್ಲಿ ರೇಷ್ಮೆ ಕೃಷಿಯನ್ನು ನಂಬಿಕೊಂಡಿರುವ ಕುಟುಂಬಗಳಿಗೆ ಬೇರೆ ವ್ಯವಸಾಯ ಗೊತ್ತಿಲ್ಲ. ಯಾವುದೋ ಒಂದು ದಿನ ಇದು ಸಂಪೂರ್ಣವಾಗಿ ನಾಶವಾದರೆ ಆ ಬೆಳೆ ನಂಬಿಕೊಂಡಿರುವ ಜನ ಈ ಕೃಷಿಯನ್ನು ಏನು ನಂಬಿಕೊಂಡಿದ್ದಾರೆ ಅವರಿಗೆ ಆ ಕುಟುಂಬಗಳಿಗೆ ಬಹಳ ತೊಂದರೆಯಾಗುತ್ತದೆ. ನಮ್ಮ ರಾಜ್ಯದ ಮಟ್ಟಿಗೆ ಮಾನ್ಯ ರೇಷ್ಮೆ ಸಚಿವರು ಬಹಳ ಉತ್ಸಾಹ ಉಳ್ಳವರಾಗಿದ್ದಾರೆ. ನಮ್ಮ ಬೆಳೆಗಾರರಲ್ಲಿ ರೇಷ್ಮೆ ಏನು ಬೆಳೆಯುತ್ತಿದ್ದಾರೆ, ಅವರಿಗೆ ರೋಗ ರಹಿತ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರದಿಂದ ಸಹಾಯ ಮಾಡಬೇಕಾಗುತ್ತದೆ. ಎರಡನೆಯದು, ರೈತರಿಗೆ ನೀರಾವರಿ ಸೌಲಭ್ಯ ಇಲ್ಲ. ಅವರು ಏನು ಹಿಪ್ಪುನೇರಳೆ ಬೆಳೆಯುತ್ತಾರೆ ಅವರಿಗೆ ನೀರಾವರಿ ಸೌಲಭ್ಯ ಇಲ್ಲ. ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ಕೊಳವೆಭಾವಿ ಕೊರೆಸಿ, ಪಂಪ್‌ಸೆಟ್ ಸೌಲಭ್ಯಗಳನ್ನು ಮಾಡಿ ನೀರಾವರಿ ಸೌಲಭ್ಯವನ್ನು ಸರ್ಕಾರ ಮಾಡಿಕೊಡಬೇಕಾಗುತ್ತದೆ. ಈ ರೇಷ್ಮೆ ಕೃಷಿಗೆ ಹೆಚ್ಚು ಹೆಚ್ಚು ಮಹಿಳೆಯರನ್ನು ತೊಡಗಿಸುವ ಕೆಲಸ ಮಾಡಬೇಕು. ರೇಷ್ಮೆಗೂಡು ಬೆಳೆಯತಕ್ಕಂತಹ ಸಂದರ್ಭದಲ್ಲಿ ಹೆಚ್ಚಿಗೆ ಕಾನ್‌ಸೆಂಟ್ರೇಷನ್ ಬೇಕಾಗಿರುವುದರಿಂದ ಹೆಚ್ಚು ಹೆಚ್ಚು ಮಹಿಳೆಯರಿಗೆ ಈ ಕೃಷಿಯಲ್ಲಿ ತೊಡಗಿಸುವುದಕ್ಕೋಸ್ಕರ ಅವರಿಗೆ ಹೆಚ್ಚು ತರಬೇತಿ ಕೊಡವ ಕೆಲಸ ಸರ್ಕಾರದ ಮಟ್ಟದಲ್ಲಿ ಮಾಡಬೇಕಾಗುತ್ತದೆ. ರೇಷ್ಮೆ

ಬೆಳೆಗಾರರು ಅವರ ಈ ಕೃಷಿಯನ್ನು ಅದರ ಗುಣಮಟ್ಟವನ್ನು ಹೆಚ್ಚು ಕಾಪಾಡುವುದಕ್ಕೆ ಸಾಲದ ಸೌಲಭ್ಯವನ್ನು ಏನು ಪಡೆಯುತ್ತಿದ್ದಾರೆ ಅದು ಪಡೆಯುವುದಕ್ಕಾಗುತ್ತಿಲ್ಲ. ಆ ಬ್ಯಾಂಕಿನ ಪ್ರೊಸೀಜರ್ ಎಷ್ಟು ಕಂಬರ್ಸಮ್ ಎಂದರೆ, ರೈತ ಅರ್ಜಿ ಕೊಟ್ಟರೆ ಅವರು ಸಾಲ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅಷ್ಟು ಹಿಂಸೆ ಕೊಡುತ್ತಾರೆ. ನಾನು ಒಂದು ಸಲಹೆ ಕೊಡುತ್ತೇನೆ, ಪ್ರತಿ ರೇಷ್ಮೆ ಬೆಳಗಾರರಿಗೆ ಒಂದು ಪಾಸ್ ಬುಕ್ ಕೊಡುತ್ತಾರೆ. ಆ ಪಾಸ್‌ಬುಕ್‌ನಲ್ಲಿ ಎಷ್ಟು ಗೂಡು ಬೆಳೆಯುತ್ತಾರೆ? ಎಷ್ಟು ಗೂಡನ್ನು ಮಾರುಕಟ್ಟೆಗೆ ಹಾಕುತ್ತಾರೆ? ಅವರಿಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದು ಸಂಪೂರ್ಣವಾದ ಮಾಹಿತಿ ಇರುತ್ತದೆ. ಅದರಿಂದ ಕಾಂಪ್ರೆಹೆನ್ಸೀವ್ ಡಾಕ್ಯುಮೆಂಟ್ ಇರತಕ್ಕಂತಹ ಪಾಸ್‌ಬುಕ್ ಆಧಾರದ ಮೇಲೆ ಬ್ಯಾಂಕಿನಲ್ಲಿ ಸಾಲದ ಸೌಲಭ್ಯ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ಈ ಎಲ್ಲಾ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳದೇ ಹೋದರೆ ಈ ಕೃಷಿ ಒಂದು ದಿವಸ ಸಂಪೂರ್ಣವಾಗಿ ನಾಶವಾಗತಕ್ಕಂಥದ್ದು ಖಚಿತ. ಆದ್ದರಿಂದ ದಯಮಾಡಿ ಮಾನ್ಯ ರೇಷ್ಮೆ ಸಚಿವರು ಈ ಬಗ್ಗೆ ಸಮಗ್ರವಾದ ಒಂದು ಕಾರ್ಯಕ್ರಮವನ್ನು ರೂಪಿಸುವುದರ ಜೊತೆಗೆ ರೈತರಿಗೆ ಕೃಷಿಯನ್ನು ಉಳಿಸಬೇಕಾದ, ಬೆಳೆಸಬೇಕಾದ ಹಾಗೂ ಕಾಪಾಡಬೇಕಾದ ಬಗ್ಗೆ ಸರ್ಕಾರದ ನಿಲುವು ಏನೆಂದು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಮಾನ್ಯ ರೇಷ್ಮೆ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುದ್ದಹನುಮೇಗೌಡರೂ ಸಹ ಸ್ವತಃ ರೇಷ್ಮೆ ಬೆಳೆಗಾರರು ಮತ್ತು ಬಿತ್ತನೆ ವಲಯದಿಂದ ಬಂದಿರತಕ್ಕಂಥವರು. ಅವರು ಕೊಟ್ಟಂತಹ ಮೂರು ಸಲಹೆಗಳಲ್ಲಿ ಮೊದಲನೆಯದಾಗಿ ವೇರಿಂಗ್ ಹೌಸ್ ಬಗ್ಗೆ ಈಗಾಗಲೇ 50 ಪರ್ಸೆಂಟ್ ಸಹಾಯಧನದ ಅಡಿಯಲ್ಲಿ ರೇಷ್ಮೆ ಬೆಳೆಗಾರರಿಗೆ ಮನೆಗಳನ್ನು ಕೊಡುತ್ತಿದ್ದೇವೆ. ಎರಡನೆಯದಾಗಿ ಡ್ರಿಪ್ ಇರಿಗೇಷನ್ ಬಗ್ಗೆ 90 ಪರ್ಸೆಂಟ್ ಸಹಾಯಧನ ಅಡಿಯಲ್ಲಿ ಅವರಿಗೆ ಹನಿ ನೀರಾವರಿಗೆ ಕೂಡ ಸೌಲಭ್ಯ ಕೊಡುತ್ತಿದ್ದೇವೆ. ಅವರಿಗೂ ಕೂಡ ಸಹಾಯ ಮಾಡುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ):- 90 ಪರ್ಸೆಂಟ್ ಮಹಿಳೆಯರಿಗೆ ಕೊಡುತ್ತಿದ್ದೇವೆ. ಯಾರು ಬಡತನ ರೇಖೆಯಿಂದ ಕೆಳಗೆ ಇರುವವರಿಗೆ ಕೂಡ 90 ಪರ್ಸೆಂಟ್ ಕೊಡಬೇಕೆಂದು ಆಗ್ರಹ ಮಾಡುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ:- ಅದರ ಬಗ್ಗೆ ಮಾನ್ಯ ಸದಸ್ಯರ ಕಾಳಜಿ ಬಹಳ ಇವೆ. ಅವರು ಮೊನ್ನೆ ಕೂಡ ಬಹಳ ಚೆನ್ನಾಗಿ ಹೇಳಿದ್ದಾರೆ. ಮಹಿಳೆಯರಿಗೆ ತರಬೇತಿ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ನಾವು ತರಬೇತಿಗಾಗಿ ಕಾರ್ಯಸೂಚಿಯನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಪಾಸ್‌ಬುಕ್ ಕೊಡುವ ವಿಷಯ, ರೇಷ್ಮೆ ಬೆಳೆಗಾರರಿಗೆ ಗೂಡು ತಂದು ಮಾರುಕಟ್ಟೆಗೆ ಹಾಕಿ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಮಾಹಿತಿ ಇರುವ ಒಂದು ಡಾಕ್ಯುಮೆಂಟ್ ವ್ಯವಸ್ಥೆ. ಅದನ್ನು ಉಪಯೋಗಿಸಿಕೊಂಡು ಆ ಡಾಕ್ಯುಮೆಂಟ್ ತೆಗೆದುಕೊಂಡು ನಾವು ಸಾಲ ಕೊಡುವಂತಹ ಸಲಹೆ ಕೊಟ್ಟಿದ್ದಾರೆ. ಅದನ್ನು ಸಂಬಂಧಪಟ್ಟ ಇಲಾಖೆಯವರ ಜೊತೆ ಚರ್ಚೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇದು ನಿಜವಾಗಿ ರೈತರಿಗೆ ಬೇಕಾಗುತ್ತದೆ. ಬ್ಯಾಂಕಿನವರು ಸರಿಯಾದ ರೀತಿಯಲ್ಲಿ ಸಹಾಯ ಕೊಡದೇ ಇರುವುದು ನಾವು ನೋಡುತ್ತಿದ್ದೇವೆ. ಮಾನ್ಯ ಸದಸ್ಯರ ಕಾಳಜಿ ಏನಿದೆ, ಅದಕ್ಕೆ ಸಹಮತ ಕೊಟ್ಟು ಪಾಸ್‌ಬುಕ್

ಅಡಿಯಲ್ಲಿ ಸಾಲ ಕೊಡುವ ಕ್ರಮವನ್ನು ಪರಿಶೀಲಿಸಿ ಸಹಾಯ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಕಚ್ಚಾ ರೇಷ್ಮೆ ಆಮದು ಮಾಡುವ ಬಗ್ಗೆ ನಾವು ಅದನ್ನು ಸಂಪೂರ್ಣವಾಗಿ ತಡೆಹಿಡಿಯಲಿಕ್ಕೆ ಹೋದರೆ ಆಗುವುದಿಲ್ಲ. ಮೂಲಭೂತ ಪ್ರಶ್ನೆ ಇರುವುದು ಅಲ್ಲಿ. ಅಗತ್ಯತೆಗಿಂತ ಹೆಚ್ಚು ರೇಷ್ಮೆ ಇವತ್ತು ಕಳ್ಳ ಸಾಗಾಣಿಕೆ ಮೂಲಕ, ಆಮದು ಶುಲ್ಕ ನೀಡುವುದರ ಮೂಲಕ ಚೈನಾದಿಂದ ಏನು ಬರುತ್ತಿದೆ ಅದನ್ನು ತಡೆಯಬೇಕು. ಕಡಿಮೆ ದರಕ್ಕೆ ಉತ್ತಮ ಕಚ್ಚಾ ರೇಷ್ಮೆ ಎಂದು ಏನು ಹೇಳುತ್ತಾರೆ ಅದರಿಂದ ನಮ್ಮ ದೇಶೀಯ ಮಾರುಕಟ್ಟೆ ಮೇಲೆ, ನಮ್ಮ ದೇಶೀಯ ಕೃಷಿ ಮೇಲೆ ದೊಡ್ಡ ಪೆಟ್ಟು ಬೀಳುತ್ತಿದೆ. ಅದನ್ನು ನಿಲ್ಲಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಮೂಲಭೂತವಾಗಿ ಅದನ್ನು ನಿಲ್ಲಿಸದೇ ಹೋದರೆ ಯಾವ ಸವಲತ್ತು ಕೊಟ್ಟರೂ ಈ ದೇಶದಲ್ಲಿ ಆ ಕೃಷಿ ಉಳಿಯುವುದಿಲ್ಲ. ಅದನ್ನು ನಿಲ್ಲಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ:- ಪ್ರಥಮವಾಗಿ ಈ ಆಮದು ನೀತಿಯಿಂದ ಈ ವ್ಯವಸ್ಥೆ ಸಂಕಷ್ಟದಲ್ಲಿದೆ. ಕಚ್ಚಾ ರೇಷ್ಮೆ ಬರುವುದು ನೇಪಾಳದ ಮೂಲಕ ಮತ್ತು ಬಾಂಗ್ಲಾ ದೇಶದ ಮೂಲಕ. ಕಾನೂನುಬದ್ಧವಾಗಿ ಬರತಕ್ಕಂಥದ್ದಕ್ಕಿಂತ ಹೆಚ್ಚಿಗೆ ಕಾನೂನು ಬಾಹಿರವಾಗಿ, ಅನಧಿಕೃತವಾಗಿ ಬರುವ ರೇಷ್ಮೆಯನ್ನು ನಿಲ್ಲಿಸುವುದಕ್ಕೆ ಕೇಂದ್ರದವರು ಹೆಚ್ಚು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾವು ನಮ್ಮ ಎನ್‌ಫೋರ್ಸ್‌ಮೆಂಟ್ ಅಡಿಯಲ್ಲಿ ಎಷ್ಟು ತಡೆಯ ಬೇಕಾಗುತ್ತದೆ ಅಷ್ಟು ತಡೆಯುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆಗೆ ರುಜು ಹಾಕದೇ ಇದ್ದರೂ ಕೂಡ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಋಣಿಯಾಗಿದ್ದೇನೆ. ರಾಜ್ಯದಲ್ಲಿ ರೇಷ್ಮೆ ಕೃಷಿ ಅವನತಿಯ ಅಂಚಿನಲ್ಲಿ ಸಾಗುತ್ತಿದೆ ಎನ್ನುವ ಆತಂಕವನ್ನು ವ್ಯಕ್ತಪಡಿಸಿ ನನ್ನ ಸ್ನೇಹಿತರು ಈ ಸದನದಲ್ಲಿ ಸರ್ಕಾರದ ಗಮನವನ್ನು ಸೆಳೆದಿರುವುದು ಅತ್ಯಂತ ಸೂಕ್ತವಾದುದು ಮತ್ತು ಸಮಂಜಸವಾದುದು ಎಂದು ನನ್ನ ಭಾವನೆ. ಅಪಾಯದ ಅಂಚಿಗೆ ಈ ಉದ್ಯಮ ಹೋಗುತ್ತಿದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಮೊದಲನೇ ಕಾರಣ ಬೆಲೆ ಕುಸಿತ ಇದೆ. ಯಾವ ಕೃಷಿ ಉತ್ಪನ್ನದ ಬೆಲೆ ಕುಸಿತವಾಗುತ್ತದೆ ಅಂತಹ ಕೃಷಿ ಬೆಳೆಯನ್ನು ರೈತ ನಾವು ಏನು ಮಾಡಿದರೂ ಬೆಳೆಯುವುದಿಲ್ಲ. ಬೆಳೆ ಹೋದರೆ ಬೆಲೆ ಕಡಿಮೆಯಾದರೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಇದನ್ನು ವೃದ್ಧಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ಕೃಷಿ ಬೆಳೆ ಉತ್ಪನ್ನ ವೃದ್ಧಿ ಆಗಬೇಕಾದರೆ ಬಹಳ ಉತ್ತಮವಾದ ಬೆಲೆ ಸಿಗಬೇಕು. ಉತ್ತಮವಾದ ಬೆಲೆ ಅಂತೂ ಇತ್ತೀಚಿನ ದಿನಗಳಲ್ಲಿ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಸ್ವಲ್ಪ ಮಟ್ಟಿಗೆ ಗುಣಮಟ್ಟ ಕಡಿಮೆ ಆದರೂ ಕೂಡ ಕೇಡುವ ಪರಿಸ್ಥಿತಿ ಇಲ್ಲ. ಇದು ಏಕೆ ಅಪಾಯದ ಅಂಚಿಗೆ ಹೋಗುತ್ತಿದೆ ಎಂದರೆ, ಹೊರ ದೇಶದಿಂದ ರೇಷ್ಮೆಯನ್ನು ಆಮದು ಮಾಡುವ ಒಂದು ಅನಿಷ್ಟ ಪದ್ಧತಿ ಇವತ್ತು ಬಂದಿದ್ದು ಅಲ್ಲ, ಸ್ವಾತಂತ್ರ್ಯ ಬರಲಿಕ್ಕೆ ಮೊದಲು ಬ್ರಿಟೀಷರ ಕಾಲದಲ್ಲಿ ಮಾಡುತ್ತಿದ್ದುದು. ಸ್ವಾತಂತ್ರ್ಯ ಬಂದ ಮೇಲೆ ನಮ್ಮನ್ನೇ ನಾವು ಆಳಿಕೊಳ್ಳುವ ಪರಿಸ್ಥಿತಿ ನಮಗೆ ಬಂದಾಗಲೂ ಕೂಡ ಹೊರ ದೇಶಗಳಿಂದ ರೇಷ್ಮೆ ಆಮದು ಮಾಡಿಕೊಂಡು ನಮ್ಮ ರೇಷ್ಮೆ

ಉತ್ಪಾದನೆಗೆ ನಾಲ್ಕು ಕಾಸು ಸಿಗುವಂತಹ ಪರಿಸ್ಥಿತಿಯನ್ನು ಹಾಳು ಮಾಡುವಂಥ ಕನಿಷ್ಟ ಪದ್ಧತಿಯನ್ನು ಎಲ್ಲಾ ಪಕ್ಷದ ಎಲ್ಲಾ ಕೇಂದ್ರ ಸರ್ಕಾರಗಳು ಮಾಡಿಕೊಂಡು ಬಂದಿವೆ.

3.40 ಪಿ.ಎಂ.

This can be verified. ಎಲ್ಲಾ ಪಕ್ಷದ ಎಲ್ಲಾ ಸರ್ಕಾರಗಳು ಎಲ್ಲಾ ಕಾಲದಲ್ಲಿಯೂ ಅದನ್ನು ಮಾಡಿಕೊಂಡು ಬಂದಿವೆ. ಅದಕ್ಕೇ ನಾನು ಇದೊಂದು ಅನಿಷ್ಟ ಪದ್ಧತಿ ಎಂದು ಕರೆಯುತ್ತಿದ್ದೇನೆ. ಈಗಂತೂ ಡಬ್ಲ್ಯೂ.ಟಿ.ಒ. ಆದ ಮೇಲೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವಂಥ ಬದಲಾವಣೆ ಏನಿದೆ ಈ ಬದಲಾವಣೆಗಳಿಂದಾಗಿ ಹೊರದೇಶದಿಂದ ಬರುವ ಕಚ್ಚಾ ರೇಷ್ಮೆಯನ್ನು ತಡೆಯುವುದಕ್ಕೆ ಆಗುತ್ತಾ ಇಲ್ಲ. ಇವರು ಏಕೆ ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ ಎಂದರೆ ನಮ್ಮಲ್ಲಿ ರೇಷ್ಮೆ ಕೊರತೆ ಇದೆ ಎಂದು ಹೇಳುತ್ತಾರೆ. ನಾನು ಈಗ ತಾನೇ ಅಧಿಕಾರಿಗಳನ್ನು ಕೇಳುತ್ತಿದ್ದೆ. What is your stock in your K.S.M.B. ಬಂದು. 200 ಮೆಟ್ರಿಕ್ ಟನ್, ಎಲ್ಲಿ ಕೊರತೆ ಇದೆ? ಯಾರು ಕೊರತೆ ಇದೆಯೆಂದು ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರಿಗೆ ಹೇಳಿದರು? ಇವರು ರಿಪೋರ್ಟ್ ಕೊಡುತ್ತಾರೆ, ಕಚ್ಚಾ ರೇಷ್ಮೆಯದು ಕೊರತೆ ಇದೆ ಎಂದು. ಆದುದರಿಂದ ಕೊರತೆ ಇಲ್ಲ, ನಾಳೆ ದುಡ್ಡು ಕೊಟ್ಟಿದೆ ಕೆ.ಎಸ್.ಎಂ. ನ ಎಂ.ಡಿ. ಯವರು ಇಲ್ಲಿಯೇ ಇದ್ದಾರೆ, ಅವರು ಎಷ್ಟು ಬೇಕಾದರೂ ಸಿಲ್ಕ್‌ನ್ನು ಕೊಡುತ್ತಾರೆ. ಇನ್ನು ಎರಡನೆಯ ಕಾರಣ ಏನು ಹೇಳುತ್ತಾರೆ ಎಂದರೆ, ನಮ್ಮದು ಗುಣಮಟ್ಟ ಇಲ್ಲ ಎನ್ನುತ್ತಾರೆ. ಇದರ ಬಗ್ಗೆ ವಾದ ಮಾಡುವುದಕ್ಕೆ ನನಗೆ ತಾವು ಕಾಲಾವಕಾಶ ಕೊಡುವುದಿಲ್ಲವೆಂದು ನನಗೆ ಗೊತ್ತು. ಭಾರತ ದೇಶದ ಜನಗಳಿಗೂ ಗುಣಮಟ್ಟ ಇಲ್ಲ ಎಂದು ಕೆಲವರು ಹೇಳುತ್ತಾರೆ. Can we afford to import. ಜಪಾನ್‌ನವರು ಬಹಳ ಪ್ರಾಮಾಣಿಕರಿದ್ದಾರೆ ಅಥವಾ ನಮ್ಮ ಗೌಡರು ಹೇಳಿದ ಹಾಗೆ ಇಸ್ರೇಲ್‌ನವರು ಬಹಳ ಪ್ರಾಮಾಣಿಕರು, ಬಹಳ ಚೆನ್ನಾಗಿದ್ದಾರೆ ಎಂದು ಜನಗಳನ್ನು ಹೊರದೇಶದಿಂದ ತರಿಸಿಬಿಡಿ. ಅದಲ್ಲ ನೀತಿ, ಅದಲ್ಲ ತತ್ವ, ಅದಲ್ಲ ಬುದ್ಧಿವಂತಿಕೆಯ ಲಕ್ಷಣ. ಬುದ್ಧಿವಂತಿಕೆಯ ಲಕ್ಷಣ ಯಾವುದಪ್ಪಾ ಎಂದರೆ, ಗುಣಮಟ್ಟ ನಮ್ಮದು ಕಡಿಮೆ ಇದ್ದರೆ ನಮ್ಮ ರೈತರಿಗೆ ಇನ್ಸೆಂಟೀವ್ಸ್ ಕೊಟ್ಟು, ಅವರಿಗೆ ಪ್ರೋತ್ಸಾಹವನ್ನು ಕೊಟ್ಟು ನಮ್ಮ ಗುಣಮಟ್ಟವನ್ನು ಅಪ್‌ಗ್ರೇಡೇಷನ್, ಕ್ವಾಲಿಟೇಟಿವ್ ಇಂಪ್ರೂವ್‌ಮೆಂಟ್ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೇ ಹೊರತು ನಮ್ಮ ಗುಣಮಟ್ಟ ಕಡಿಮೆ ಇದೆ, ನಮಗೆ ಕೊರತೆ ಇದೆ ಎನ್ನುವಂಥ ಕಾರಣ ಹೇಳಿ ಹೊರದೇಶದಿಂದ ಕಚ್ಚಾ ರೇಷ್ಮೆಯನ್ನು ತರಿಸಿಕೊಳ್ಳುವಂಥದ್ದು ಬುದ್ಧಿವಂತಿಕೆಯ ಲಕ್ಷಣವಲ್ಲ, ಈ ರೀತಿ ಮಾಡಿದರೆ ಈ ಉದ್ದಿಮೆಯನ್ನು ನಾಶ ಮಾಡುವುದಕ್ಕೆ ನಾಂದಿಯಾಗುತ್ತದೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ಈ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವಂಥ ಆಮೂಲಾಗ್ರ ಬದಲಾವಣೆಯಿಂದ ಹೊರ ದೇಶಗಳಿಂದ ಕಚ್ಚಾ ರೇಷ್ಮೆ ಏನು ಬರುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರ ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿಮಾಡಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. In view of the agreement already signed with W.T.O., it may be difficult for the State and Central Government to avoid import. Therefore, they have to levy maximum import duty. ಈ ಒಂದು ಕೆಲಸವನ್ನು ತಾವು ಖಂಡಿತವಾಗಿ

ಮಾಡಬಹುದು, ಅದನ್ನಾದರೂ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಹೇಳಿ ಸ್ವಾಮಿ, ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ, ನಾನು ಮತ್ತು ವಿರೋಧ ಪಕ್ಷದ ಪಕ್ಷದ ಸ್ನೇಹಿತರುಗಳೆಲ್ಲರೂ ಸೇರಿಕೊಂಡು ಪಾರ್ಲಿಮೆಂಟ್ ಮುಂದೆ ಈ ವಿಚಾರದಲ್ಲಿ ಸತ್ಯಾಗ್ರಹ ಕೂರೋಣ. ಬಹುಶಃ ನಿಮ್ಮ ಕ್ಷೇತ್ರದ ರೈತರ ಹಿತದೃಷ್ಟಿಯಿಂದ ನೀವು ಕುಳಿತುಕೊಂಡರೂ ಕೂಡ ತೊಂದರೆಯೇನೂ ಆಗುವುದಿಲ್ಲ. ಸುಮಾರು 32 ಕ್ಷೇತ್ರಗಳಲ್ಲಿ ನಿಮ್ಮದೂ ಸೇರಿದಂತೆ, ಉಪ್ಪು, ಮೆಣಸಿಗೆ ಇದೊಂದೇ ದಾರಿ ಇರುವುದು, ಬೇರೆ ದಾರಿಯೇ ಇಲ್ಲ. ಆದುದರಿಂದ I request my friends in the opposition, particularly those who belong to BJP to prevail on their Government at the Centre..

ಶ್ರೀ ಸಿ. ಭೈರೇಗೌಡ:- ನಾವು ದೆಹಲಿಗೆ ಡೆಲಿಗೇಷನ್ ಹೋಗಿದ್ದೆವಲ್ಲಾ ಆಗ ಏನು ನಡೆಯಿತು ಎನ್ನುವುದನ್ನು ಸ್ವಲ್ಪ ತಾವು ಜ್ಞಾಪಿಸಿಕೊಂಡರೆ ಒಳ್ಳೆಯದು.

ಶ್ರೀ ವೈ.ಕೆ. ರಾಮಯ್ಯ:- ಕುಳಿತುಕೊಳ್ಳಿ, ಕುಳಿತುಕೊಳ್ಳಿ ಸ್ವಾಮಿ, I have not forgotten, that is fresh in my mind. ನಾನು ಅದಕ್ಕೇ ಹೇಳಿದ್ದು, ಈ ಮಾತನ್ನು ಮಾನ್ಯ ಬೈರೇಗೌಡರು, ಮಾನ್ಯ ಸಿಂಧ್ಯಾರವರು ಹೇಳುತ್ತಾರೆ ಎಂದು ನನಗೆ ಗೊತ್ತಿತ್ತು. ಎಲ್ಲಾ ಪಕ್ಷದ ಎಲ್ಲಾ ಸರ್ಕಾರಗಳು ಈ ಅನಿಷ್ಟ ಪದ್ಧತಿಯನ್ನು ಮೊದಲಿನಿಂದಲೂ ಪರಿಪಾಲಿಸಿಕೊಂಡು ಬಂದಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸುಮ್ಮನೆ ನಾನು ಏನನ್ನೋ ಓದುತ್ತಾ ಕುಳಿತಿದ್ದೆ. ಹೀಗಿರುವಾಗ ಅವರು ನನ್ನ ಹೆಸರನ್ನು ಏಕೆ ತೆಗೆದುಕೊಳ್ಳಬೇಕಾಗಿತ್ತು? ಹೇಳಿ ಈಗ. ಆಕ್ಚುಯಲಿ, ಕಾಲಿಂಗ್ ಅಟೆನ್‌ಷನ್ ನೋಟೀಸ್ ಪ್ರಕಾರ ಇದು ಬಹಳ ಮಹತ್ವವಾದ ವಿಚಾರವಿತ್ತು. ಆದ ಕಾರಣ ನಾವು ಮಾತನಾಡುತ್ತಿದ್ದೇವೆ. ಈಗ ಅವರು ನಮ್ಮ ಹೆಸರನ್ನು ತೆಗೆದುಕೊಂಡಿರುವುದರಿಂದ ಅಧ್ಯಕ್ಷರಾದ ತಾವು ನನಗೂ ಮತ್ತು ಮಾನ್ಯ ಭೈರೇಗೌಡರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ:- ಅವರು ಬಿ.ಜೆ.ಪಿ. ಹೆಸರನ್ನು ತೆಗೆದುಕೊಂಡಿರುವುದರಿಂದ ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ವೈ.ಕೆ. ರಾಮಯ್ಯ:- ನನಗೆ ಅವೊತ್ತಿನ ಘಟನೆಯಲ್ಲಿ ಅಂದು ಇದ್ದಂಥ ಮಂತ್ರಿಗಳು ನಡೆದುಕೊಂಡಂಥ ರೀತಿ ಬಹುಶಃ ಅವರಿಗೆ, ನಮಗೆಲ್ಲರಿಗೆ ಇಡೀ ಜೀವನದಲ್ಲಿ ಎಂದೂ ಮರೆಯುವಂಥದ್ದಲ್ಲ. ಅದಕ್ಕೇ ನಾನು ಬಹಳ ಎಚ್ಚರಿಕೆಯಿಂದ ಮೊದಲೇ, ಎಲ್ಲಾ ಪಕ್ಷದ ಎಲ್ಲಾ ಸರ್ಕಾರಗಳೂ ಈ ದರಿದ್ರ ನೀತಿಯನ್ನು, ಅನಿಷ್ಟ ನೀತಿಯನ್ನು ಪರಿಪಾಲನೆ ಮಾಡಿಕೊಂಡು ಬಂದಿವೆ ಎಂದು ಹೇಳಿದೆ. ಆದುದರಿಂದ ನಾವು ಇದನ್ನು ಒಪ್ಪಿಕೊಂಡಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದರಿಂದ ಯಾವುದೇ ಪ್ರಯೋಜನ ಆಗುವುದಿಲ್ಲ. ಎಲ್ಲರೂ, ಎಲ್ಲಾ ಪಕ್ಷದವರು ಮಾಡಿದ್ದಾರೆ. ಇದಕ್ಕೆ ಪರಿಹಾರವೇನು ಎಂದರೆ, ನನಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದವರು ಮ್ಯಾಕ್ಸಿಮಮ್ ಇಂಪೋರ್ಟ್ ಡ್ಯೂಟಿಯನ್ನು ಹಾಕಿದರೆ ಆಗ ಮಾತ್ರ ಸ್ವಲ್ಪ ಕಚ್ಚಾ ರೇಷ್ಮೆ ಒಳಗಡೆ ಬರುವುದು ಕಡಿಮೆಯಾಗುತ್ತದೆ ಮತ್ತು ನಮ್ಮ ರೇಷ್ಮೆಗೆ ನಾಲ್ಕು ಕಾಸು ಸಿಕ್ಕವುದು ಜಾಸ್ತಿಯಾಗುತ್ತದೆ. ಇನ್ನು ಎರಡನೆಯದಾಗಿ, ಈ ರೇಷ್ಮೆ ಉದ್ಯಮ ಅಪಾಯದ ಅಂಚಿಗೆ ಹೋಗುತ್ತಿರುವುದಕ್ಕೆ ಕೇಂದ್ರ

ಸರ್ಕಾರ ಕಾರಣ ಎಂದು ಕೈ ತೋರಿಸಿ ನಾವು ಕೈ ಚೆಲ್ಲಿ ಕೂರುವ ಹಾಗೆ ಇಲ್ಲ ಸ್ವಾಮಿ. ಇವೊತ್ತು ರಾಜ್ಯ ಸರ್ಕಾರದ ಮೇಲೆ ಗುರುತರವಾದ ಜವಾಬ್ದಾರಿ ಇದೆ. ಅದು ಯಾವುದು ಎಂದರೆ ಇವತ್ತು ನಮ್ಮ ಉತ್ಪತ್ತಿಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಖಂಡಿತವಾಗಿ ಇದೆ. It is inevitable. You can't simply go on blaming the Central Government. We have to find out the ways and means to upgrade our quality. ಅದನ್ನು ಮಾಡುವುದಕ್ಕೆ ಸನ್ಮಾನ್ಯ ಸಚಿವರಿಗೆ ಹಾಗೂ ಸರ್ಕಾರದ ಗಮನ ಸೆಳೆಯುತ್ತಾ, ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ಒಂದು ದೃಷ್ಟಿಯ ಬಗ್ಗೆ ತಾವು ಗಮನ ಹರಿಸಿದ್ದೀರೋ, ಇಲ್ಲವೋ ನನಗೆ ಗೊತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ರೇಷ್ಮೆ ಮೊಟ್ಟೆಯ ಶೇಕಡಾವಾರು ಅಂಕಿ ಅಂಶಗಳನ್ನು ದಯಮಾಡಿ ತೆಗೆಸಿ ನೋಡಿ, ನಿಮ್ಮ ಊರಿನಲ್ಲಿ ಅದು ಶೇಕಡ 18ಕ್ಕೆ ಇಳಿದಿದೆ. It has been reduced to 18%. It was 36 in 1985-86. ರೇಷ್ಮೆ ಮೊಟ್ಟೆಯ ಗುಣಮಟ್ಟವನ್ನು ಹೆಚ್ಚಿಸದೇ ಇದ್ದರೆ ರೇಷ್ಮೆ ಗೂಡಿನ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯತೆ ಇಲ್ಲ. ಅದೇ ರೀತಿ ಸರ್ಕಾರ ಮೊಟ್ಟೆಯನ್ನು ಉತ್ಪತ್ತಿ ಮಾಡುತ್ತಿದ್ದು ಅದು ಒಂದು ಕಾಲಕ್ಕೆ 80 ಇತ್ತು, ಅದರೆ ಈಗ ಅದು 15ಕ್ಕೆ ಇಳಿದಿದೆ. ಯಾರಾದರೂ ಒಳ್ಳೆಯ ಅಧಿಕಾರಿಗಳಿದ್ದರೆ ಪರಿಶೀಲನೆ ಮಾಡಿಸಿ, ಸನ್ಮಾನ್ಯ ಮಂತ್ರಿಗಳು ಅತ್ಯಂತ ಗಂಭೀರವಾಗಿ ಈ ವಿಷಯದಲ್ಲಿ ಸಂಬಂಧಪಟ್ಟವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಬರೀ ಇಂಪೋರ್ಟ್‌ನಿಂದ ಒಂದೇ ಅಲ್ಲ ನಮ್ಮ ನಿರ್ಲಕ್ಷ್ಯದಿಂದಲೂ ಕೂಡ ಈ ರೇಷ್ಮೆ ಉದ್ಯಮ ನಾಶ ಆಗುವಂಥ ಅಪಾಯವಿದೆ. ಆದುದರಿಂದ ಕೇಂದ್ರ ಸರ್ಕಾರದವರು ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಲಿ, ರಾಜ್ಯ ಸರ್ಕಾರದವರು ದಯಮಾಡಿ in order to participate in the international market, let them take steps to upgrade the quality of silk.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ಶಿವಶಂಕರರೆಡ್ಡಿಯವರು ಮೊದಲೇ ನೋಟೀಸ್ ಕಳುಹಿಸಿದ್ದಾರೆ. ಅವರು ಈಗ ಮಾತನಾಡಲಿ. ನಿಮಗೂ ಅವಕಾಶ ಕೊಡೋಣ.

+ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಗೌರಿಬಿದನೂರು):- ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನನಗೆ ತಿಳಿದಂಥ ಕೆಲವಾರು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛಿಪಡುತ್ತಿದ್ದೇನೆ. ಈಗ ಚೈನಾದಿಂದ ಏನು ರೇಷ್ಮೆಯನ್ನು ಇಂಪೋರ್ಟ್ ಮಾಡಿಕೊಳ್ಳಲಾಗುತ್ತಿದೆ ಅದರಲ್ಲಿ ಕೇವಲ ಎರಡು ಪರ್ಸೆಂಟ್ ಮಾತ್ರ ಇಂಪೋರ್ಟ್ ಡ್ಯೂಟಿಗೆ ಒಳಪಡುತ್ತಿದೆ ಎಂದು ನನಗೆ ತಿಳಿದು ಬಂದ ಮಾಹಿತಿ ಪ್ರಕಾರ ಹೇಳುತ್ತಿದ್ದೇನೆ. ಕಳೆದ ಮಾರ್ಚ್‌ಗೆ ಸುಮಾರು 6780 ಮೆಟ್ರಿಕ್ ಟನ್ ಸಿಲ್ಕ್‌ನ್ನು ಇಂಪೋರ್ಟ್ ಮಾಡಿಕೊಂಡಿದ್ದು ಅದರಲ್ಲಿ ಶೇಕಡ ಎರಡು ಪರ್ಸೆಂಟ್‌ಗೆ ಮಾತ್ರ ಇಂಪೋರ್ಟ್ ಡ್ಯೂಟಿಯನ್ನು ಹಾಕಿದ್ದಾರೆ. ಸುಮಾರು 6600 ಮೆಟ್ರಿಕ್ ಟನ್ ಸಿಲ್ಕ್‌ಗೆ ಇಂಪೋರ್ಟ್ ಡ್ಯೂಟಿಯನ್ನು ಹಾಕಿಲ್ಲ. ಇದು ಕೆಲವಾರು ಕೇಂದ್ರ ಸರ್ಕಾರದ ಒಂದು ಪಾಲಿಸಿಗಳಿಂದ ಈ ರೀತಿಯಾಗಲು ಅವಕಾಶವಾಗಿದೆ ಎನ್ನುವ ವಿಚಾರ ನನಗೆ ಗೊತ್ತಾಗಿದೆ. ಈ ಒ.ಜಿ.ಎಲ್. ಸ್ಕೀಂ, ಈ ಏಳೆಂಟು ಸ್ಕೀಮ್‌ಗಳನ್ನು ಸೆಂಟ್ರಲ್ ಗೌವರ್ನಮೆಂಟ್ ಏನು ಮಾಡಿದೆ, ಅದರಲ್ಲಿ

ಇಂಪೋರ್ಟ್ ಡ್ಯೂಟಿ ಇಲ್ಲದೇ ಬರತಕ್ಕಂಥ ಅವಕಾಶ ಆಗಿದೆಯಾದ ಕಾರಣ ಇಲ್ಲಿ ಹೆಚ್ಚಿನ ಆಮದು ವಿತೌಟ್ ಡ್ಯೂಟಿಯಲ್ಲಿಯೇ ಕಳ್ಳತನದಲ್ಲಿ ಆಗದೇ ಇರುವುದಕ್ಕಿಂತ ಹೆಚ್ಚಾಗಿ ವಿತೌಟ್ ಡ್ಯೂಟಿ 98 ಪರ್ಸೆಂಟ್ ಬರುತ್ತಿದೆ ಎಂದು ಹೇಳಿ ಕೆಲವು ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಈ ಓ.ಜಿ.ಎಲ್. ಸ್ಕೀಂ ಕೇಂದ್ರ ಸರ್ಕಾರವನ್ನು ಮಾಡಿದ ಅದನ್ನು ನಿಲ್ಲಿಸತಕ್ಕಂಥದ್ದನ್ನು ಮಾಡಿದರೆ ಬಹುಶಃ ಇಂಪೋರ್ಟ್ ಡ್ಯೂಟಿಯನ್ನು ತಪ್ಪಿಸಿಕೊಂಡು ಬರುವ ಚೈನಾ ಸಿಲ್ಕ್ ಏನಿದೆ ಅದು ಕಡಿಮೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನು ವಿಶೇಷವಾಗಿ ಸಿಲ್ಕ್ ಎಕ್ಸ್‌ಪೋರ್ಟರ್ಸ್ ಏನಿದ್ದಾರೆ, ಈಗ ಸಿಲ್ಕ್ ಎಕ್ಸ್‌ಪೋರ್ಟರ್ಸ್‌ಗೆ ಒಂದು ಕೆ.ಜಿ. ಸಿಲ್ಕ್ ಬಟ್ಟೆಯನ್ನು ಎಕ್ಸ್‌ಪೋರ್ಟ್ ಮಾಡಿದರೆ 1.75 ರಾ ಸಿಲ್ಕ್‌ನ್ನು ಆಮದು ಮಾಡಿಕೊಳ್ಳುವುದಕ್ಕೆ ಏನು ಅವಕಾಶವಿದೆ ಇದು ಬರೀ ಸಿಲ್ಕ್ ಎಕ್ಸ್‌ಪೋರ್ಟರ್ಸ್‌ಗೆ ಮಾತ್ರ ಸೀಮಿತವಾಗಿಲ್ಲ. ಯಾವುದೇ ರೀತಿಯ ಪ್ರಾಡಕ್ಟ್ ನಮ್ಮ ದೇಶದಿಂದ ಎಕ್ಸ್‌ಪೋರ್ಟ್ ಮಾಡಿದರೆ ಅದಕ್ಕೆ ಅನುಗುಣವಾಗಿ ಸಿಲ್ಕ್‌ನ್ನು ತೆಗೆದುಕೊಂಡು ಬರತಕ್ಕಂಥ ಅವಕಾಶ ಕೇಂದ್ರ ಸರ್ಕಾರದ ಆಕ್ಟ್‌ನಲ್ಲಿ ಆಗಿದೆಯೆಂದೂ ಕೂಡ ನಾನು ಕೇಳಲ್ಪಟ್ಟಿದ್ದೇನೆ. ಇದರ ಬಗ್ಗೆಯೂ ಕೂಡ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಹೆಚ್ಚಿನ ಒತ್ತಡವನ್ನು ಮಾಡಬೇಕು. ಏಕೆಂದರೆ ರೇಷ್ಮೆ ಬಟ್ಟೆ ಒಂದೇ ಅಲ್ಲ, ಬೇರೆ ಯಾವುದೇ ಪ್ರಾಡಕ್ಟ್ ಕಳುಹಿಸಿದರೂ ಕೂಡ ಅದಕ್ಕೆ ಅನುಗುಣವಾಗಿ 1.5 ಕೆ.ಜಿ. ರಾ ಸಿಲ್ಕ್ ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಾನು ವಿಚಾರ ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು:- ಮಾನ್ಯ ಶಿವಶಂಕರರೆಡ್ಡಿಯವರೆ, ಈಗ ನಮ್ಮ ಕಾಲಿಂಗ್ ಅಟೆನ್‌ಷನ್ ರೂಲ್ಸ್ ಪ್ರಕಾರ ಎರಡೇ ಕ್ಲಾರಿಫಿಕೇಷನ್ ತಾವು ಕೇಳಬಹುದು.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ:- ಮಾನ್ಯ ಅಧ್ಯಕ್ಷರೆ, ಇನ್ನು ಎರಡೇ ನಿಮಿಷ. ಅಮೇಲೆ ಈ ಡಬ್ಲ್ಯೂ.ಟಿ.ಓ. ನಲ್ಲಿ ಆ್ಯಂಟಿ ಡಂಪಿಂಗ್ ಎನ್ನುವ ಆ್ಯಕ್ಟ್ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ 300 ಪರ್ಸೆಂಟ್ ಇಂಪೋರ್ಟ್ ಡ್ಯೂಟಿಯನ್ನು ಇಂಪೋಸ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಕೇಂದ್ರ ಸರ್ಕಾರ ಹೆಚ್ಚು ಇಂಪೋರ್ಟ್ ಡ್ಯೂಟಿಯನ್ನು ಇಂಪೋಸ್ ಮಾಡಬೇಕೆಂದು ಒತ್ತಾಯವನ್ನು ತರಬೇಕು. ಇನ್ನು ಶೆಡ್ಸ್ ವಿಚಾರದಲ್ಲಿ 50 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಸರ್ಕಾರ ಹಳಿ ಅದರ ಬಗ್ಗೆ ಜಿ.ಓ. ಕೂಡ ಆಗಿದೆ. ಆದರೆ ಇದುವರೆಗೂ ಕೂಡು ಶೆಡ್ಸ್‌ಗೆ 50 ಪರ್ಸೆಂಟ್ ಸಬ್ಸಿಡಿ ಸ್ಟೇಟ್ ಗೌವರ್ನಮಂಟ್ ರಿಲೀಸ್ ಮಾಡಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಬೇಗ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇನ್ನು ಕಡೆಯದಾಗಿ ಸರ್ಕಾರ ಮಾರ್ಕೆಟ್ ಇಂಟರ್ ವೆನ್‌ಷನ್ ಮಾಡಿ ಸಿಲ್ಕ್ ಪರ್ಚೇಸ್ ಮಾಡತಕ್ಕಂಥ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ, ನಾನು ಒಬ್ಬ ಬೆಳೆಗಾರನಾಗಿ ಬಹಳ ಸಿಟ್ಟಿನಿಂದ ಇವತ್ತಿನ ದಿವಸ ಮಾತನಾಡಬೇಕಾಗಿದೆ. ಕಾರಣವೇನೆಂದರೆ ಇವತ್ತು ಐವರು ಜಿಲ್ಲೆಗಳಲ್ಲಿ ಈ ಬೆಳೆ ಬಿಟ್ಟರೆ ಬೇರೆ ಬೆಳೆಯಿಂದ ಹಣ ಬರತಕ್ಕಂಥಾದ್ದು ಇಲ್ಲ. ನಮ್ಮ ಜಿಲ್ಲೆಯಲ್ಲಿ ಮೊದಲು ಬಂಗಾರ ಇತ್ತು, ನಂತರ ರೇಷ್ಮೆ ಮತ್ತು ಹಾಲು. ಈಗ ಬಂಗಾರ ನಾಪತ್ತೆಯಾಯಿತು. ಈಗ ಉಳಿದಿರತಕ್ಕಂಥಾದ್ದು ರೇಷ್ಮೆ ಮತ್ತು ಹಾಲು. ಹಾಲಿನ ವಿಷಯವನ್ನು ಇನ್ನೊಂದು ದಿವಸ

ಪ್ರಸ್ತಾಪ ಮಾಡುತ್ತೇನೆ. ಈಗಿರತಕ್ಕಂಥಾದ್ದು ರೇಷ್ಮೆ. ಇದರ ವಿಚಾರವಾಗಿ ಮಾನ್ಯ ವೈ.ಕೆ. ರಾಮಯ್ಯನವರು ಕೂಡ ಒಂದು ಮಾತು, 'ರಾಜ್ಯ ಸರ್ಕಾರ ಕೂಡ ತನ್ನ ಕರ್ತವ್ಯವನ್ನು ಮಾಡಬೇಕೆಂದು' ಹೇಳಿದರು. ಬೆಲೆ ಕಡಿಮೆ ಆಗುವುದಕ್ಕೆ ಯಾವಾಗ ಪ್ರಾರಂಭವಾಯಿತು ಎಂದರೆ, ಅದನ್ನು ಲೆಕ್ಕ ಹಿಡಿದರೆ ಇದು ಕೇಂದ್ರ ಸರ್ಕಾರದ ಮೇಲೆ ಕೈ ತೋರಿಸಿ ಕುಳಿತುಕೊಳ್ಳತಕ್ಕಂಥಾದ್ದು ಅಲ್ಲ. ಕೇಂದ್ರ ಸರ್ಕಾರದಲ್ಲಿ ಕೂಡ ಬಹಳ ದರಿದ್ರ ಲಾಭಿಗಳು ಇವೆ. ಈ ದೇಶವನ್ನು ಮುಳುಗಿಸುತ್ತಿರತಕ್ಕಂಥಾದ್ದು, ಈ ದೇಶಕ್ಕೆ ಆಪತ್ತು ಬರತಕ್ಕಂಥಾದ್ದು, ಹೊರದೇಶಗಳಿಗಿಂತ ಹೆಚ್ಚಿಗೆ ನಮ್ಮ ದೇಶದಲ್ಲಿ ಇರತ್ಕಂಥ ಲಾಭಗಳು. ಅದರಲ್ಲಿ ಕೂಡ ರೈತರುಗಳ ತಲೆ ಮೇಲೆ ಬಂಡೆ ಎಳೆಯತಕ್ಕಂಥ ಲಾಭ ಬನಾರಸ್ ಮತ್ತು ಬಾಂಬೆಯಲ್ಲಿ ಇದೆ. ಈ ಎರಡು ಲಾಭಗಳಿಗೆ ಒಳಪಟ್ಟು ಇವತ್ತಿನ ದಿವಸ ಹೊರಗಡೆಯಿಂದ ಶೇಕಡ 60 ರಷ್ಟು ಇದ್ದಂತಹ ಆಮದು ಶುಲ್ಕವನ್ನು ಶೇಕಡ 32ಕ್ಕೆ ಇಳಿಸಿರತಕ್ಕಂಥಾದ್ದು, ಆ ಲಾಭಗೆ ನೇರವಾಗಿ ಆರೋಪವನ್ನು ಮಾಡುವುದಕ್ಕೆ ಇಚ್ಛಿಪಡುತ್ತೇನೆ; ಮಾಡುತ್ತಿದ್ದೇನೆ. ಈ ಲಾಭಗೆ ಒಳಪಟ್ಟು ಈವತ್ತಿನ ದಿವಸ ಹೊರಗಡೆಯಿಂದ ಬರತಕ್ಕಂಥ ರೇಷ್ಮೆ ಬೆಲೆಗೆ ಇದ್ದಂತಹ ಆಮದು ಶುಲ್ಕವನ್ನು ಕಡಿಮೆ ಮಾಡಿರತಕ್ಕಂಥಾದ್ದು ಬನಾರಸ್ ಮತ್ತು ಬಾಂಬೆಯಲ್ಲಿ ಇರತಕ್ಕಂಥವರು ಕಾರಣ ಇದು ಏನೇನು ವ್ಯವಹಾರಗಳು? ಇದರಲ್ಲಿ ಒಳ ವ್ಯವಹಾರ ನಡೆದಿಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಒಳ ವ್ಯವಹಾರ ನಡೆದಿರುವ ಕಾರಣದಿಂದಲೇ ಇವತ್ತಿನ ದಿವಸ ಈ ಆಮದು ಶುಲ್ಕವನ್ನು ಕಡಿಮೆ ಮಾಡಿರತಕ್ಕಂಥಾದ್ದು ಎಂದು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ದೃಷ್ಟಿಯಲ್ಲಿ ಕೂಡ ರಾಜ್ಯ ಸರ್ಕಾರದಲ್ಲಿ ವ್ಯವಹಾರ ಇಲ್ಲವೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ವ್ಯವಹಾರ ಇಲ್ಲೂ ಕೂಡ ನಡೆದಿದೆ. ನೀವು ವಿವರ ತರಿಸಿ ನೋಡಿ, ಯಾವ್ಯಾವ ಕಾಲಕ್ಕೆ, ಯಾವ್ಯಾವ ತಿಂಗಳಿನಿಂದ ಯಾವತ್ತು ಬೆಲೆ ಕಡಿಮೆಯಾಯಿತು ಎಂದು. ಮೊದಲು ಒಂದು ತನಿಖಾ ದಳ ಇತ್ತು. ಆ ತನಿಖಾ ದಳವನ್ನು ಸ್ಥಗಿತಗೊಳಿಸಿದರು. ರೂಪಾಯಿ 150ಕ್ಕೆ ಒಂದು ಕೆಜಿ ಇದ್ದಂತಹ ರೇಷ್ಮೆ ಗೂಡು ಇವತ್ತು 50 ರಿಂದ 60 ರೂಪಾಯಿಗೆ ಇಳಿದಿದೆ. ಅವತ್ತೇ ಪ್ರಾರಂಭವಾಗಿರತಕ್ಕಂಥಾದ್ದು, ಅಂಕಿ ಅಂಶಗಳನ್ನು ಇಡಲಿ ಸರ್ಕಾರ. ಇವತ್ತಿನ ದಿವಸ ರಾಜ್ಯದ ರೈತರುಗಳು ತಿಳಿದುಕೊಳ್ಳಬೇಕಾಗಿದೆ. ನಿಮ್ಮ ವ್ಯವಹಾಗಗಳು ಏನು ಏನ್ನುವುದನ್ನು ಬಚ್ಚಿಡಬೇಕಾಗಿಲ್ಲ. ಇವತ್ತು ಜನ ತಿಳಿದುಕೊಳ್ಳಬೇಕಾಗಿದೆ. ಇವತ್ತು ಒಂದು ಕೆ.ಜಿ. ಗೂಡಿಗೆ ನೂರು ರೂಪಾಯಿ ಇಲ್ಲ ಎಂದರೆ ರೈತರು ಯಾವ ವಿಧದಲ್ಲಿ ಬದುಕಬೇಕು?

ಶ್ರೀ ಅಪ್ಪಾಜಿ ಎಸ್. ನಾಡಗೌಡ:– ಸನ್ಮಾನ್ಯ ಅಧ್ಯಕ್ಷರೆ, ಯಾವ ಆಧಾರದ ಮೇಲೆ ಅವರು ಈ ರೀತಿ ಮಾತನಾಡುತ್ತಿದ್ದಾರೆ?

ಅಧ್ಯಕ್ಷರು:– ಮಾನ್ಯ ಬೈರೇಗೌಡರೆ, ತಾವು ಏನು ಮಂತ್ರಿಗಳ ಮೇಲೆ ಅಲಿಗೇಷನ್ ಮಾಡುತ್ತಿದ್ದೀರಿ? ಅವರ ಮೇಲೆ ಆರೋಪ ಮಾಡಬೇಕಾದರೆ ಮೊದಲು ಬರೆದು ಕಳುಹಿಸಬೇಕು.

ಶ್ರೀ ಸಿ. ಬೈರೈಗೌಡ:– ಸ್ವಾಮಿ ನಾನು ಮಂತ್ರಿಗಳ ಹೆಸರು ಹೇಳಲಿಲ್ಲ. ಒಂದು ಸಾರಿ ಅಲ್ಲ, ನೂರು ಸಾರಿ ಹೇಳುತ್ತೇನೆ.

ಅಧ್ಯಕ್ಷರು:– ಯಾವುದೇ ಮಂತ್ರಿಗಳ ಮೇಲೆ ಅಲಿಗೇಷನ್ ಮಾಡಬೇಕಾದರೆ ಮೊದಲು ಬರೆದು ಕಳುಹಿಸಬೇಕು.

ಶ್ರೀ ಸಿ. ಬೈರೇಗೌಡ:- ಈಗಿರತಕ್ಕಂಥ ಮಂತ್ರಿಗಳು ಬಂದು ಇನ್ನು ಹದಿನೈದು ದಿವಸವಾಗಿದೆ. ಇವರ ಮೇಲೆ ಕೂಡ ನಾನು ಹೇಳುತ್ತಾ ಇಲ್ಲ. ಆದರೆ ಇದರಲ್ಲಿ ಆದುದರಿಂದ ಇವತ್ತಿನ ದಿವಸ ರಾಜ್ಯದಲ್ಲಿ ರೈತರು ರೇಷ್ಮೆ ಬೆಳೆಯನ್ನು ಕೀಳುತಿತ್ತದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆ ಮಾಡಲಿ ಬೇಕಾದರೆ... Let him give it in Writing.

ಶ್ರೀ ಸಿ. ಬೈರೇಗೌಡ:- ನೂರಾರು ಎಕರೆ ಇರತಕ್ಕಂಥ ಹಿಪ್ಪುನೇರಳೆಯನ್ನು ರೈತರು ಕಿತ್ತು ಹಾಕುತ್ತಿದ್ದಾರೆ. ಇವತ್ತು ವಿದ್ಯುತ್ ಅಭಾವ ಇದೆ.

ಅಧ್ಯಕ್ಷರು:- ಸಬ್ಜೆಕ್ಟ್ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ.

ಶ್ರೀ ಸಿ. ಬೈರೇಗೌಡ:- ವಿದ್ಯುತ್‌ಗೆ ಅಭಾವವಿದ್ದರೂ ಕೂಡ ಕಷ್ಟಪಟ್ಟು ಬೆಳೆದಿರತಕ್ಕಂಥ ಬೆಳೆಗೆ ಒಳ್ಳೆಯ ಬೆಲೆ ಇಲ್ಲದೇ ಇರುವಂತಹ ಕಾರಣದಿಂದ ರೈತರು ಹಿಪ್ಪುನೇರಳೆಯನ್ನು ಬುಡಸಮೇತ, ಯಾವ ರೀತಿ ನುಸಿ ರೋಗ ಬಂದು ತೆಂಗನ್ನು ಕಡಿದು ಹಾಕುತ್ತಿದ್ದಾರೆ. ಅದೇ ರೀತಿ ಹಿಪ್ಪುನೇರಳೆಯನ್ನು ಕಿತ್ತು ಬಿಸಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತಿನ ಈ ಭಾಗದ ರೈತರ ತಲೆ ಮೇಲೆ ಬಂಡೆ ಎಳೆಯುವಂತಹ ಕೆಲಸ ರಾಜ್ಯ ಸರ್ಕಾರದಿಂದ ಆಗುತ್ತಿದೆ ಹಾಗೂ ಕೇಂದ್ರ ಸರ್ಕಾರದಿಂದ ಕೂಡ ಆಗುತ್ತಿದೆ. ಮಾನ್ಯ ರಾಮಯ್ಯನವರು ಒಂದು ಮಾತು ಹೇಳಿದರು, ರಾಜ್ಯ ಸರ್ಕಾರದ ಜವಾಬ್ದಾರಿ ಇದೆ ಎಂದು ಹೇಳಿದರು.

ಅಧ್ಯಕ್ಷರು:- ನೀವು ಏನೇ ಅಲಿಗೇಷನ್ ಮಾಡಬೇಕಾದರೂ, ಮೊದಲು ಬರೆದು ಕಳುಹಿಸಬೇಕು.

ಶ್ರೀ ಸಿ. ಬೈರೇಗೌಡ:- ನಾನು ಯಾರ ಹೆಸರೆತ್ತಿ ಏನೂ ಹೇಳಲಿಲ್ಲ.

Mr. Speaker:- He has not made any allegation against anybody.

ಶ್ರೀ ಸಿ. ಬೈರೇಗೌಡ:- ಆದರೆ ನಡೆಯುತ್ತಿದೆ ಎಂದು ಮಾತ್ರ ಹೇಳಿದ್ದೇನೆ. ಮಾನ್ಯ ರಾಮಯ್ಯನವರು ಒಂದು ಮಾತು ಹೇಳಿದ್ದಾರೆ. ನಾನು ಅದನ್ನು ಪೂರ್ತಿಯಾಗಿ ಒಪ್ಪುತ್ತೇನೆ. ಇದರಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಕೂಡ ಇದೆ. ನೀವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಗೀಚಿ ಕಳುಹಿಸಿದ್ದೇವೆ ಎಂದರೆ ಅದನ್ನು ನಂಬಿಕೊಂಡು ಕುಳಿತಿರುವುದಕ್ಕೆ ಆಗುವುದಿಲ್ಲ. ರಾಜ್ಯ ಸರ್ಕಾರ ಕೂಡ ರೇಷ್ಮೆ ಬೆಳೆಗಾರರ ನೆರವಿಗೆ ಬರಬೇಕಾಗಿರತಕ್ಕಂಥಾದ್ದು ತುಂಬಾ ಅವಶ್ಯಕತೆ ಇದೆ. ನೀವು ಹೇಳಿ, ಬೆಲೆಯನ್ನು ನಿಗದಿಪಡಿಸಿ ಒಂದು ಕೆ.ಜಿ. 150 ರೂಪಾಯಿ ಕೊಡುತ್ತೇವೆಂದು ಒಪ್ಪಿಕೊಳ್ಳಿ. ನೀವು 18 ಅಥವಾ 19ನೇ ತಾರೀಖು ಒಂದು ನಿಯೋಗವನ್ನು ಕರೆದುಕೊಂಡು ಹೋಗುತ್ತೇವೆ ಎಂದರೆ ನಾವು ಬರುತ್ತೇವೆ. ನಾನೂ ಕೂಡ ಬರುವವನು ಇದ್ದೇನೆ. ಅಲ್ಲಿ ಹೋಗಿ ಅವರಿಗೆ ಏನು ಹೇಳಬೇಕು ಅದನ್ನು ಹೇಳೋಣ. ಆದರೆ ಮೊದಲು ನಿಮ್ಮ ಕರ್ತವ್ಯವನ್ನು ಮಾಡಬೇಕಾಗಿರತಕ್ಕಂಥಾದ್ದು ಅವಶ್ಯಕತೆ ಇದೆ. ನೀವು ನಿಮ್ಮ ಕರ್ತವ್ಯವನ್ನು ಮಾಡಿ. ಕೇಂದ್ರ ಸರ್ಕಾರದವರಿಗೂ ಕೂಡ ಅಲ್ಲಿಗೆ ಹೋದಾಗ ನಮ್ಮ ಕೆಲಸವನ್ನು ನಾವು ಮಾಡಿದ್ದೇವೆ, ನಿಮ್ಮ ಕೆಲಸವನ್ನು ನೀವು ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ ಎನ್ನುವುದನ್ನು ಅವರ ಮುಖಕ್ಕೆ ಹೇಳಿ ಬರೋಣ. ಯಾವ ಹಂತಕ್ಕೆ ಬೇಕಾದರೂ ರಾಜ್ಯ ಸರ್ಕಾರದ ಜೊತೆ ಈ ವಿಚಾರವನ್ನು

ಚರ್ಚೆ ಮಾಡುವುದಕ್ಕೆ ಸಹ ಕಲಿಸುವುದಕ್ಕೆ ನಾವು ತಯಾರಾಗಿದ್ದೇವೆ. ಒಂದು ಕೆ.ಜಿ. ಗೂಡಿಗೆ 150 ರೂಪಾಯಿ ನಿಗದಿಪಡಿಸಿ ಮತ್ತು ನಿಮ್ಮ ಫಿಲೇಚರ್ಸ್ ಏನಿವೆ ಅವು ಏನು ಕೆಲಸ ಮಾಡುತ್ತಿವೆ, ಅದನ್ನು ಅವರು ಕೊಂಡುಕೊಳ್ಳುವಂತಹ ವ್ಯವಸ್ಥೆ ಮಾಡಿ. ಆ ಗೂಡನ್ನಾದರೂ ಕೊಂಡುಕೊಂಡು ರೇಷ್ಮೆ ಮಾರುಕಟ್ಟೆಗೆ ಬರುವಂತಹ ವ್ಯವಸ್ಥೆ ಮಾಡಲಿ. ಹಾಗೆ ವ್ಯವಸ್ಥೆ ಮಾಡಿದಂತಹ ಕಾಲದಲ್ಲಿ ಬೆಲೆ ತನ್ನಷ್ಟಕ್ಕೆ ತಾನೇ ಜಾಸ್ತಿಯಾಗುತ್ತದೆ. ಮಾರ್ಕೆಟ್ ಪ್ರವೇಶ ಮಾಡುವಂಥಾದ್ದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿ. ಬೆಲೆ ತನ್ನಪಾಡಿಗೆ ಏರುತ್ತದೆ.

ಅಧ್ಯಕ್ಷರು:- ತಾವ್ಯಾರು ಸಿಗ್ನೇಚರ್ ಮಾಡಿಲ್ಲ. ಎಲ್ಲರೂ ಮಾತನಾಡಿ ನನ್ನದೇನು ಅಭ್ಯಂತರವಿಲ್ಲ.

ಶ್ರೀ ಸಿ. ಬೈರೇಗೌಡ:- ನೀವು ಯಾವುದನ್ನೂ ಕೂಡ ಮಾಡದೇ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿ ಹೇಳುವಂಥಾದ್ದು, ಈ ರಾಜ್ಯದ ರೇಷ್ಮೆ ಬೆಳೆಗಾರರ ತಲೆ ಮೇಲೆ ಬಂಡೆ ಎಳೆಯುತ್ತಿರುತಕ್ಕಂಥಾದ್ದು. ಮಾನ್ಯ ರಾಮಯ್ಯನವರು ಗುಣಮಟ್ಟದ ಬಗ್ಗೆ ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲೂ ಕೂಡ ಚೈನಾ ದೇಶದಲ್ಲಿ ಯಾವ ಗುಣಮಟ್ಟದ ರೇಷ್ಮೆ ಉತ್ಪಾದನೆಯಾಗುತ್ತಿದೆ ಅದೇ ಗುಣಮಟ್ಟದ ರೇಷ್ಮೆ ಉತ್ಪಾದನೆಯಾಗುತ್ತಿದೆ.

ಶ್ರೀ ವೈ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ನೀವು ಇದಕ್ಕೆ ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಅವರು ಮುಗಿಸುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ರೈತರ ಬಗ್ಗೆ ಹೇಳುತ್ತಿದ್ದಾರೆ ಏನು ಇದು....

(ಗೊಂದಲ)

ಅಧ್ಯಕ್ಷರು:- ಇಲ್ಲಿ ಯಾರು ಮಾತನಾಡಿದರೂ ರೆಕಾರ್ಡ್ ಮಾಡಬೇಡಿ.

(ಜನತಾದಳ ಶಾಸಕರುಗಳು ಧಿಕ್ಕಾರ ಎಂದು ಕೂಗುತ್ತಾ ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಎರಡು ನಿಮಿಷಗಳು ಮಾತನಾಡುತ್ತಾರೆ, ತಾವೆಲ್ಲರೂ ಸುಮ್ಮನಿರಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ರೇಷ್ಮೆ ಬೆಳೆಗಾರರ ಬಗ್ಗೆ ಕಳಕಳಿ ಇದೆ, ಇವತ್ತಿನ ದಿವಸ ಇವರು ಬಹಳ ಸಂಕಷ್ಟದಲ್ಲಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಸಮಯ ಕೊಡಿ, ಅವರು ಎರಡು ನಿಮಿಷಗಳು ಮಾತನಾಡಲಿ, ಮಾನ್ಯ ಮುದ್ದಹನುಮೇಗೌಡರೇ, ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ, ದಯಮಾಡಿ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ತಾವು ಪೂರ್ಣ ಪ್ರಮಾಣದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನನ್ನದು ಏನೂ ತಕರಾರು ಇಲ್ಲ, ನೀವು ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟು, ನಮಗೆ ಅವಕಾಶ ಕೊಡದಿದ್ದರೆ, ಅವರು ಹೇಳಿದ್ದೇ ಸರಿಯೆಂದು ಪತ್ರಿಕೆಗಳಲ್ಲಿ ಬರುತ್ತದೆ. ಆದುದರಿಂದ ತಾವು ಈ ವಿಷಯವನ್ನು ಪೂರ್ಣ ಪ್ರಮಾಣದಲ್ಲಿ ಚರ್ಚೆಗೆ ಅವಕಾಶ ಕೊಡುವುದಾದರೆ ನಾನು ಸಿದ್ಧನಾಗಿದ್ದೇನೆ, ಆ ರೀತಿ ಇಲ್ಲದಿದ್ದರೆ ಯಾರೂ ಮಾತನಾಡುವುದು ಬೇಡ.

ಅಧ್ಯಕ್ಷರು:- ನೋಡೋಣ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದೆರಡು ನಿಮಿಷಗಳು ಮಾತನಾಡಲಿ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಹಾಗಾದರೆ ನಮಗೂ ಮಾತನಾಡಲು ಅವಕಾಶ ಕೊಡಬೇಕು, ತಾವು ಯಾವ ನಿಯಮದಡಿಯಲ್ಲಿ ಅವಕಾಶ ಕೊಡುತ್ತೀರೋ ಕೊಡಿ. ನಾವು ಮಾತನಾಡುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮುದ್ದಹನುಮೇಗೌಡರೇ, ಕುಳಿತುಕೊಳ್ಳಿ, ಈ ಗಮನ ಸೆಳೆಯುವ ಸೂಚನೆಗೆ ಯಾವ್ಯಾವ ಸದಸ್ಯರು ರುಜು ಮಾಡಿದ್ದೀರೋ, ಅವರು ಎರಡು ಕ್ಲಾರಿಫಿಕೇಷನ್ ಕೇಳಬೇಕಾಗಿತ್ತು, ಇದು ಮುಖ್ಯವಾದ ವಿಷಯ, ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟದ್ದು, ಎಂದು ಅಲೋ ಮಾಡಿದೆ. ಈಗ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಎಷ್ಟು ಗಂಟೆಗಳು ಬೇಕಾದರೂ ಮಾತನಾಡಿ, ಈಗ ಈ ವಿಷಯ ಮುಕ್ತಾಯವಾಗಿದೆ.

(ಗೊಂದಲ)

ಅಧ್ಯಕ್ಷರು:- ಈಗ ಸದನದಲ್ಲಿ 15 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

(ಸದನವು 4.05 ಕ್ಕೆ ಮುಂದೂಡಲ್ಪಟ್ಟು, ಮತ್ತೆ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಸದನವು ಪುನಃ 5 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಜನತಾದಳದ (ಯು) ಮತ್ತು ಜನತಾದಳದ (ಎಸ್) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಇದ್ದರು)

(ಗೊಂದಲ)

ಅಧ್ಯಕ್ಷರು:- ನಾನು ಕರೆದಿರುವ ಸಭೆಯಲ್ಲಿ ಏನು ತೀರ್ಮಾನವಾಯಿತು ಎನ್ನುವುದನ್ನು ನಾನು ಸಭೆಗೆ ಹೇಳಬೇಕಲ್ಲಾ, ಮತ್ತೆ ಹಳೆಯದನ್ನು ಮಾತನಾಡಿಕೊಂಡು ಹೋದರೆ ಹೇಗೆ? ವಿರೋಧ ಪಕ್ಷದ ನಾಯಕರನ್ನು, ಚೀಫ್ ವಿಪ್‌ನ್ನು ಹಾಗೂ ಮಂತ್ರಿಗಳನ್ನು ಕರೆದು ಮಾತನಾಡಿದ್ದೇನೆ.

ಮಾನ್ಯ ರೇವಣ್ಣನವರೂ ಕೂಡ ಬಂದಿದ್ದರು, ನಾವು ಮಾತನಾಡಿದ ಪ್ರಕಾರ, ಆದರ ಬಗ್ಗೆ ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ ವೈ.ಕೆ. ರಾಮಯ್ಯನವರು ಎರಡೆರಡು ನಿಮಿಷ ಮಾತನಾಡುತ್ತಾರೆ.

(ಗೊಂದಲ)

ನಾನು ಮಾತನಾಡುವಾಗ ಏಕೆ ಮಧ್ಯೆದಲ್ಲಿ ಎದ್ದು ನಿಲ್ಲುತ್ತೀರಿ, ನಿಮಗೂ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

(Interruptions)

You please hear me. I will allow you.

(ಗೊಂದಲ)

ಒಳಗೆಡ ಎಲ್ಲಾ ತೀರ್ಮಾನವಾಗಿದೆ. ಮತ್ತೆ ನೀವು ಏಕೆ ಪ್ರಿಸಿಪಿಟೇಟ್ ಮಾಡುತ್ತಿದ್ದೀರಿ?

ಶ್ರೀ ಯು.ಆರ್. ಸಭಾಪತಿ:- ತೀರ್ಮಾನ ನಿಯಮಾವಳಿಗೆ ಬದ್ಧವಾಗಿರಬೇಕು.

(ಗೊಂದಲ)

ಅಧ್ಯಕ್ಷರು:- ಒಳಗಡೆ ಏನು ತೀರ್ಮಾನವಾಯಿತು ಎನ್ನುವುದನ್ನು ನಾನು ಹೇಳುವುದು ಬೇಡವೆ?

ಶ್ರೀ ಬಿ.ಆರ್. ನೀಲಕಂಠಪ್ಪ:- ಕಾಲಿಂಗ್ ಅಟೆನ್‌ಷನ್ ಕೊಟ್ಟ ಮೇಲೆ, ಅದರ ವಿರುದ್ಧ ಮಾತನಾಡುವುದು ಸದನಕ್ಕೆ ಅಗೌರವವಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಇದು ಮೊದಲನೆಯ ಸಲ ಅಲ್ಲ, ಅನೇಕ ಕ್ಲಿಷ್ಟ ಪರಿಸ್ಥಿತಿಯಲ್ಲಿ ವಿರೋಧ ಪಕ್ಷದವರನ್ನೂ ಹಾಗೂ ಆಡಳಿತ ಪಕ್ಷದವರನ್ನು ನಮ್ಮ ಕಛೇರಿಯಲ್ಲಿ ಕರೆದು ಎಲ್ಲರೂ ಅನ್ಯೋನ್ಯವಾಗಿ ಹೋಗಬೇಕೆಂದು ತೀರ್ಮಾನ ತೆಗೆದುಕೊಂಡಿದ್ದು ಇದೆ. ನಿಮ್ಮ ಕಡೆ ಯಾರ್ಯಾರು ಮಾತನಾಡಬೇಕು, ಮಾತನಾಡಿ I have no objection. ಜನರಲ್ಲಾಗಿ 69 ನಿಯಮಾವಳಿ ಪ್ರಕಾರ ಕಮೆನ್ಸ್ ಮಾಡುವ ಬಗ್ಗೆ ತೀರ್ಮಾನವಾಗಿದೆ. ದಯವಿಟ್ಟು ಧರಣಿಯಿಂದ ಹೋಗಿ.

(ಜನತಾದಳದ ಉಭಯ ಬಣಗಳವರು ಸದನದ ಬಾವಿಯಿಂದ ಬಂದರು)

+ಶ್ರೀ ಜಗದೀಶೇ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಈ ರೇಷ್ಮೆ ಬೆಳೆಗಾರರ ಸಮಸ್ಯೆಯ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಇವತ್ತು ಕರ್ನಾಟಕದಲ್ಲಿ ಏನು ಈ ರೇಷ್ಮೆ ಬೆಳೆಗಾರರ ಸಂಕಷ್ಟಗಳಿವೆ, ಇದು ಪ್ರತಿ ವರ್ಷ ಒಂದಲ್ಲ ಒಂದು ರೀತಿಯಲ್ಲಿ ಅವರು ಸಂಕಷ್ಟವನ್ನು ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದರಲ್ಲೂ ಮುಖ್ಯವಾಗಿ ಇಲ್ಲಿ ಈ ಒಂದು ಚೈನಾ ರೇಷ್ಮೆಯ ಬಗ್ಗೆ ಚರ್ಚೆಯಾದ ಪ್ರಕಾರ, ಇವತ್ತು ಅದು

ನಮ್ಮ ದೇಶಕ್ಕೆ ಇವತ್ತು ಏನು ಬರುತ್ತಿದೆ, ಒಂದು ಕಾನೂನು ಬದ್ಧವಾಗಿ ಬರಬೇಕೆನ್ನುವ ಬಗ್ಗೆ ಆಮದು ಶುಲ್ಕವನ್ನು ಅದರ ಮೇಲೆ ಹೆಚ್ಚು ಮಾಡಬೇಕೆನ್ನುವುದು ಒಂದು ವಾದವಾಗಿದೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ ಯಾವುದೋ ಕಾರಣಕ್ಕಾಗಿ ಈ ಒಂದು ಚೈನಾ ಸಿಲ್ಕ್ ನಮ್ಮ ದೇಶಕ್ಕೆ ಬರುತ್ತಿದೆ ಎನ್ನುವ ಮಾತು. ಇದರ ಬಗ್ಗೆ ಕೇಂದ್ರ ಸರ್ಕಾರವು ಸಹ ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು ಹಾಗೂ ರಾಜ್ಯ ಸರ್ಕಾರವೂ ಕೂಡ ಕ್ರಮ ಕೈಗೊಳ್ಳಬೇಕಾಗುತ್ತದೆ. ಇವತ್ತು ಆಮದು ಶುಲ್ಕವನ್ನು ಹೆಚ್ಚು ಮಾಡಬೇಕೆನ್ನುವುದು ಮತ್ತು ಕಳ್ಳತನದಿಂದ ಇವತ್ತು ಚೈನಾ ಸಿಲ್ಕ್ ನಮ್ಮ ದೇಶಕ್ಕೆ ಬರುತ್ತಿದೆ, ನಮ್ಮ ರಾಜ್ಯದೊಳಗೆ ಬರುತ್ತಿದೆ ಇದರ ಬಗ್ಗೆ ನಮ್ಮ ಕೇಂದ್ರ ಮತು. ರಾಜ್ಯ ಸರ್ಕಾರದ ಜವಾಬ್ದಾರಿ ಇದೆ. ಆದರೆ ನಾವು ಯಾವುದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮೇಲೆ ಗೂಬೆಯನ್ನು ಕೂರಿಸುವಂತಹದ್ದು ಆಗಬಾರದು. ಇವತ್ತು ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿ ಏನಿದೆ, ಅದನ್ನು ಕರ್ನಾಟಕದಲ್ಲಿ ಇವತ್ತು ರೇಷ್ಮೆ ಬೆಳೆಗಾರರು, ಕರ್ನಾಟಕದ ನಮ್ಮ ನಾಗರೀಕರು ಆ ರೈತರ ಸಂಕಷ್ಟಗಳನ್ನು ನಿವಾರಣೆ ಮಾಡುವಂತಹದು ಮೊದಲ ಅದ್ಯ ಕರ್ತವ್ಯವಾಗಿದೆ. ಅದರ ಬಗ್ಗೆ ರಾಜ್ಯ ಸರ್ಕಾರ ಏನು ಕ್ರಮವನ್ನು ಕೈಗೊಳ್ಳುತ್ತದೆ, ಇದರ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ನಾರು ಸರ್ವಪಕ್ಷಗಳ ನಾಯಕರುಗಳ ಇನ್ನಿತರ ಶಾಸಕರುಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಮಾನ್ಯ ಕೇಂದ್ರ ಸಚಿವರಾದ ಸ್ರೀ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಸಚಿವರಾಗಿ ಮೊನ್ನೆ ಜವಳಿ ಖಾತೆಯ ರಾಜ್ಯ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಅವರು ಮೊನ್ನೆಯ ದಿನ ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಪ್ರಥಮ ಬಾರಿಗೆ ಸಚಿವಸ್ಥಾನದಿಂದ ಪತ್ರಿಕಾಗೋಷ್ಠಿಯಲ್ಲಿ ಘೋಷಣೆಯನ್ನು ಮಾಡಿದ್ದಾರೆ. ಈ ಒಂದು ರೇಷ್ಮೆ ಆಮದು ಏನಿದೆ, ಅದರ ಮೇಲೆ ಹೆಚ್ಚಿನ ಒಂದು ಶುಲ್ಕವನ್ನು ಹೇರಲಿಕ್ಕೆ ಕೇಂದ್ರ ಸರ್ಕಾರದವರು ಏನು ಪ್ರಯತ್ನವನ್ನು ಮಾಡಬೇಕಾಗಿದೆ, ಅದರ ಬಗ್ಗೆ ಕೇಂದ್ರ ಸರ್ಕಾರವು ವಿಚಾರ ಮಾಡುತ್ತಿದೆ. ಈ ಆಮದು ಶುಲ್ಕವನ್ನು ನಾವು ಹೆಚ್ಚು ಮಾಡುವುದಕ್ಕೆ ನಾವೆಲ್ಲಾ ಪ್ರಯತ್ನವನ್ನೂ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿ ಆ ಒಂದು ಭರವಸೆಯನ್ನು ಅವರು ಇಲ್ಲಿ ಕೊಟ್ಟು ಹೋಗಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರವು ಆ ವಿಷಯದಲ್ಲಿ ಇವತ್ತು ಚಿಂತನೆಯನ್ನು ಮಾಡುತ್ತಿದೆ. ಇದರ ಬಗ್ಗೆ ಬಹುಶಃ ನನಗನ್ನಿಸುತ್ತದೆ, ಮಾನ್ಯ ಹಿರಿಯ ಶಾಸಕರಾದಂತಹ ವೈ.ಕೆ. ರಾಮಯ್ಯನವರು, ಇವತ್ತು ಯಾವುದೇ ಸರ್ಕಾರವಿರಲಿ, ಆ ಸರ್ಕಾರಗಳು ಈ ಒಂದು ಆಮದು ಶುಲ್ಕ, ಆಮದು ನೀತಿ, ಇದರ ಬಗ್ಗೆ ಹೆಚ್ಚು ಶುಲ್ಕವನ್ನು ಹೇರಬೇಕೆಂಬುದರ ಬಗ್ಗೆ ಯಾವುದೇ ಸರ್ಕಾರಗಳು ಮೊದಲಿನಿಂದಲೂ ಅದೇ ನೀತಿಯನ್ನು ಹಮ್ಮಿಕೊಂಡಿದೆ ಎಂದು ಹೇಳಿದರು. ನಾವು ವೈ.ಕೆ. ರಾಮಯ್ಯನವರಿಗೆ ಇವತ್ತು ಒಂದು ಮಾತನ್ನು ಹೇಳುವುದೆಂದರೆ, ಇವತ್ತು ಕೇಂದ್ರದಲ್ಲಿ ಇಲ್ಲಿಯವರೆವಿಗೆ ಆಡಳಿತ ಮಾಡಿರುವಂತಹ ಸರ್ಕಾರಗಳು ಏನು ಇದ್ದವು. ಅದು ಯಾವುದೇ ಪಕ್ಷದ ಸರ್ಕಾರಗಳಾಗಲಿ, ಯಾವುದೇ ಸರ್ಕಾರಗಳು ಆ ನೀತಿಯನ್ನು ಅನುಕರಣೆ ಮಾಡಿಕೊಂಡು ಬಂದಿದ್ದಾವೆ, ಎಲ್ಲಿ ತಪ್ಪಿದೆ ಎನ್ನುವಂತಹದನ್ನು ಹೇಳುವುದು. ಇವತ್ತು ಡಬ್ಲ್ಯೂಟಿಒ ಬಗ್ಗೆ ಹೇಳಬೇಕಾದರೆ, ಇದನ್ನು ಯಾರು ತೆಗೆದುಕೊಂಡು ಬಂದರು? ಇದಕ್ಕೆ ಅಗ್ರಿಮೆಂಟ್‌ಗೆ ಸಹಿ ಮಾಡಿರುವವರು ಯಾರು? ಹಿಂದೆ ಮಾಜಿ ಪ್ರಧಾನ ಮಂತ್ರಿಗಳಾದಂತಹ ಶ್ರೀ ಪಿ.ವಿ. ನರಸಿಂಹರಾಯರು ಕಾಲದಲ್ಲಿ ಈ ಡಬ್ಲ್ಯೂಟಿಒಗೆ ಸಹಿ ಆಗಿರುವಂತಹದ್ದು, ಹೀಗಾಗಿ ಅದೇ ಒಂದು ಆರ್ಥಿಕ ನೀತಿಯನ್ನು ಅನುಕರಣೆ

ಮಾಡುವುದು, ಮುಂದಿನ ಸರ್ಕಾರಗಳು ಅದೇ ಒಂದು ಕಟ್ಟಬದ್ಧತೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿರುವುದನ್ನು ನಾನು ಇಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ. ಇವತ್ತು ಯಾರ ಮೇಲೆಯೂ, ಕೇಂದ್ರ ಸರ್ಕಾರವೇ ಎಲ್ಲದಕ್ಕೂ ಜವಾಬ್ದಾರಿ ಎನ್ನುವಂತಹದ್ದು ಗೂಬೆ ಕೂರಿಸುವಂತಹ ಕೆಲಸ ಎಲ್ಲಿಯೂ ಆಗಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ರಾಜ್ಯ ಸರ್ಕಾರದವರು ತಕ್ಷಣವೇ ಇಲ್ಲಿ ಒಂದು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿದರೆ ಬಹುಶಃ ರೇಷ್ಮೆ ಬೆಳೆಗಾರರು ಏನು ಸಂಕಷ್ಟದಲ್ಲಿದ್ದಾರೆ, ಅದು ಕಡಿಮೆಯಾಗುವುದಕ್ಕೆ ಸಾಧ್ಯವಿದೆ. ಇದರ ಬಗ್ಗೆ ನಾವು ಹಿಂದೆ ನೋಡಿದ್ದೇವೆ, ಇವತ್ತು ಬೆಂಬಲ ಬೆಲೆಯಲ್ಲಿ ಹಲವಾರು ರೈತರು ಬೆಳೆದಂತಹ ಬೆಳೆಗಳಿಗೆ ಖರೀದಿಯನ್ನು ಮಾಡುವಂತಹ ಸಂದರ್ಭದಲ್ಲಿ ಇವತ್ತು ಮೆಕ್ಕೆ ಜೋಳವಿರಬಹುದು, ಆಲುಗಡ್ಡೆ, ಕೊಬ್ಬರಿ, ಬೇರೆ ಬೇರೆ ಐಟಂಗಳನ್ನು ನಾವು ಇವತ್ತು ಸರ್ಕಾರ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುತ್ತದೆ, ಆ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದು ಪ್ರಾರಂಭವಾಗುತ್ತದೆ, ಅದರ ಒಂದು ಬೆಲೆ ಏರುವುದಕ್ಕೆ ಚಾಲೂ ಆಗುತ್ತದೆ. ಈಗ ಆವರ್ತ ನಿಧಿಯನ್ನು ಮಾಡಿದ್ದೀರಿ, ಆ ಆವರ್ತನಿಧಿಯನ್ನು ಇದಕ್ಕೂ ಕೂಡ ಮಾಡಬೇಕಾಗಿದೆ. ಈ ಒಂದು ರೇಷ್ಮೆಗೂ ಕೂಡ ಬೆಂಬಲ ಬೆಲೆಯನ್ನು ಈ ಬೆಳೆಗೂ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುವುದಕ್ಕೆ ಪ್ರಾರಂಭ ಮಾಡಿ, ಇದರಿಂದ ಸಾಕಷ್ಟು ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯವಿದೆ. ಇವತ್ತು ಏನು ರೇಟ್ ಇದೆ, ಆ ರೇಟ್ ಉಳಿಯುವುದಿಲ್ಲ. ಇವತ್ತು ಸರ್ಕಾರ ಯಾವಾಗ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುತ್ತದೆಯೋ ಆ ತಕ್ಷಣ ಆ ಬದಲಾವಣೆಯನ್ನು ಕಾಣಲಿಕ್ಕೆ ಸಾಧ್ಯವಿದೆ. ಆ ರೇಷ್ಮೆ ಬೆಳೆಗಾರರಿಗೆ ರಾಜ್ಯ ಸರ್ಕಾರದವರು, ಇವತ್ತು ನಾವು ಡೆಲಿಗೇಷನ್‌ನ್ನು ತೆಗೆದುಕೊಂಡು ಹೊರಡುತ್ತೇವೆ, ಅದಕ್ಕಿಂತಲೂ ಮುಂಚೆ ನೀವು ಇವತ್ತು ಬೆಂಬಲ ಬೆಲೆಯಲ್ಲಿ ಈಗ ರೂಪಾಯಿ 150 ರೇಟನ್ನು ಹೇಳಿದರು, ಆ 150 ರೂ. ರೇಟ್‌ನಲ್ಲಿ ನೀವು ತಕ್ಷಣ ಒಂದಿಷ್ಟು ಹಣವನ್ನು ಕನಿಷ್ಟ ಪಕ್ಷ ಒಂದು ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿ ಇದನ್ನು ಖರೀದಿ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಬಹುಶಃ ಅದೊಂದು ರಿಲೀಫ್ ನಮ್ಮ ರೈತರಿಗೆ ತಕ್ಷಣ ಸಿಗುವುದಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಚೈನಾ ಸಿಲ್ಕ್ ಕಳ್ಳತನದಿಂದ ನಮ್ಮ ರಾಜ್ಯಕ್ಕೆ ಎಂಟ್ರಿ ಆಗುತ್ತಿದೆ, ಅಂತಹದಲ್ಲಿ ಬಿಗಿಯಾದ ಕಟ್ಟುನಿಟ್ಟು ಮಾಡತಕ್ಕದ್ದು ನಿಮ್ಮ ಕೈಯಲ್ಲಿದೆ. ಇವತ್ತು ದೇಶದ ಗಡಿಯಿಂದ ಬರುವಂತಹದು, ನಮ್ಮ ರಾಜ್ಯದ ಎಲ್ಲೆಲ್ಲಿ ಬೌಂಡರಿಗಳು ಇವೆ, ಯಾವ ಕಡೆಯಿಂದ ಅದು ಬರುತ್ತದೆ, ಅನಧಿಕೃತವಾಗಿ ಬರುತ್ತದೆನ್ನುವುದನ್ನು ಪತ್ತೆ ಹಚ್ಚಿ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಂಡರೆ ಬಹುಶಃ ಈ ಒಂದು ಸಮಸ್ಯೆಗಳು ಉದ್ಭವಿಸುವುದಿಲ್ಲ. ಹೀಗಾಗಿ ಆ ಕಳ್ಳತನದಿಂದ ಬರುವುದನ್ನು ತಾವು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದಕ್ಕಾಗಿ ಈ ಒಂದು ರಾಜ್ಯ ಸರ್ಕಾರ ಕೈಗೊಳ್ಳುವಂತಹದ್ದು ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗುತ್ತೇವೆ, ಅಲ್ಲಿ ಈ ಒಂದು ಆಮದು ಶುಲ್ಕದ ಹೆಚ್ಚಳದ ಬಗ್ಗೆ ಚರ್ಚೆಯನ್ನು ಮಾಡೋಣ. ಅಲ್ಲಿ ಕೇಂದ್ರ ಸರ್ಕಾರವನ್ನು ಎಲ್ಲರೂ ಒತ್ತಡವನ್ನು ತೆಗೆದುಕೊಂಡು ಒಂದು ಹೆಚ್ಚಿನ ಒಂದು ಆಮದು ಶುಲ್ಕವನ್ನು, ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ವೈ.ಕೆ. ರಾಮಯ್ಯನವರು ಮಾಹಿತಿಯನ್ನು ಕೊಡಬೇಕಾಗುತ್ತದೆ. ಹಿಂದೆ ಯಾವ ಯಾವ ಸಂದರ್ಭದಲ್ಲಿ ಈ ಒಂದು ಆಮದು ಶುಲ್ಕ ಎಷ್ಟೆಷ್ಟು ಇತ್ತು? ಯಾವ ಯಾವ ವರ್ಷದಲ್ಲಿ ಯಾವ ಯಾವ ಕೇಂದ್ರ ಸರ್ಕಾರಗಳಿತ್ತು?

ಅದರಲ್ಲಿ ಅಮದು ಶುಲ್ಕಗಳೆಷ್ಟು ಇತ್ತು? ಮ್ಯಾಕ್ಸಿಮಮ್ ಎಷ್ಟು ಇತ್ತು? ಎಷ್ಟು ಟೈಮ್ ಇದೆ, ಎನ್ನುವುದನ್ನು ಹೇಳಿದರೆ ನಾಳೆ ನಾವು ನಿಯೋಗದಲ್ಲಿ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಅದರ ಬಗ್ಗೆ ಅವರು ಹೆಚ್ಚಿನ ಬೆಳಕನ್ನು ಚೆಲ್ಲಿದರೆ ರೇಷ್ಮೆ ಬೆಳೆಗಾರರ ಸಮಸ್ಯೆಯ ಬಗ್ಗೆ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಹೇಳಿ, ರಾಜ್ಯ ಸರ್ಕಾರದವರು ಮಾಡುವಂತಹ ಕೆಲಸವನ್ನು ತಕ್ಷಣವೇ ಮಾಡಬೇಕು ಮತ್ತು ರೇಷ್ಮೆ ಬೆಳೆಗಾರರ ಒಂದು ಸಮಸ್ಯೆಯನ್ನು ಹುಡುಕಲಿಕ್ಕೆ ತಕ್ಷಣ ರಾಜ್ಯ ಸರ್ಕಾರವು ಮುಂದಾಗಬೇಕು, ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಬೇಕು, ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವಂತಹದ್ದು ಚಾಲು ಆಗಬೇಕು. ಕಳ್ಳತನದಿಂದ ಏನು ಬರುತ್ತಿದೆ ಅದು ನಿಲ್ಲಿಸುವಂತಹದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ರೈತರ ಸಮಸ್ಯೆಗಳಿಗೆ ಹಿರಿಯ ನಾಯಕರುಗಳು ಸ್ಪಂದಿಸಿದಂತಹ ರೀತಿಗೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. I really appreciate the concern of the Hon. Member Sri Byregowda regarding the problems faced by our farmers. ಆದರೆ ನಿಯಮಗಳನ್ನು ಗಾಳಿಗೆ ತೂರಿಸಿ ಆ ವಿಷಯವನ್ನು ಪ್ರಸ್ತಾಪ ಮಾಡಿರುವುದಕ್ಕೆ ನನ್ನದು ಸಹಮತವಿಲ್ಲ ವೆನ್ನುವಂತಹದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿರಿಯ ಸದಸ್ಯರಾದಂತಹ ಶ್ರೀ ಬೈರೇಗೌಡರು, ಶ್ರೀ ಸಿಂಧ್ಯರವರು, ಇವರೆಲ್ಲರೂ ಮಾತನಾಡುತ್ತಾರೆಂದರೆ ನಾನು ವಿಧಾನ ಸಭೆಯಲ್ಲಿ ಬಹಳ ಹೆಚ್ಚು ಗಾಂಭೀರ್ಯದಿಂದ ಕುಳಿತುಕೊಂಡು ಆ ವಿಷಯವನ್ನು ಕೇಳುತ್ತೇನೆ. ಏಕೆಂದರೆ ಅವರುಗಳು ಅನೇಕ ವಿಷಯಗಳ ಬಗ್ಗೆ ಚರ್ಚೆಯನ್ನು ಮಾಡಿ ಬೆಳಕನ್ನು ಚೆಲ್ಲುತ್ತಾರೆ ಎಂಬ ದೃಷ್ಟಿಯಿಂದ. ಅವರ ಅನುಭವದ ಹಿನ್ನಲೆಯಲ್ಲಿ ಅವರು ಸಭೆಯಲ್ಲಿ ನಡೆದುಕೊಳ್ಳುವಂತಹ ರೀತಿ, ಮಾರ್ಗಗಳನ್ನು ಕೂಡ ಸೂಕ್ಷ್ಮವಾಗಿ ಅವಲೋಕನ ಮಾಡುತ್ತೇವೆ. ಏಕೆಂದರೆ, ಅದನ್ನು ನಾವು ನೋಡಿ ಕಲಿಯಬೇಕು, ನನ್ನ ಮನಸ್ಸಿಗೆ ಬಹಳ ಬೇಜಾರಾಗಿರುವುದೇನೆಂದರೆ, ರೇಷ್ಮೆ ಬೆಳೆಗಾರರ ಸಂಕಷ್ಟ ಏನಿದೆ ಅದು ನಮ್ಮೆಲ್ಲರಿಗೂ ಆತಂಕವನ್ನು ತರುವಂತಹ ವಿಷಯವಾಗಿದೆ. ಇವತ್ತು ರೇಷ್ಮೆ ಬೆಳೆಯನ್ನು ಬೆಳೆಯುವಂತಹ ಪ್ರದೇಶಗಳು ಏನಿವೆ ಅಲ್ಲಿಯ ಜನಪ್ರತಿನಿಧಿಗಳು ಇವತ್ತು ನಿಜವಾಗಿಯೂ ಕೂಡ ಆ ವಿಷಯದ ಬಗ್ಗೆ ಬದ್ಧತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ನಾವೆಲ್ಲರೂ ಕೂಡ ರೇಷ್ಮೆ ಬೆಳೆಗಾರರ ಪರವಾಗಿ ಇದ್ದೇವೆ ಎನ್ನುವಂತಹ ಮಾತನ್ನು ಎಲ್ಲರೂ ಧೈರ್ಯವಾಗಿ ಯಾವುದೇ ಸಂದರ್ಭದಲ್ಲಾದರೂ, ಯಾವುದೇ ಪಕ್ಷದಲ್ಲಿದ್ದರೂ ಕೂಡ, ನಾವುಗಳು ಪಕ್ಷ ಬೇಧವನ್ನು ಮರೆತು ಅದನ್ನು ವ್ಯಕ್ತಪಡಿಸುತ್ತಿದ್ದೇವೆ. ಆ ಹಿನ್ನೆಲೆಯಲ್ಲಿ ನಾವು ಇವತ್ತು ಗಮನ ಸೆಳೆಯುವ ಸೂಚನೆಯ ಮೂಲಕ ಇವತ್ತು ಆ ವಿಷಯವನ್ನು ತಂದಿದ್ದೇವೆ. ತಾವು ಬಹಳ ಸಂತೋಷದಿಂದ ಎಲ್ಲಾ ಸದಸ್ಯರುಗಳಿಗೂ ಕೂಡ, ಅದರಲ್ಲಿ ರುಜು ಇಲ್ಲದೇ ಇರುವವರಿಗೂ ಕೂಡ ಮಾತನಾಡಲು ಅವಕಾಶ ಕೊಟ್ಟ ವಿಷಯಕ್ಕೆ ನೀವು ಗಾಂಭೀರ್ಯತೆಯನ್ನು ತಂದುಕೊಟ್ಟು ಮತ್ತು ಅದರ ಮಹತ್ವ ಎಷ್ಟಿದೆ ಎಂಬುದನ್ನು ತಾವು ತೋರಿಸಿದ್ದೀರಿ. ಆ ವಿಷಯವನ್ನು ನಾವು ಯಾವ ರೀತಿ ಪ್ರಸ್ತಾಪ ಮಾಡಿ, ಯಾವ ರೀತಿಯಾಗಿ ಸರ್ಕಾರದ ಮೇಲೆ

ಪ್ರಭಾವ ಬೀರಿದೆವು ಎನ್ನುವಂತಹ ವಿಷಯಕ್ಕೆ ಅದರ ಬಗ್ಗೆ ಮುಂದಿನ ವಿಷಯಕ್ಕೆ ತಮ್ಮ ಅವಗಾಹನೆಗೆ ಬಿಟ್ಟು, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬೈರೇಗೌಡರು ಅವರ ಸಂಪೂರ್ಣವಾದಂತಹ ಭಾಷಣದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ನಾನು ಮೂಲಭೂತವಾಗಿ ಇವತ್ತು ನಮ್ಮ ರಾಜ್ಯದಲ್ಲಿ ರೇಷ್ಮೆ ಕೃಷಿ ಈ ಅವನತಿಯ ಅಂಚಿಗೆ ಸಾಗುತ್ತಿದೆ ನಮಗೆ ಅಗತ್ಯತೆಗಿಂತ ಹೆಚ್ಚು ರೇಷ್ಮೆಯನ್ನು ಚೈನಾದಿಂದ ಕಳ್ಳ ಸಾಗಾಣಿಕೆಯ ಮೂಲಕ ನಮ್ಮ ರಾಷ್ಟ್ರಕ್ಕೆ ಹೇರುತ್ತಿರುವುದರಿಂದ ಇವತ್ತು ನಮ್ಮ ಬೆಲೆ ಏನಿದೆ, ನಮ್ಮ ಬೆಲೆಗಿಂತಲೂ ಕಡಿಮೆ ಬೆಲೆಗೆ ಉತ್ಕೃಷ್ಟವಾದಂತಹ, ಉತ್ತಮವಾದಂತಹ ರೇಷ್ಮೆ ಸಿಗತಕ್ಕಂತಹ ಪರಿಸ್ಥಿತಿ ಇವತ್ತು ಉದ್ದಿಮೆದಾರರಿಗೆ ಆಗಿರುವುದರಿಂದ ನಮ್ಮ ಬೆಳಗಾರರಿಗೆ ಅದರಿಂದ ಪೆಟ್ಟು ಬೀಳುತ್ತಿದೆ ಎನ್ನುವಂತಹ ವಾದವನ್ನು ನಾನು ಮಂಡಿಸಿದಾಗ ಅದಕ್ಕೆ ಅವರು ಸ್ಪಂದಿಸಲಿಲ್ಲ. ಇವತ್ತು ಎನ್‌ಡಿಎ ಸರ್ಕಾರದಲ್ಲಿ ಅವರೂ ಕೂಡ ಆ ಸರ್ಕಾರದಲ್ಲಿ ಭಾಗಿಯಾಗಿದ್ದು, ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವುದರ ಮೂಲಕ ಇವತ್ತು ರಾಜ್ಯ ಸರ್ಕಾರದ ಕ್ರಮಗಳು ಏನಿವೆ, ರಾಜ್ಯ ಸರ್ಕಾರ ಏನು ನಿಲುವು ತಾಳಿತು, ಬೆಂಬಲ ಬೆಲೆಯನ್ನು ಕೊಡುವುದು, ಬೆಳೆಗಾರರಿಗೆ ಯಾವ್ಯಾವ ರೀತಿಯಲ್ಲಿ ನೆರವಿಗೆ ಬರಬೇಕೆನ್ನುವುದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ನಮಗೆ ಸ್ವಾಗತವಿದೆ. ಅದೇ ರೀತಿಯಾಗಿ ಇವತ್ತು ಈ ಉದ್ದಿಮೆಯನ್ನು ಉಳಿಸತಕ್ಕಂತಹ ಕೆಲಸ ಆಗಬೇಕು. ಚೈನಾದಿಂದ ಬರತಕ್ಕಂತಹ ರೇಷ್ಮೆ ಏನು ಕಳ್ಳ ಸಾಗಾಣಿಕೆಯ ಮೂಲಕ ಬರುತ್ತಿದೆ ಅದನ್ನು ನಿಲ್ಲಿಸದೆ ಹೋದರೆ ಇವತ್ತು ಸಂಪೂರ್ಣವಾಗಿ ನಮ್ಮ ಕೃಷಿ ಹಾಳಾಗುತ್ತದೆ ಎನ್ನುವಂತಹ ಮಾತನ್ನು ಅವರು ಒಪ್ಪಿಕೊಳ್ಳಬೇಕಾಗಿತ್ತು. ಅದರ ಜೊತೆಗೆ ನಾನು...

ಶ್ರೀ ಸಿ. ಬೈರೇಗೌಡ:- ಅಧ್ಯಕ್ಷರೇ, he cannot administer sermons ನಾನು ಒಂದು ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು:- ಆ ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಿ. You please remove that one. It is removed. You can't talk like that. ಸೀನಿಯರ್ ಮೆಂಬರ್ ಆ ರೀತಿಯಾಗಿ ದಯವಿಟ್ಟು ಮಾತನಾಡಬೇಡಿ.

ಶ್ರೀ ಸಿ. ಬೈರೇಗೌಡ:- ನಾನು ಪ್ರಾರಂಭದಿಂದಲೇ ಕೇಂದ್ರ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂದು ಹೇಳಿದ್ದೇನೆ, ಅವರಿಗೆ ಕಿವಿ ಕೇಳಿಸದಿದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು:- ಮಾನ್ಯ ಬೈರೇಗೌಡರೆ, ಒಳ್ಳೆಯ ಪದಗಳು ಏನಿವೆ ಅದನ್ನು ಉಪಯೋಗಿಸಿ. ಆ ಪದವನ್ನು ಏತಕ್ಕಾಗಿ ಉಪಯೋಗಿಸುತ್ತೀರಿ? It has been removed from the records.

(ಗೊಂದಲ)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಬಹಳ ಗಂಭೀರವಾಗಿದೆ, ಅವರು ಇರಲಿ, ನಾವು ಇರಲಿ ಎಲ್ಲರೂ ಸೇರಿ ಏನು ಮಾಡಬೇಕೋ ಅದರ ಬಗ್ಗೆ ಒತ್ತಾಯವನ್ನು ತರಬೇಕು. ಅದನ್ನು ಬಿಟ್ಟು ಇದರಲ್ಲಿ ರಾಜಕೀಯವನ್ನು ಬೆರಸತಕ್ಕಂಥಾದ್ದು ಈ ಸರ್ಕಾರದ ಮೇಲೆ ಗೂಬೆ ಕೂರಿಸುವಂತಹ ಪ್ರಯತ್ನ

ಮಾಡುವುದು, ಇದರಲ್ಲಿ ರಾಜಕೀಯ ದುರುದ್ದೇಶವೇ ಇದೆಯೇ ಹೊರತು ಬೇರೇನೂ ಅಲ್ಲ. ಯಾರು ಎಲ್ಲಿ ತಪ್ಪು ಮಾಡಿದ್ದಾರೆ ಅವರು ಅರ್ಥವನ್ನು ಮಾಡಿಕೊಳ್ಳಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರು ಕಾಮ್ಸ್‌ರ್ಸ್ ಮಿನಿಸ್ಟರ್ ಆಗಿದ್ದಾಗ ಇದನ್ನು ಯೋಜನೆಗೆ ತಂದವರು ಅವರು. ಇದು ಮೊದಲು ನಿರ್ಬಂಧಿತ ವಸ್ತುಗಳಲ್ಲಿತ್ತು. ರಿಸ್ಟ್ರಿಕ್ಟೆಡ್ ಐಟಂ ಎಂದು ಹೇಳಿ, ಡಬ್ಲ್ಯೂಟಿಒ ಬಂದರೂ ಅದು ರಿಸ್ಟ್ರೀಕ್ಟೆಟ್ ಐಟಂ ಆಗಿತ್ತು. ಅದನ್ನು ಜಾರಿಗೆ ತಂದು ನಮ್ಮ ಎಕ್ಸೈಸ್ ಡ್ಯೂಟಿಯನ್ನು ಜಾಸ್ತಿ ಮಾಡಿರುವುದನ್ನು ತೆಗೆಯದೆ ಹೋದರೆ, ಇವತ್ತು ಅದಕ್ಕಾಗಿ ರೇಷ್ಮೆ ಬೆಳೆ ಕುಸಿದಿದೆ. ಅದಕ್ಕಾಗಿ ನಾವೆಲ್ಲರೂ ಒಟ್ಟಿಗೆ ಸೇರಿ ಹೋರಾಟ ಮಾಡಬೇಕಾಗಿದೆಯೇ ಹೊರತು ಇದರಲ್ಲಿ ರಾಜಕೀಯವನ್ನು ಮಿಕ್ಸ್ ಮಾಡಿಕೊಂಡು, ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕಾದರೆ ಎಲ್ಲರೂ ಅವರ ಹೃದಯವನ್ನು ಮುಟ್ಟಿಕೊಂಡು ನೋಡಿಕೊಳ್ಳಬೇಕು.

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ:- 3 ವರ್ಷಗಳಿಂದ ಡೆಲಿಗೇಷನ್ ಹೋಗುವುದಕ್ಕೆ ಆಗಿರಲಿಲ್ಲ. ಈ ವರ್ಷ ಮಾನ್ಯ ರೇವಣ್ಣನವರು ಏನು ಮಾಡುತ್ತಾರೆ. ರೈತರ ಬಗ್ಗೆ ಮಧ್ಯ ಪ್ರವೇಶ ಮಾಡಬೇಕು.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮುದ್ದಹನುಮೇಗೌಡರೆ, ತಾವು ಮಾತನಾಡಿ. ದಯವಿಟ್ಟು ಯಾರೂ ಮಧ್ಯ ಪ್ರವೇಶ ಮಾಡಬೇಡಿ. That is my request.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಮಾನ್ಯ ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು, ನಾನು ಹಿರಿಯ ಸದಸ್ಯರಾದಂತಹ ಮಾನ್ಯ ಬೈರೇಗೌಡರಿಗೆ ಪಾಠ ಹೇಳುವಂತಹ ದೊಡ್ಡ ಮನುಷ್ಯನಲ್ಲ. ಆದರೆ ನನ್ನ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತ ಮಾಡುವುದಕ್ಕೆ ನನಗೆ ಅಧಿಕಾರ ಇದೆ. ನಾನು ಈ ಸದನದ ಗೌರವಾನ್ವಿತ ಸದಸ್ಯನಾಗಿದ್ದೇನೆ, ಅವರ ಅಭಿಪ್ರಾಯ ಏನಿದ್ದರೂ ಅವರು ತಿಳಿಸಲಿ, ಆದರೆ ನಾನು ಮೊದಲೇ ಹೇಳಿದ್ದೇನೆ, ಅವರ ಹಿರಿತನಕ್ಕೆ, ಅವರ ಅನುಭವಕ್ಕೆ ಗೌರವವನ್ನು ಕೊಡುತ್ತಿದ್ದೇನೆ ಎನ್ನುವಂತಹದ್ದನ್ನು ದಯಮಾಡಿ ಅವರು ಅರ್ಥ ಮಾಡಿಕೊಳ್ಳಬೇಕು. ನಾನು ಇಷ್ಟು ವಿಷಯವನ್ನು ಹೇಳುತ್ತಿದ್ದೇನೆ, ಅವರಿಗೆ ಈ ರೇಷ್ಮೆ ಬೆಳೆಗಾರರ ಬಗ್ಗೆ ಕನಸರ್ನ್ ಇದೆ, ಅಷ್ಟೇ ಕನ್‌ಸರ್ನ್ ನನಗೂ ಕೂಡ ಇದೆ. ಇವತ್ತು ಕೇಂದ್ರದ ನೀತಿಯ ಬಗ್ಗೆ ನಾವೆಲ್ಲರೂ ಕೂಡ ಒಗ್ಗಟ್ಟಿನಿಂದ ಪಕ್ಷಾತೀತವಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹೇರಬೇಕೆನ್ನುವಂತಹದ್ದು ನನ್ನ ವಾದವಾಗಿದೆ. ಬಹುಶಃ ಅದಕ್ಕೆ ಅವರು ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಈ ಸಮಸ್ಯೆ ಮಾನ್ಯ ರೇವಣ್ಣನವರೂ ರೇಷ್ಮೆ ಸಚಿವರಾದಾಗ ಬರಲಿಲ್ಲ, ಮಾನ್ಯ ಮಹದೇವ್‌ರವರು ರೇಷ್ಮೆ ಸಚಿವರಾದಾಗ ಹುಟ್ಟಿಕೊಳ್ಳಲಿಲ್ಲ, ಈ ಸಮಸ್ಯೆಯು ಹತ್ತಾರ ವರ್ಷಗಳಿಂದಲೂ ಇದೆ. ಹಿಂದಿನ ಜನತಾದಳ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರು ಬೆಂಗಳೂರಿನಲ್ಲಿ ಸಮಾವೇಶವನ್ನು ಮಾಡಿ, ರೇಷ್ಮೆ ಬೆಳೆಗಾರರು ಕರ್ನಾಟಕದ ಪೋಲೀಸ್‌ನವರಿಂದ ಒದೆ ತಿಂದಿರುವುದನ್ನು ನಾವು ಮರೆತಿಲ್ಲ. ರೇಷ್ಮೆ ಬೆಳೆಗಾರರ ಯೋಜನೆ ಬಗ್ಗೆ ದಯಮಾಡಿ ಎಲ್ಲಾ ಸರ್ಕಾರದಿಂದಲೂ ನಡೆದಿದೆ, ಎಲ್ಲರೂ ಕೂಡ ನಾವು ಭಾಷಣಗಳನ್ನು ಮಾಡುತ್ತಲೇ

ಇದ್ದೇವೆ. ಆದರೆ ಪರಿಹಾರ ಸೂಚನೆ ಮಾಡತಕ್ಕಂತಹ ಸಂದರ್ಭದಲ್ಲಿ ರಾಜಕೀಯವನ್ನು ಬೆರಸಿ ಆ ರೈತನಿಗೆ ಯಾವುದೇ ನ್ಯಾಯ ಸಿಗದೆ ಇರುವಂತಹ ರೀತಿಯಲ್ಲಿ ನಾವು ಮಾಡಿಕೊಂಡು ಬಂದಿದ್ದೇವೆ. ಇನ್ನೂ ಕೂಡ ಸೂಕ್ತವಾದಂತಹ ಕಾಲವಿದೆ, ಎಲ್ಲರೂ ಕೂಡ ಈ ವಿಷಯದ ಗಾಂಭೀರ್ಯತೆಯನ್ನು ಅರ್ಥ ಮಾಡಿ ಕೊಂಡಿದ್ದಾರೆ. ಇವತ್ತು ಮೂಲಭೂತವಾಗಿರುವಂತಹ ಪ್ರಶ್ನೆ ಏನೆಂದರೆ, ರಾಜ್ಯ ಸರ್ಕಾರ ಕೊಡುತ್ತಿರುವಂತಹ ಸವಲತ್ತುಗಳ ಬಗ್ಗೆ ಮಾತನಾಡುವಂತಹದ್ದು ಬೇರೆ, ಆದರೆ ಮೂಲಭೂತವಾದಂತಹ ಸಮಸ್ಯೆಗಳು ಏನಿವೆ, ಈ ಆಮದು ನೀತಿ ಮತ್ತು ರೇಷ್ಮೆ ಆಮದು ಏನಿವೆ, ಅದರ ಬಗ್ಗೆ ನಾವೆಲ್ಲರೂ ಕೂಡ ಒಗ್ಗಟ್ಟಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹೇರಿ ಸಂಪೂರ್ಣವಾಗಿ ಅದನ್ನು ನಿಲ್ಲಿಸಿ ಇವತ್ತು ನಮ್ಮ ದೇಶಿಯ ಕೃಷಿ ನಮ್ಮ ದೇಶಿಯ ಉದ್ದಿಮೆ ಏನಿದೆ ಅದನ್ನು ಉಳಿಸತಕ್ಕಂತಹ ಕೆಲಸಕ್ಕೆ ನಾವೆಲ್ಲರೂ ಒಂದಾಗಬೇಕೆನ್ನುವಂತಹ ಮಾತನ್ನು ಹೇಳುತ್ತಾ ಮತ್ತೊಮ್ಮೆ ನನಗೆ 73ರ ನಿಯಮದಡಿಯಲ್ಲಿ ಅವಕಾಶ ಕೊಟ್ಟಿದ್ದಿರೋ ಅಥವಾ 69ರ ಅಡಿಯಲ್ಲಿ ಅವಕಾಶ ಕೊಟ್ಟಿದ್ದೀರೋ ಅದರ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಇಷ್ಟು ಅಭಿಪ್ರಾಯವನ್ನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ವಂದಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಉದ್ಯಮ ಅವನತಿಯ ದಾರಿಯನ್ನು ಹಿಡಿದಿರತಕ್ಕದ್ದು ನಮಗೆಲ್ಲರಿಗೂ ಸಹಿತ ಬಹಳ ಆತಂಕಕಾರಿಯಾಗಿರತಕ್ಕ ವಿಚಾರ. ರೇಷ್ಮೆ ಬೆಳೆಗಾರ, ರೇಷ್ಮೆ ನೂಲು ಬಿಚ್ಚತಕ್ಕವರು ಮತ್ತು ರೇಷ್ಮೆಯನ್ನು ನೇಯತಕ್ಕವರು ಈ ಮೂರು ಜನ ಸಹ ಬಹಳ ಸಂಕಷ್ಟಕ್ಕೆ ಸಿಕ್ಕಿಕೊಂಡಿರತಕ್ಕ ಸಂದರ್ಭದಲ್ಲಿ ಐತಿಹಾಸಿಕವಾಗಿರತಕ್ಕಂಥ ಈ ಕೈಗಾರಿಕೆ ಸಂಪೂರ್ಣವಾಗಿ ಒಂದು ರೀತಿಯಲ್ಲಿ ವಿನಾಶದ ಅಂಚಿನತ್ತ ಸಾಗಿದೆ. ಇಂತಹ ಸನ್ನಿವೇಶದಲ್ಲಿ ಇದರ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಬೇಕೆಂದು ಮಾನ್ಯ ಮುದ್ದಹನುಮೇಗೌಡರು, ಶ್ರೀ ಸಂಪಂಗಿಯವರು ಶ್ರೀ ಶಿವಶಂಕರರೆಡ್ಡಿ ಯವರು ಶ್ರೀ ಮುನಿನರಸಿಂಹಯ್ಯನವರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದಾರೆ. ತಾವು ಸಭೆಯ ನಿಯಮಾವಳಿಗಳನ್ನು ಸ್ವಲ್ಪ ಸಡಿಲಗೊಳಿಸಿ ತಾವು ಆ ಕ್ಷೇತ್ರಕ್ಕೆ ಸಂಬಂಧಪಟ್ಟ ವರಾಗಿರುವುದರಿಂದ, ಸ್ವತಃ ರೈತರಾಗಿರುವುದರಿಂದ, ರೇಷ್ಮೆ ಕೃಷಿಕರಾಗಿರುವುದರಿಂದ ವಿಷಯದ ಗಾಂಭೀರ್ಯತೆಯನ್ನು ಅರಿತು ಮಾನ್ಯ ವೈ.ಕೆ. ರಾಮಯ್ಯನವರಿಗೆ ಶ್ರೀ ಬೈರೇಗೌಡರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದ್ದೀರಿ. ನಾನು ಮಾನ್ಯ ಮುದ್ದಹನುಮೇಗೌಡರ ಒಂದು ಕಳಕಳಿಯನ್ನು ಮೆಚ್ಚುತ್ತೇನೆ. ಬಹಳ ಮುಖ್ಯವಾಗಿ ನಾವೀಗ ಮಾಡಬೇಕಾಗಿರತಕ್ಕದ್ದು ಒಂದು, ಕೇಂದ್ರ ಸರ್ಕಾರದಿಂದ ಕೆಲವು ಕೆಲಸಗಳನ್ನು ಮಾಡಿಸತಕ್ಕದ್ದು ಇದೆ. ಮತ್ತೆ ಕೆಲವು ಕೆಲಸಗಳನ್ನು ರಾಜ್ಯ ಸರ್ಕಾರವೇ ತಕ್ಷಣವೇ ಮಾಡತಕ್ಕದ್ದು ಇದೆ. ಈ ಬಗ್ಗೆ ವಸ್ತುಸ್ಥಿತಿಯನ್ನು ಅರಿಯಲಿಕ್ಕೆಂದು ಸುಮಾರು 15 ದಿವಸಗಳ ಹಿಂದೆ ಕೇಂದ್ರ ಸರ್ಕಾರದ ಸಚಿವ ಸಂಪುಟ ಬದಲಾವಣೆಯಾಗುವುದಕ್ಕೆ ಮುನ್ನಾ ಕೇಂದ್ರ ಸರ್ಕಾರದ ಜವಳಿ ಸಚಿವರನ್ನು ಕರೆಸಿ, ಕೇಂದ್ರದ ವಶದಲ್ಲಿರತಕ್ಕ ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರನ್ನು ಕರೆಸಿ, ನಮ್ಮ ಸರ್ಕಾರದ ಅಧಿಕಾರಿಗಳನ್ನು ಸಹ ಕರೆಸಿ, ರೇಷ್ಮೆ ಬೆಳೆಗಾರರ ಕ್ಲಬ್ ಏನಿದೆ ನಾವೆಲ್ಲಾ ಸೇರಿ ಬೆಂಗಳೂರು ಪುರಭವನದಲ್ಲಿ ಒಂದು ದಿನದ ಸಮಾವೇಶವನ್ನು ನಡೆಸಿ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ.

ಸರ್ಕಾರದಲ್ಲಿ ಖಾತೆಗಳ ಬದಲಾವಣೆ, ಸಚಿವ ಸಂಪುಟದ ಪುನರಚನೆ ಸಂದರ್ಭದಲ್ಲಿ ಮಾನ್ಯ ಮಹದೇವ್‌ರವರು ಆ ದಿನ ಬಂದಿರಲಿಲ್ಲ. ಅದು ಏನೇ ಇರಲಿ, ನಾನು ಒತ್ತಾಯ ಮಾಡತಕ್ಕದ್ದು ಏನು ಅಂದರೆ, ನಾವು ಧರಣಿ ಮಾಡತಕ್ಕ ಸ್ಥಿತಿಗೆ ಏಕೆ ಹೋಗಿದ್ದೇವೆಂದರೆ, ಈ ಸಮಸ್ಯೆ ಸುಮಾರು 70 ರಿಂದ 80 ಲಕ್ಷ ಜನರಿಗೆ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಸಂಬಂಧಪಟ್ಟಿರತಕ್ಕ ವಿಚಾರ, ಇತ್ತೀಚಿನ ದಿನಗಳಲ್ಲಿ ಬೀದರ್, ಬಿಜಾಪುರ, ಬಾಗಲಕೋಟೆ, ಕಲ್ಬುರ್ಗಿಯಲ್ಲೂ ಸಹ ರೇಷ್ಮೆ ಬೆಳೆಗಾರರು ಇದ್ದಾರೆ. ಅಲ್ಲಿಂದ ರೇಷ್ಮೆಗೂಡನ್ನು ರಾಮನಗರ, ಚನ್ನಪಟ್ಟಣ ಮತ್ತು ಕನಕಪುರಕ್ಕೆ ತೆಗೆದುಕೊಂಡು ಬರುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ನನಗೆ ಗೊತ್ತಿರುವ ಹಾಗೆ ಸುಮಾರು 500 ಕೋಟಿ ರೂ. ಗೂ ಹೆಚ್ಚು ಹಣವನ್ನು ವಿಶ್ವ ಬ್ಯಾಂಕ್ ಯೋಜನೆಯಿಂದ ಸಾಲವನ್ನು ತೆಗೆದುಕೊಂಡು ರೇಷ್ಮೆ ತಳಿಯನ್ನು ಅದರ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಮತ್ತೆ ಖರ್ಚನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಅಂತಹ ಯಶಸ್ಸನ್ನು ಇದುವರೆಗೂ ನಾವು ಕಾಣುವುದಕ್ಕೆ ಆಗಿಲ್ಲ. ಅದೇನೆ ಇರಲಿ, ತುರ್ತಾಗಿ ನಾವು ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ನಿಯೋಗವನ್ನು ತೆಗೆದುಕೊಂಡು ಹೋಗುತ್ತಿರತಕ್ಕದ್ದು ಒಂದು ಸ್ವಾಗತಾರ್ಹವಾದ ವಿಚಾರ. ನಾವೆಲ್ಲರೂ ಸೇರಿ ಪಕ್ಷಾತೀತವಾಗಿ ಆ ದೃಷ್ಟಿಯಲ್ಲಿ ಕೇಂದ್ರದಲ್ಲಿ ಮಾನ್ಯ ಕಾಮರ್ಸ್ ಮಿನಿಸ್ಟರ್‌ರವರನ್ನು, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಈವೊಂದು ಆಮದು ಶುಲ್ಕ ಏನಿದೆ ಅದನ್ನು ಹೆಚ್ಚು ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಒತ್ತಾಯವನ್ನು ಮಾಡಲೇಬೇಕಾಗುತ್ತದೆ. ಇದು ಮೊದಲನೆಯದು ಇದನ್ನು ಅವರು ಒಪ್ಪುತ್ತಾರೆನ್ನುವ ವಿಶ್ವಾಸ ನನಗಂತೂ ಇದೆ. ಎರಡನೆಯದಾಗಿ, ಆಂಧ್ರ ಪ್ರದೇಶದಲ್ಲಿ, ಮಧ್ಯ ಪ್ರದೇಶದಲ್ಲಿ, ತಮಿಳುನಾಡಿನಲ್ಲಿ ಇನ್ನೂ ಕೆಲವು ರಾಜ್ಯಗಳಲ್ಲಿ ಕಳ್ಳತನದಲ್ಲಿ ನೇಪಾಳದ ಮೂಲಕವಾಗಿ, ಬಾಂಗ್ಲಾದೇಶದ ಮೂಲಕವಾಗಿ ಬಂಗಾಳಕ್ಕೆ ಬರುತ್ತಿರತಕ್ಕ ಚೈನಾದೇಶದ ರೇಷ್ಮೆ ಏನಿದೆ ಅದನ್ನು ತಡೆಗಟ್ಟಲಿಕ್ಕೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಅಕ್ರಮವಾಗಿ ದಾಸ್ತಾನು ಮಾಡಿರತಕ್ಕ ರಾಜ್ಯಗಳ ಮೇಲೂ ಸಹ ಕೇಂದ್ರ ಸರ್ಕಾರವೇ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ, ಇದು ಆಗಬೇಕಾಗಿರತಕ್ಕ ಕೆಲಸ. ಅದನ್ನು ನಾವು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗಿರತಕ್ಕ ವಿಚಾರ. ಆಮದು ಶುಲ್ಕವನ್ನು ಹೆಚ್ಚು ಮಾಡಲಿಕ್ಕೆ ತೀವ್ರತರವಾದ ಒತ್ತಾಯವನ್ನು ಮಾಡಬೇಕಾಗುತ್ತದೆ. ನನಗೆ ತಿಳಿದಿರುವ ಹಾಗೆ ನಮ್ಮ ಕೃಷಿಕರಾದ, ರೇಷ್ಮೆ ಬೆಳೆಗಾರರಾದ ಮತ್ತೊಬ್ಬ ಸದಸ್ಯರು ಮಾನ್ಯ ಶ್ರೀನಿವಾಸಗೌಡರು ಹಾಗೆಯೇ ಮಾನ್ಯ ಬಚ್ಚೇಗೌಡರು ಒಂದು ಮಾತನ್ನು ಹೇಳಿದರು. ಆಂಧ್ರ ಪ್ರದೇಶದ ಸರ್ಕಾರದವರು ಚೈನಾದಿಂದ ಬರತಕ್ಕ ರೇಷ್ಮೆಯ ಮೇಲೆ ಕಣ್ಣನ್ನು ಇಟ್ಟಿದ್ದಾರೆ, ನಮ್ಮ ರಾಜ್ಯದಿಂದ ಹೋಗತಕ್ಕ ರೇಷ್ಮೆಯ ಮೇಲೂ ಕಣ್ಣನ್ನು ಇಟ್ಟು ಅವರು ಹದ್ದುಬಸ್ತಿನಿಂದ ಅಲ್ಲಿರತಕ್ಕ ರೇಷ್ಮೆ ಕಾನೂನನನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್‌ಮೆಂಟ್ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ತರಿಸಿ ಯಾವ ರೀತಿ ಮಾಡಿದ್ದಾರೆಂದು ತಿಳಿದುಕೊಳ್ಳಬೇಕು. ಮಾನ್ಯ ಸುರೇಶ್‌ಕುಮಾರ್‌ರವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದರು, ಅವರ ಹೆರಿಟೇಜ್ ಹಾಲು ಸಿಕ್ಕಾಪಟ್ಟೆ ರಾಜ್ಯಕ್ಕೆ ಬಂದು ನಮ್ಮ ಹಾಲನ್ನು ಹಾಳು ಮಾಡಿದೆ. ಇನ್ನು ಸಿಲ್ಕ್‌ನ್ನು ಸಹ ಹಾಳು ಮಾಡುವುದಕ್ಕೆ ಹೊರಟಿದ್ದಾರೆ. ನಮ್ಮ ಸಿಲ್ಕ್‌ನ್ನು ಕೊಳ್ಳುವುದಿಲ್ಲವೆಂದರೆ ಅದರ ಅರ್ಥವೇನು? ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕು. ನೆರೆ ರಾಜ್ಯವಾದ ಆಂಧ್ರದವರ ಜೊತೆ ಇದರ ಬಗ್ಗೆ ಸಮಾಲೋಚನೆ ಮಾಡಬೇಕೆನ್ನುವ ಮಾತನ್ನು

ಸಹ ಹೇಳುತ್ತೇನೆ. ಬಹಳ ಮುಖ್ಯವಾಗಿ ಮಾನ್ಯ ಮಹದೇವ್‌ರವರು ರೇಷ್ಮೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಎನ್‌ಫೋರ್ಸ್‌ಮೆಂಟ್ ಲಾ ಅನ್ನು ಎನ್‌ಫೋರ್ಸ್ ಮಾಡತಕ್ಕದ್ದನ್ನು ಸಿರಿಕಲ್ಚರ್ ಲಾ ಅನ್ನು ಎನ್‌ಫೋರ್ಸ್ ಮಾಡತಕ್ಕದ್ದನ್ನು ತಾತ್ಕಾಲಿಕವಾಗಿ ನಿಲುಗಡೆ ಮಾಡಿರತಕ್ಕದ್ದು ನಿಜ. ಇದು ವಾಸ್ತವಾಂಶ. ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಕಡತದ ಮೇಲೆ ಸಹಿ ಹಾಕಿ ತಾತ್ಕಾಲಿಕವಾಗಿ ರದ್ದುಮಾಡಿರತಕ್ಕದ್ದು ನಮಗೂ ನಿಮಗೂ ತಿಳಿದಿರತಕ್ಕ ವಿಚಾರ. ಇದನ್ನು ಮುಚ್ಚಿಟ್ಟುಕೊಳ್ಳುವುದರಲ್ಲಿ ಅರ್ಥವೇನೂ ಇಲ್ಲ. ಆ ರೀತಿ ಆಗಬಾರದು. ಎನ್‌ಫೋರ್ಸ್‌ಮೆಂಟ್ ಸ್ಟ್ರಿಕ್ಟ್ ಆಗಿ ಆಗಬೇಕು. ಆಕ್ಟ್ ಅಮೆಂಡ್‌ಮೆಂಟ್ ಆಗಬೇಕೆನ್ನುವುದನ್ನು ನಾನು ಸಹ ಒಪ್ಪುತ್ತೇನೆ. ರೇಷ್ಮೆ ಬೆಳೆಗಾರರು ಸಹ ಅದನ್ನೇ ಹೇಳುತ್ತಾರೆ. ಅವೊತ್ತಿನಿಂದ ರೇಟ್ ಕಡಿಮೆಯಾಗಿರುವುದು ನಮಗೆ ಗೊತ್ತಿರುವ ವಿಚಾರ. ಇವತ್ತು ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಶಾಸಕರ ಮತ್ತು ರೇಷ್ಮೆ ಬೆಳೆಗಾರರ ಸಭೆಯನ್ನು ಹಿಂದಿನ ಮಂತ್ರಿಗಳು ಕರೆದಿದ್ದರು. ಯಾವ ಕಾರಣದಿಂದಲೋ ಏನೋ ಆ ಸಭೆ ಅವೊತ್ತು ಯಶಸ್ವಿಯಾಗಿ ನಡೆಯಲಿಕ್ಕೆ ಆಗಲಿಲ್ಲ. ದಯವಿಟ್ಟು ಅದನ್ನು ಮಾಡಿ. ಕೇಂದ್ರ ಸರ್ಕಾರ ಕೆಲವು ಸೂಚನೆಗಳನ್ನು ಕಳುಹಿಸಿದ್ದಾರೆ. ಸೆಂಟ್ರಲ್ ಸಿಲ್ಕ್ ಬೋರ್ಡ್ ಮೂಲಕ ಸಹ ಕಳುಹಿಸಿದ್ದಾರೆ. ಅದರ ಬಗ್ಗೆ ಬೆಳೆಗಾರರಿಗೆ ಉಪಯೋಗವಾಗುವ ರೀತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡಬೇಕೋ ಅದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈಗ ಬಹಳ ಮುಖ್ಯವಾಗಿ ಫಿಲೇಚರ್‌ಗಳು ಏನಿವೆ ಅವುಗಳನ್ನು ಕ್ಲೋಸ್ ಮಾಡಬೇಕೆಂದು ಅವರೂ ಸಹ ತಮ್ಮನ್ನು ಬಂದು ಭೇಟಿ ಮಾಡಿದ್ದಾರೆ. ಫಿಲೇಚರ್‌ಗಳಲ್ಲಿ ಸಂಬಳ ಕೊಡಲಿಕ್ಕೆ ಆಗುತ್ತಿಲ್ಲವೆನ್ನುವ ಮಾತನ್ನು ನಾವು ಕೇಳಿದ್ದೇವೆ. ಮತ್ತೆ ಅಲ್ಲಿರತಕ್ಕವರಿಗೆ ಕೆಲಸ ಸಹ ಇಲ್ಲ. ಈ ಫಿಲೇಚರ್‌ಗಳ ಮೂಲಕ ನೀವು ಮಾರ್ಕೆಟ್ ಇಂಟರ್‌ವೆನ್ಷನ್ ತಕ್ಷಣ ಮಾಡಲಿಕ್ಕೆ ಬ್ಯಾಂಕಿನಿಂದ 5 ಕೋಟಿ, 10 ಕೋಟಿ ರೂಪಾಯಿಗಳ ಸಾಲವನ್ನು ಕೊಡಿಸತಕ್ಕಂತಹ ಕೆಲಸ ಮಾಡಿದರೂ ಸಹಿತ ಅವರು ತಕ್ಷಣ ನಾಳೆಯಿಂದ ಕಕ್ಕೂನ್ ಮಾರ್ಕೆಟ್‌ಗಳಲ್ಲಿ ಅದು ರಾಮನಗರ ಇರಬಹುದು, ಚನ್ನಪಟ್ಟಣ ಇರಬಹುದು, ಕೊಳ್ಳೇಗಾಲ ಇರಬಹುದು, ಕನಕಪುರ ಇರಬಹುದು ಕೋಲಾರ ಇರಬಹುದು, ಶಿಡ್ಲಘಟ್ಟ ಇರಬಹುದು ಇಂಟರ್‌ವಿನ್ ಆಗಲಿಕ್ಕೆ ಅನುಕೂಲವಾಗುತ್ತದೆ. ಇದು ತಾವು ತಕ್ಷಣ ಮಾಡಲಿಕ್ಕೆ ಸಾಧ್ಯವಿರತಕ್ಕ ಕೆಲಸ. ತಾವು ಶುಕ್ರವಾರ ಮಾನ್ಯ ಪ್ರಧಾನಮಂತ್ರಿಗಳನ್ನು ನೋಡುವುದು ಒಂದು ಭಾಗವಾಯಿತು, ಇದನ್ನು ತಾವು ತಕ್ಷಣ ಮಾಡಬಹುದು. ತಾವು ಸ್ವಲ್ಪ ಹಣವನ್ನು ಬ್ಯಾಂಕುಗಳಿಂದ ಕೊಡಿಸುತ್ತೇವೆಂದ ತಕ್ಷಣವೇ ಸ್ವಲ್ಪ ರೇಟು ಜಾಸ್ತಿಯಾಗುತ್ತದೆ ಎನ್ನುವುದು ತಮಗೆ ಗೊತ್ತಿದೆ. ಮತ್ತೆ ಏನು ಮಾನ್ಯ ಮುಖ್ಯಮಂತ್ರಿಗಳು ಆಜ್ಞೆಯನ್ನು ಮಾಡಿದ್ದಾರೆ, ಆ ಆಜ್ಞೆಯನ್ನು ರದ್ದುಗೊಳಿಸುತ್ತೇವೆ ಎನ್ನುವ ಭರವಸೆಯನ್ನು ಸದನಕ್ಕೆ ಕೊಡಬೇಕೆನ್ನುವ ಒತ್ತಾಯ ಮಾಡುತ್ತೇನೆ. ನಾವು ರೈತರ ಪರವಾಗಿ ಹೇಳುತ್ತಿದ್ದೇವೆ ಬೆಂಬಲ ಬೆಲೆ ಏನಿದೆ, ಅದು 150 ರೂಪಾಯಿ ಆಗಬೇಕು. ತಾವು ಪ್ರೊಡಕ್ಷನ್ ಕಾಸ್ಟನ್ನು ಲೆಕ್ಕಾಚಾರ ಮಾಡಿಸುತ್ತಿದ್ದೀರಿ. ಪ್ರೊ।। ದಂಡಿನ ಅವರಂತೆ ರೇಷ್ಮೆಯಲ್ಲಿ ಕೆಲಸ ಮಾಡಿರತಕ್ಕ ಬಹಳ ಒಳ್ಳೆಯ ತಜ್ಞರುಗಳಿದ್ದಾರೆ. ಅವರುಗಳನ್ನೆಲ್ಲಾ ಕರೆಸಿ ಆಕ್ಟ್ ಅಮೆಂಡ್‌ಮೆಂಟ್ ಮಾಡಲಿಕ್ಕೆ ಯೂನಿಯನ್ ಗೌರ್ನಮೆಂಟ್ ಮಾಡುತ್ತಿರತಕ್ಕ ಕೆಲಸಗಳ ಬಗ್ಗೆ ಮತ್ತು ಬೆಂಬಲ ಬೆಲೆಯನ್ನು ಕೊಡತಕ್ಕ ವಿಚಾರದಲ್ಲಿ, ಮಾನ್ಯ ಧನಂಜಯಕುಮಾರ್‌ರವರು ಹೇಳಿದರು. ಆ ಖಾತೆಗೆ ಬೇರೆ ಮಂತ್ರಿಗಳು ಬಂದಿದ್ದಾರೆ. ಬಹುಶಃ ಕೇಂದ್ರ ಮಂತ್ರಿಗಳಾದ ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಸಹಿತ ರಾಜ್ಯದ

ಬಗ್ಗೆ ಕಳಕಳಿಯನ್ನು ಇಟ್ಟುಕೊಂಡಿರತಕ್ಕ ಮನುಷ್ಯ. ಅವರು ಒಬ್ಬ ಕ್ರಿಯಾಶೀಲ ಸಂಸತ್ ಸದಸ್ಯರಾಗಿದ್ದರು. ಅವರು ಈಗಾಗಲೇ ನಾನು ಖಂಡಿತವಾಗಿ ಸಹಾಯ ಮಾಡುತ್ತೇನೆಂದು ಹೇಳಿದ್ದಾರೆ. ಅವರ ಸಹಕಾರವನ್ನು ಸಹಿತ ಪಡೆದು ಏನಾದರೂ ಮಾಡಿ. ಈಗ ರಾಗಿಗೆ ಸ್ವಲ್ಪ ಬೆಂಬಲ ಬೆಲೆಯನ್ನು ಕೊಟ್ಟು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿದ್ದೀರಿ. ನೀವು ಮಾಡಿರುವ ಕೆಲಸವನ್ನು ಮಾಡಲಿಲ್ಲವೆಂದು ಹೇಳಿದರೆ ಮಾತುಗಳಿಂದ ಜನ ಯಾರು ನಂಬುವುದಿಲ್ಲ. ನಮ್ಮ ಕೆಲಸಗಳಿಂದ ಜನ ನಮ್ಮನ್ನು ನಂಬುತ್ತಾರೆ. ರಾಗಿಯನ್ನು ಬೆಂಬಲ ಬೆಲೆಯನ್ನು ಕೊಟ್ಟ ಪರ್ಚೆಸ್ ಮಾಡಿದ್ದೀರಿ. ಅದನ್ನು ನಾವು ಅಪ್ರಿಷಿಯೇಟ್ ಮಾಡುತ್ತೇವೆ, ಹಾಗೆ ಮಾಡಲಿಲ್ಲವೆಂದರೆ ಅದು ರಾಜಕೀಯವಾಗುತ್ತದೆ. ಅದೇ ರೀತಿಯಲ್ಲಿ ಇದನ್ನೂ ಸಹಿತ ನೀವು ಮಾಡಿ ತೋರಿಸಬೇಕು. ಮಾನ್ಯ ಮುನಿಯಪ್ಪನವರು ಬಹಳ ಆವೇಶಕ್ಕೊಳಗಾದರು, ಏಕೆ ಎಂಬುದು ನನಗೆ ಗೊತ್ತಾಗಲಿಲ್ಲ. ತಾವು ಆಜ್ಞೆ ಕಾಪಿಯನ್ನು ನೋಡಲಿಲ್ಲವೆಂದು ಕಾಣಉತ್ತದೆ. ಒಂದು ವೇಳೆ ನೋಡಿದ್ದರೂ ಅದನ್ನು ನೀವು ಜ್ಞಾಪಿಸಿಕೊಂಡಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆಜ್ಞೆ ಕಾಪಿಯನ್ನು ನಿಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಎ. ಮುನಿಯಪ್ಪ (ಗಣಿ ಭೂವಿಜ್ಞಾನ ಸಚಿವರು):- ರೇಷ್ಮೆ ವೀವರ್ಸ್ ಮತ್ತು ಟ್ವಿಸ್ಟರ್ಸ್ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಅದರ ಬಗ್ಗೆ ಸ್ಟೇ ಮಾಡಿ ಡೀಟೈಲ್ಸ್ ತೆಗೆದುಕೊಂಡು ಮತ್ತೆ ಅದನ್ನು ವೆಕೇಟ್ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಮುಖ್ಯಮಂತ್ರಿಗಳು ತಾತ್ಕಾಲಿಕವಾಗಿ ಎನ್‌ಫೋರ್ಸ್‌ಮೆಂಟ್ ಕಾನೂನನ್ನು ನಿಲ್ಲಿಸಿದ್ದೇವೆಂದು ಆಜ್ಞೆಯನ್ನು ಮಾಡಿರತಕ್ಕದ್ದು ನಿಜ. ಅದನ್ನು ಸದನ ಪ್ರಾರಂಭವಾದ ತಕ್ಷಣ ವಾಪಸ್ಸು ತೆಗೆದುಕೊಂಡಿರಬಹುದು. ಅದು ನನಗೆ ಗೊತ್ತಿಲ್ಲ. ಅದನ್ನು ಮುಖ್ಯಮಂತ್ರಿಗಳು ಹೇಳಬೇಕು. ತಾವು ಅವೇಶಕ್ಕೆ ಒಳಗಾಗಬಾರದು. ಇದರ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಈ ಸದನದ ಮೂಲಕ ರೇಷ್ಮೆ ಬೆಳೆಗಾರಿಗೆ ಕೊಟ್ಟರೆ ಈ ಉದ್ಯಮ ಉಳಿದುಕೊಳ್ಳುತ್ತದೆ. ಈ ದೃಷ್ಟಿಯಿಂದ ನಾವು ಎಲ್ಲಿಗೆ ಬೇಕಾದರೂ ಬಂದು ಹೋರಾಟ ಮಾಡಲಿಕ್ಕೆ ಸಿದ್ಧರಿದ್ದೇವೆ. ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ ನಿಮ್ಮ ಬೆನ್ನು ತಟ್ಟಲಿಕ್ಕೆ ನಾವೇ ಮೊದಲಿಗರು ಎನ್ನುವ ವಿಷಯವನ್ನು ತಿಳಿದುಕೊಳ್ಳಬೇಕೆಂದು ಹೇಳಿ ನಾನು ಮಾತನಾಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಈವೊಂದು ಆಕ್ರೋಶದಿಂದಾಗಿ ನಮ್ಮ ವಿರೋಧ ಪಕ್ಷದ ನಾಯಕತ್ವದಲ್ಲಿ ನಾವು ಧರಣಿಯನ್ನು ಮಾಡಿದ್ದೇವೆ. ತಾವು ತಪ್ಪು ತಿಳಿದುಕೊಂಡಿಲ್ಲ, ಏಕೆಂದರೆ ನಿಮಗೆ ಈ ಪ್ರಾಬ್ಲಮ್ ಗೊತ್ತಿದೆ. ತಾವು ಅಲೌ ಮಾಡಿದ್ದಕ್ಕಾಗಿ ವಂದನೆಗಳು.

5.40 ಪಿ.ಎಂ.

+ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಸನ್ಮಾನ್ಯ ಅಧ್ಯಕ್ಷರೇ, ಶೇಕಡಾ ತೊಂಬತ್ತರಷ್ಟು ಶಾಸಕರು ನಾವೆಲ್ಲರೂ ರೈತ ಕುಟುಂಬಗಳಿಂದ ಬಂದಿರತಕ್ಕಂಥವರು ಆಗಿದ್ದೇವೆ. ನಾವೆಲ್ಲರೂ ಕೂಡ ಅದು ರೇಷ್ಮೆ ಬೆಳೆಯಾಗಿರಬಹುದು, ಕಬ್ಬಾಗಿರಬಹುದು, ತೆಂಗು-ಆಗಿರಬಹುದು, ಎಲ್ಲರೂ ಅನುಭವಶಾಲಿ ಶಾಸಕರು ಇರುವಾಗ ಸದನ ಯಾವುದೇ ಪಾರ್ಟಿಯಿಂದ ಚರ್ಚೆ ಮಾಡುವುದು ಚೆನ್ನಾಗಿ ಕಾಣುವುದಿಲ್ಲ ಎಂದು ತಾವು ಹೇಳಿದ್ದೀರಿ. ತಾವು ಚರ್ಚೆಗೂ ಕೂಡ ಅವಕಾಶವನ್ನು

ಮಾಡಿಕೊಟ್ಟಿದ್ದೀರಿ. ಆದರೆ ಮಾನ್ಯ ಸಚಿವರಾದಂಥ ಮಹದೇವ್ ಅವರು ಇದರಲ್ಲಿ ರಾಜಕೀಯವನ್ನು ಬೆರೆಸಬೇಡಿ ಎಂಬ ಮಾತನ್ನು ಹೇಳಿದರು. ನಾನು ಅವರಲ್ಲಿ ವಿನಂತಿ ಮಾಡುತ್ತೇನೆ, ಏಕೆಂದರೆ ಅವರೂ ರೇಷ್ಮೆ ಬೆಳೆಯುತ್ತಾರೆ ಮತ್ತು ನಾನೂ ಕೂಡ ರೇಷ್ಮೆ ಬೆಳೆಯುತ್ತೇನೆ. ನಮಗಿರುವಂಥ ಕಷ್ಟಸುಖದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕಾಗುತ್ತದೆ. ಅದು ಬೆಂಬಲ ಬೆಲೆಯಾಗಿರಬಹುದು, ಟ್ಯಾಕ್ಸ್ ಜಾಸ್ತಿ ಮಾಡುವಂಥ ವಿಚಾರ ಆಗಬಹುದು. ಈಗ ಮಾನ್ಯ ಸಚಿವರಾದಂಥ ರೇವಣ್ಣನವರು ಆಗಲೇ ಒಂದು ಮಾತನ್ನು ಹೇಳಿದರು. ನಾವೆಲ್ಲರೂ ಡೆಲ್ಲಿಗೆ ಡೆಲಿಗೇಷನ್ ಹೋಗೋಣ, ಅಲ್ಲಿ ಹೋಗಿ ಕೇಂದ್ರ ಸರ್ಕಾರವನ್ನು ವಿನಂತಿ ಮಾಡೋಣ ಎನ್ನುವಂತಹ ಮಾತನ್ನು ಅವರು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಮೂರು ವರ್ಷಗಳಿಂದ ಯಾರೂ ಈ ಕೆಲಸವನ್ನು ಮಾಡಲಿಲ್ಲ ಮತ್ತು ಯಾರನ್ನೂ ಡೆಲ್ಲಿಗೆ ಡೆಲಿಗೇಷನ್ ಕರೆದುಕೊಂಡು ಹೋಗಲಿಲ್ಲ ಅಥವಾ ರಾಜ್ಯದಲ್ಲಿ ಇಷ್ಟು ಹಣವನ್ನು ಮೀಸಲಿಟ್ಟು ಬೆಂಬಲ ಬೆಲೆಯನ್ನು ಒದಗಿಸುತ್ತೇವೆ ಎಂದು ಇಲ್ಲಿಯವರೆಗೂ ಯಾರೂ ಹೇಳಲಿಲ್ಲ. ಆದರೆ ಈಗ ರೈತ ಕೊನೆಯ ಮಟ್ಟಕ್ಕೆ ಬಂದಿದ್ದಾರೆ. ಈಗಾಗಲೇ ಆತ ನಲ್ವತ್ತು-ಐವತ್ತು ಸಾವಿರ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದು ಆತನಿಗೆ ಇವತ್ತು ಬೆಳೆ ರಕ್ಷಣೆಗೋಸ್ಕರ ಔಷಧಿ ಹೊಡೆಯುವುದಕ್ಕೆ ಹಣ ಇಲ್ಲ. ಆದ್ದರಿಂದ ಇವತ್ತು ರೇಷ್ಮೆ ಬೆಳೆಯನ್ನು ಕಿತ್ತು ಹಾಕುವ ಮಟ್ಟಕ್ಕೆ ಆತ ಹೋಗಿದ್ದಾನೆ. ದಯಮಾಡಿ ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಬೆಂಬಲ ಬೆಲೆಯನ್ನು ಕೊಡುವುದಾದರೆ, ನಮ್ಮ ನಾಯಕರು ಹೇಳಿದ ಹಾಗೆ ಒಂದಷ್ಟು ಹಣವನ್ನು ನಿಗದಿ ಮಾಡಿ ನಿಧಿಯಲ್ಲಿ ಇಡಬೇಕು. ಆ ನಿಧಿಯ ಮುಖಾಂತರ ಬೆಲೆ ಕಡಿಮೆಯಾಗತಕ್ಕಂಥ ಸಂದರ್ಭದಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಿ ರೈತರಿಗೆ ಬೆಂಬಲ ಬೆಲೆಯನ್ನು ಕೊಟ್ಟು ಆ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುವುದು ಒಂದಾದರೆ, ಇವತ್ತು ಏನು ಉದಾಹರಣೆಗೆ ಪೆನುಗೊಂಡ ಮತ್ತು ಆಂಧ್ರ ಪ್ರದೇಶದ ಬೇರೆ ಭಾಗಗಳಿಂದ ಬೆಳಗಾದ ತಕ್ಷಣ ಕಾರಿನಲ್ಲಿ ನೂರಾರು ಸೀರೆಗಳನ್ನು ಚಿಕ್ಕಪೇಟೆಗೆ ಕದ್ದು ತರುತ್ತಾರೆ. ಅವುಗಳನ್ನು ಟ್ಯಾಕ್ಸ್ ಇಲ್ಲದ ಹಾಗೆ ಮಾರಿಕೊಂಡು ನಮ್ಮ ರೇಷ್ಮೆ ಬಟ್ಟೆಗೆ ಬೆಲೆ ಇಲ್ಲದ ಹಾಗೆ ಮಾಡಿ ಇವತ್ತು ನಮ್ಮ ರಾಜ್ಯದಲ್ಲಿ ಕೆ.ಜಿ.ಗೆ 65-70 ರೂಪಾಯಿಯಷ್ಟು ಕಡಿಮೆಯಾಗಿದೆ. ಅಲ್ಲಿ 125 ರಿಂದ 135 ರೂಪಾಯಿಗೆ ಮಾರುವಂಥ ವ್ಯವಸ್ಥೆಯಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಈ ಇಲಾಖೆಯಲ್ಲಿ ಒಂದು ಕಾನೂನು ಮಾಡಿ ಎಲ್ಲವನ್ನೂ ಚೆಕ್‌ಮಾಡಿ ಚಿಕ್ಕಪೇಟೆಗೆ ಬರುವಂಥ ವ್ಯವಸ್ಥೆಯಾಗಬೇಕು. ಮೊದಲು ಈ ವ್ಯವಸ್ಥೆ ಇತ್ತು. ಆದ್ದರಿಂದ ಚೆಕ್ ಮಾಡುವ ವ್ಯವಸ್ಥೆ ಏನಿತ್ತು ಅದನ್ನು ಪುನಃ ಇಂಟ್ರೋಡ್ಯೂಸ್ ಮಾಡಿ ಅಲ್ಲಿಂತ ಬರುವಂಥ ರೇಷ್ಮೆಯನ್ನು ರಿಸ್ಟ್ರಿಕ್ಟ್ ಮಾಡಿ ನಮ್ಮ ರಾಜ್ಯದ ರೈತರಿಗೆ ಟ್ಯಾಕ್ಸ್ ಅನುಕೂಲವನ್ನು ಸರ್ಕಾರ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಇವತ್ತು ರೈತರಿಗೆ ಕೊಡುವಂಥ ಸಬ್ಸಿಡಿ ರೇಟ್ ಏನಿದೆ, ಅದನ್ನು ಸರ್ಕಾರ ಕೊಟ್ಟಿದೆ ಮತ್ತು ನಾನೂ ಕೂಡ ಅನೇಕರಿಗೆ ಹಂಚಿದ್ದೇನೆ. ಆದರೆ ಇನ್ನೂ ರೈತರು ಕೊನೆಯ ಹಂತದಲ್ಲಿದ್ದು ಇದನ್ನು ಬೆಳೆಯಬಾರದು ಎಂದು ಇದ್ದಾರೆ. ಅದನ್ನು ಮರೆಸಬೇಕಾದರೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಪ್ರೋತ್ಸಾಹ ನೀಡಬೇಕು. ಅನೇಕ ಜನ ಎಸ್‌ಸಿ:ಎಸ್‌ಟಿ ಜನಾಂಗಕ್ಕೆ ಸೇರಿದ ರೇಷ್ಮೆ ಬೆಳೆಯುವಂತಹ ರೈತರು ಇದ್ದಾರೆ. ಅವರಿಗೆ ಪರಿಕರಗಳನ್ನು ಕೊಟ್ಟು ಪ್ರೋತ್ಸಾಹ ಕೊಡುವಂಥ ವ್ಯವಸ್ಥೆ ಹಿಂದೆ ಇತ್ತು.

ಈಗ ಮೂರು ವರ್ಷಗಳ ಹಿಂದೆ ಈ ಪರಿಕರಗಳನ್ನು ಕೊಡುವುದನ್ನು ತಪ್ಪಿಸಿದ್ದಾರೆ. ದಯಮಾಡಿ ಅವರಿಗೆ ಪರಿಕರಗಳನ್ನು ಕೊಟ್ಟು ಎಸ್‌ಸಿ : ಎಸ್‌ಟಿ ಜನಾಂಗದವರು ಬೆಳೆಯುವಂಥ ರೇಷ್ಮೆಗೆ ಬೆಂಬಲ ಬೆಲೆಯನ್ನು ಕೊಟ್ಟು ಅವರನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಮುನಿಯಪ್ಪನವರು ಹೆಚ್ಚಿನ ರೇಷ್ಮೆ ಬೆಳೆದು, ಸಿಲ್ಕ್ ಅಂಡ್ ಮಿಲ್ಕ್ ಕುಟುಂಬದಲ್ಲಿ ಹುಟ್ಟಿದಂಥ ಒಬ್ಬ ನಿಜವಾದಂಥ ಮಂತ್ರಿ ಅವರಾಗಿದ್ದಾರೆ. ಅವರು ಉತ್ತಮವಾದ ಒಂದು ಮಾತನ್ನು ಹೇಳಿದರು. ಆದರೆ ಮಾನ್ಯ ಮುದ್ದಹನುಮೇಗೌಡರು ಒಂದು ಮಾತನ್ನು ಹೇಳಿ ಬೈರೇಗೌಡರು ಈ ಮಟ್ಟದಲ್ಲಿ ಹೇಳಿ ಬಿಟ್ಟರಲ್ಲಾ ಎಂದರು. ಇದು ಯಾವುದೂ ಪಕ್ಷಪಾತದ ವಿಚಾರ ಅಲ್ಲ. ಇಡೀ ರಾಜ್ಯದ ರೈತರಿಗೆ ನಿಜವಾಗಿಯು ಚೈತನ್ಯ ಕೊಡುವಂಥ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತಹ ಮಾನ್ಯ ಮುದ್ದಹನುಮೇಗೌಡರನ್ನು ನಾನು ಮತ್ತೊಮ್ಮೆ ಪಕ್ಷದ ವತಿಯಿಂದ ಅಭಿನಂದಿಸುತ್ತೇನೆ. ಆದರೆ ಅವರು ಒಂದೇ ಒಂದು ಮಾತನ್ನು ಹೇಳಿ ಇದನ್ನು ಮಾಡಬಾರದು ಎಂದು ಹೇಳಿದ್ದಾರೆ. ಅವರು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾವೆಲ್ಲರೂ ಕೂಡ ರೈತ ಕುಟುಂಬದಿಂದ ಬಂದಿರತಕ್ಕಂಥವರು. ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು. ರೈತರ ಸಂಕಷ್ಟಕ್ಕೆ ಸರ್ಕಾರ ಸ್ಪಂದಿಸಿ ಅನುಕೂಲ ಮಾಡಿಕೊಡಬೇಕು ಎಂಬ ಮಾತನ್ನು ತಮ್ಮ ಮೂಲಕ ಹೇಳಿ ಅವರಿಗೆ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ನಿಮ್ಮ ನಿಮ್ಮ ನಾಯಕರು ಮಾತನಾಡಿ ಆದಮೇಲೆ, ಇನ್ನೇನು ಮಾತನಾಡಲಿಕ್ಕೆ ಇದೆ? ದಯವಿಟ್ಟು ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಮಾತನಾಡಿ. ಒಳಗಡೆ ಚರ್ಚೆ ನಡೆದಾಗ ಮಾನ್ಯ ಸಿಂಧ್ಯಾ, ಮಾನ್ಯ ವೈ.ಕೆ. ರಾಮಯ್ಯ ಮತ್ತು ಮಾನ್ಯ ಮುದ್ದಹನುಮೇಗೌಡರು ಮಾತ್ರ ಮಾತನಾಡುವುದಕ್ಕೆ ಅವಕಾಶ ನೀಡುವಂತೆ ತೀರ್ಮಾನವಾಗಿತ್ತು. ಮಾನ್ಯ ಲಕ್ಷ್ಮೀನಾರಾಯಣ್‌ರವರೇ, ನಾನು ತಮಗೆ ಹೇಳಿದ್ದೇ. ಬೇರೆ ಡಿಮ್ಯಾಂಡ್ ಬಂದಾಗ ಮಾತನಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಸಹಕರಿಸಿ. ಮಾನ್ಯ ರಾಮಯ್ಯನವರೇ, ಹೊಸ ಪಾಯಿಂಟ್ಸ್ ಏನಾದರೂ ಇದ್ದರೆ ಅವುಗಳನ್ನು ಮಾತ್ರ ಹೇಳಿ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ:- ಸನ್ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆಯೇ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡೆ. ಈ ವಿಷಯದಲ್ಲಿ ವಿಪುಲವಾದಂಥ ಚರ್ಚೆಯಾಗುವುದಾದರೆ, ನೀವು ಪೂರ್ಣ ಪ್ರಮಾಣದ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಮ್ಮ ಅಭ್ಯಂತರ ಇಲ್ಲವೆಂದು ನಾನು ಹೇಳಿದ್ದೆ. ಏಕೆಂದರೆ ಈ ವಿಷಯದಲ್ಲಿ ವಿವಾದವೇ ಇಲ್ಲ. ಅವರಿಗೂ ನಮಗೂ ಏನೂ ವಿವಾದ ಇಲ್ಲ. ಇದು ನಮ್ಮೆಲ್ಲರ ಆಸೆ, ನಮ್ಮೆಲ್ಲರ ಗುರಿ ಏನೆಂದರೆ ಈ ರಾಜ್ಯದಲ್ಲಿರುವಂಥ ರೇಷ್ಮೆ ಬೆಳೆಗಾರರಿಗೆ ನಾಲ್ಕು ಕಾಸು ಜಾಸ್ತಿ ಸಿಗಬೇಕು ಎಂಬುದಾಗಿದೆ. ಇದನ್ನು ಅವರೂ ಬೇಡವೆನ್ನುವುದಿಲ್ಲ ಮತ್ತು ನಾವು ಕೂಡ ಬೇಡ ಎನ್ನುವುದಿಲ್ಲ. 150 ರೂಪಾಯಿಗಳು ಅಲ್ಲ, ಒಂದು ಸಾವಿರ ರೂಪಾಯಿಗಳು ಒಂದು ಕೆ.ಜಿ. ಗೂಡಿಗೆ ಆಗುವುದಾದರೆ

ನಾವೆಲ್ಲರೂ ಕೂಡ ಒಟ್ಟಿಗೆ ಸಂತೋಷಪಡುತ್ತೇವೆ. ಈ ದೇಶದಲ್ಲಿ ಸೋಪಿನಬೆಲೆ ಜಾಸ್ತಿಯಾಗುತ್ತದೆ, ಅದನ್ನು ಯಾರೂ ಗಮನಿಸುವುದಿಲ್ಲ. ಬ್ಲೇಡಿನ ಬೆಲೆ ಜಾಸ್ತಿಯಾಗುತ್ತದೆ, ಅದನ್ನು ಯಾರೂ ಗಮನಿಸುವುದಿಲ್ಲ. ಬಟ್ಟೆ ಬೆಲೆ ಜಾಸ್ತಿಯಾಗುತ್ತದೆ, ಅದನ್ನು ಯಾರೂ ಗಮನಿಸುವುದಿಲ್ಲ. ಆದರೆ ಗೂಡಿನ ಬೆಲೆ ಜಾಸ್ತಿಯಾದರೆ ಯಾವ ಪಾಪ ಮಾಡಿದ ಹಾಗೆ ಆಗುತ್ತದೆ ಸ್ವಾಮಿ? ನಮ್ಮದೇನು ವಿವಾದ ಇದೆ ಎಂದರೆ ಏನೂ ವಿಚಾರ ಇಲ್ಲ. ಇಲ್ಲದ ವಿಚಾರವನ್ನು ನಾವೇ ಸೃಷ್ಟಿ ಮಾಡಿಕೊಳ್ಳುತ್ತಿದ್ದೇವೆ, ಅಷ್ಟೆ. ಈ ಕಾರಣಕ್ಕೇ ನಾನು ಹೇಳಿದ್ದು ಏನೆಂದರೆ, ಸ್ವಲ್ಪ ವಿಷಾದವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾನು ಋಣಿಯಾಗಿರುತ್ತೇನೆ ಎಂದು. ಮಾನ್ಯ ವಿರೋಧ ಪಕ್ಷದ ನಾಯಕರು ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಗೂಡಿನ ಬೆಲೆ ಕಡಿಮೆ ಆಗಲಿಕ್ಕೆ ಇರುವಂಥ ಬಹಳ ಪ್ರಮುಖವಾದಂಥ ಕಾರಣಗಳನ್ನು ಹೇಳಿದರು. ಮೊದಲನೆ ಕಾರಣ, ಆಮದು ನೀತಿ ಮತ್ತು ಎರಡನೇ ಕಾರಣ ಕಳ್ಳ ಸಾಗಾಣಿಕೆ ಮುಖಾಂತರ ಭಾರತ ದೇಶದ ಗಡಿಯನ್ನು ದಾಟಿ ರೇಷ್ಮೆ ಬರುತ್ತಿದೆ ಎಂದು, ಈ ಎರಡು ಕಾರಣಗಳನ್ನು ಅವರು ಏನು ಹೇಳಿದರು ಇದು, ನೂರಕ್ಕೆ ನೂರು ಸತ್ಯ. ಆದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅವರ ಮುಂದಿನ ಪದ ಇದೆಯಲ್ಲಾ, ಅದೇನೆಂದರೆ ಕಳ್ಳ ಸಾಗಾಣಿಕೆಯನ್ನು ತಡೆಯಬೇಕಾದರೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ ಪ್ರಯತ್ನ ಮಾಡಬೇಕೆಂದು ಅವರು ಹೇಳಿದರು. ಅತ್ಯಂತ ಗೌರವದಿಂದ, ಅವರ ಜೊತೆಯಲ್ಲಿ ಇದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. ಕಾರಣ ಏನೆಂದರೆ ಆಮದನ್ನು ತಡೆಯುವಂಥಾದ್ದಾಗಲೀ, ಗಡಿಯಲ್ಲಿ ಬರುವ ಕಳ್ಳಸಾಗಾಣಿಕೆಯನ್ನು ತಡೆಯುವಂಥಾದ್ದಾಗಲೀ, ಇದು ರಾಜ್ಯ ಸರ್ಕಾರದ ಕೆಲಸವೂ ಅಲ್ಲ, ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದೂ ಇಲ್ಲ. ಪರಿಪೂರ್ಣವಾಗಿ, ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ಇದು ಕೇಂದ್ರ ಸರ್ಕಾರದ ಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಏನಾದರೂ ವಿಫಲವಾಗಿದ್ದರೆ - it is a failure on the part of the Central Government. ಆದ್ದರಿಂದ ದಯವಿಟ್ಟು ಅವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಏನೆಂದರೆ ಅದನ್ನು ಅವರು ಸರಿಮಾಡಿಕೊಳ್ಳಬೇಕು. ಎರಡನೆಯದಾಗಿ ಅವರು ಈ ಅವ್ಯವಸ್ಥೆ, ಇದು ಡಬ್ಲ್ಯೂ.ಟಿ.ಓ. ದಿಂದ ಬಂತು, ಈ ಡಬ್ಲ್ಯೂಟಿಓಗೆ ರುಜು ಮಾಡಿದವರು ಯಾರು ಎಂದು ಕೇಳಿದರು. ಇದು ವಾದಕ್ಕೆ ಹೋದರೆ ಬಹಳ ದೂರಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ನಾನು ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಡಬ್ಲ್ಯೂಟಿಓಗೆ ರುಜು ಮಾಡಿದವರು ಯಾರು? ಮಾನ್ಯ ನರಸಿಂಹರಾವ್ ಅವರ ಕಾಲದಲ್ಲಿ ಇದನ್ನು ರುಜು ಮಾಡಿದರು ಎಂದರೆ - it is a hard fact; nobody can dispute the history; but my hon. friend should remember that silk was in the negative list at that time. You can verify. ಏಕೆಂದರೆ ನಮ್ಮ ಬಹಳ ಜನ ಸ್ನೇಹಿತರಿಗೆ ಇದು ಚೆನ್ನಾಗಿ ಗೊತ್ತು. ಈ ಹುಚ್ಚನ್ನು ತಲೆಗೆ ಹಚ್ಚಿಕೊಂಡವನು ನಾನು. ಮೊದಲ ಬಾರಿಗೆ ಮಾನ್ಯ ಜಾರ್ಜ್ ಫರ್ನಾಂಡೀಸ್ ಅವರು ಚೈನಾ ದೇಶದಿಂದ ಸಿಲ್ಕ್‌ನ್ನು ತರಿಸಿಕೊಂಡು ಭಾರತದಿಂದ ಹೊಗೆಸೊಪ್ಪನ್ನು ಕಳುಹಿಸಬೇಕು ಎಂಬ ಬಾರ್ಟರ್ ಸಿಸ್ಟಮ್‌ನ್ನು ಇಂಡ್ರಡ್ಯೂಸ್ ಮಾಡುವಂಥ ಪ್ರಯತ್ನವನ್ನು 1997-78ರಲ್ಲಿ ಮಾಡಿದರು. That was the first letter written as an Advocate imposing the import of the read solve to this Country. ಅವತ್ತಿನಿಂದ ಇವತ್ತಿನವರೆಗೂ ಈ ಸಮಸ್ಯೆಯನ್ನು ಹೊತ್ತುಕೊಂಡೇ ಇದ್ದೇನೆ, ಪರಿಹಾರ ಮಾತ್ರ ಇಲ್ಲ.

ಹೌದು, ಮಾನ್ಯ ನರಸಿಂಹರಾವ್ ಅವರ ಕಾಲದಲ್ಲಿ ಮಾನ್ಯ ಮನಮೋಹನ್‌ಸಿಂಗ್ ಅವರು ಉದಾರ ನೀತಿಯನ್ನು ತಂದಂಥ ಕಾಲದಲ್ಲಿ ಡಬ್ಲ್ಯೂಟಿಒ ವನ್ನು ರುಜು ಮಾಡಿದಂಥ ಕಾಲದಲ್ಲಿ ಅದು ಒಂದು ಮೊದಲನೇ ಹೆಜ್ಜೆ. It was not so rigid ಒ.ಜಿ.ಎಲ್. ಯಲ್ಲಿ ಅದು ಇರಲಿಲ್ಲ. ನೆಗೆಟಿವ್ ಲಿಸ್ಟ್‌ನಲ್ಲಿ ಅದು ಇತ್ತು. ನೆಗೆಟಿವ್ ಲಿಸ್ಟ್ ಎಂದು ಒಂದು ಮಾಡಿ ರೇಷ್ಮೆ ಕೂಡ ಅದರಲ್ಲಿ ಇತ್ತು. ಇದು ಒಂದು ಕಾರಣ. ಮಾನ್ಯ ನರಸಿಂಹರಾವ್ ಅವರು ಪ್ರಧಾನ ಮಂತ್ರಿ ಸ್ಥಾನದಿಂದ ಇಳಿದ ಮೇಲೆ All the succesive Governments are the Non-Congress Governments. It is not a fact? Why they have not removed this anomaly. ಈ ದೇಶದ ರೈತರ ತಲೆ ಮೇಲೆ ಕಲ್ಲು ಹಾಕುತ್ತಿದೆ ಇದು ಎಂಬುದನ್ನು ಏತಕ್ಕೆ ಯೋಚನೆ ಮಾಡಲಿಲ್ಲ? ಹೌದು, ಚರ್ಚೆ ಸಲುವಾಗಿ ಮಾನ್ಯ ನರಸಿಂಹರಾಯರು ತಪ್ಪು ಮಾಡಿಬಿಟ್ಟಿದ್ದಾರೆ ಎಂದು ಇಟ್ಟುಕೊಳ್ಳೋಣ ಅಥವಾ ಇದನ್ನು ಒಳ್ಳೆಯ ಮನೋಭಾವನೆಯಿಂದ ಮಾಡಿದ್ದಾರೆ. ಆದರೆ ತಪ್ಪು ಫಲವನ್ನು ಅದು ಕೊಡುತ್ತಿದೆ ಎಂದು ಭಾವಿಸಿಕೊಳ್ಳೋಣ ಅದು ತಪ್ಪು ಫಲವನ್ನು ಕೊಡುತ್ತಿದೆ. ಈ ರಾಷ್ಟ್ರದ ರೈತರನ್ನು ನಾಶ ಮಾಡುತ್ತಿದ್ದಾರೆ ಎಂದು ಗೊತ್ತಾದಂಥ - successive non-congress Governments. Why they have not removed it? ಆದ್ದರಿಂದ ಇಂತಹ ವಾದದಲ್ಲಿ ಅರ್ಥವಿಲ್ಲ ಮತ್ತು ಇವುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂಬುದು ನನ್ನ ಒಂದು ಅನ್ನಿಸಿಕೆ. ಮಾನ್ಯ ಸದಸ್ಯರು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಮತ್ತೆ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಆದರೆ ಒಂದನ್ನು ಮಾತ್ರ ನಾನು ಇಲ್ಲಿ ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ನಮ್ಮ ಸ್ನೇಹಿತರಾದಂಥ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹೇಳಿದ ಹಾಗೆ ಹೊರದೇಶಗಳಿಂದ ಬರುವಂಥ ಸಿಲ್ಕ್ ಏನಿದೆ, ಸ್ವಾಮಿ ಅದರದು ದೊಡ್ಡ ಕತೆ. ನೀವು ಟೈಮ್ ಕೊಡುವುದಿಲ್ಲ. Do you know on what pretext they are importing silk? Why they import silk from other country... ಏಕೆಂದರೆ ಈ ವಿಷಯದಲ್ಲಿ ತಾವು ನಮ್ಮ ಜೊತೆಯಲ್ಲಿ ಇರಬೇಕಾಗುತ್ತದೆ. ಹೊರದೇಶದಿಂದ ರೇಷ್ಮೆಯನ್ನು ತರಿಸಿಕೊಳ್ಳುವುದಕ್ಕೆ ಕೊಡುತ್ತಾ ಇರುವಂಥ ಪ್ರಮುಖವಾದ ಕಾರಣ, ಪ್ರಬಲವಾದಂಥ ಕಾರಣವೆಂದರೆ - to manufacture and export quality fabric. This is the main reason that they are giving. They want to the silk. To manufacture the export quality fabric. This is the pretext. I recollect my memory and I remember. Mr. B. Basavaiah then Central Silk Board Chairman ಅವರು ಹೇಳಿದರು, ಹೊರದೇಶಕ್ಕೆ ಕಟ್ಟುವ ಬಟ್ಟೆಯನ್ನು ತಯಾರು ಮಾಡುವುದಕ್ಕೆ ಇಂಪೋರ್ಟ್ ಮಾಡಿಕೊಳ್ಳುವಂಥ ಸಿಲ್ಕ್‌ನಲ್ಲಿ 98 ಭಾಗ ಕಳ್ಳಸಂತೆಯಲ್ಲಿ ಭಾರತ ದೇಶದಲ್ಲಿ ಮಾರಾಟವಾಗುತ್ತದೆ ಎಂದು. I have the paper cutting. If anybody disputes, I will show them. ಆದ್ದರಿಂದ ಕ್ವಾಲಿಟಿಯ ನೆಪದಲ್ಲಿ, ಗುಣಮಟ್ಟದ ನೆಪದಲ್ಲಿ ಹೊರದೇಶದಿಂದ ತಂದಂಥ ರೇಷ್ಮೆಯನ್ನು ಸ್ಥಳೀಯರು ಉಪಯೋಗಿಸುತ್ತಿರುವುದು ನೂರಕ್ಕೆ ನೂರರಷ್ಟು ಸತ್ಯವಿದೆ. ಅದನ್ನು ಕಂಡು ಹಿಡಿಯುವುದಕ್ಕೆ ನಮ್ಮ ರಾಜ್ಯ ಸರ್ಕಾರದ ಹಿಡಿತದಲ್ಲಿರುವಂಥ ಎನ್‌ಫೋರ್ಸ್‌ಸ್ಮೆಂಟ್ ಅನ್ನು ಬಿಗಿ ಮಾಡಬೇಕೆಂದು ಅವರೆಷ್ಟು ಪ್ರಭಲವಾಗಿ ಪ್ರತಿಪಾದನೆ ಮಾಡುತ್ತಾರೋ ಅಷ್ಟೇ ಪ್ರಬಲವಾಗಿ ನಾನೂ ಕೂಡ ಪ್ರತಿಪಾದನೆಯನ್ನು ಮಾಡುತ್ತೇನೆ. ನಡೆದ

ವಿಷಯವೇನೆಂಬುದು ಅವರಿಗೂ ಗೊತ್ತಿದೆ ನನಗೂ ಗೊತ್ತಿದೆ. ಒಂದು ಹಂತದಲ್ಲಿ ಇದರ ಎಲ್ಲಾ ಮೂಲಗಳು ಗೊತ್ತಿಲ್ಲದೆಯೇ ಆ ಎನ್‌ಫೋರ್ಸ್‌ಮೆಂಟ್‌ಗಳನ್ನು ಸ್ವಲ್ಪ ಸಡಿಲ ಮಾಡಿದಂಥ ಕಾಲದಲ್ಲಿ ನಾನು ಮಾನ್ಯ ಸದಸ್ಯರಾದ ಬೈರೇಗೌಡರನ್ನು, ಮಾನ್ಯ ಸಿಂಧ್ಯಾರವರನ್ನು ಕರೆದುಕೊಂಡು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಆ ಸತ್ಯವನ್ನು ಅವರೇ ಡಿಸ್‌ಪ್ಯೂಟ್ ಮಾಡುವುದಕ್ಕಾಗುವುದಿಲ್ಲ. ನಾನು ಏಕೆ ಈ ಮಾತನ್ನುಹೇಳುತ್ತಿದ್ದೇನೆಂದರೆ, ಈ ನಾಡಿನ ರೈತರ ಹಿತವನ್ನು ಕಾಪಾಡುವುದರಲ್ಲಿ ನಾವ್ಯಾರೂ ಎರಡನೆಯವರು ಅಲ್ಲವೇ ಅಲ್ಲ. ಇದೇ ಸದನದಿಂದ ಅವರನ್ನು ಎಬ್ಬಿಸಿಕೊಂಡು ಬನ್ನಿ, ಮುಖ್ಯಮಂತ್ರಿಗಳ ಹತ್ತಿರ ಹೋಗೋಣವೆಂದು ಕರೆದುಕೊಂಡು ಹೋಗಿದ್ದೆ. ಅವರಿಗೆ ಬಹುಶಃ ಯಾರೋ ಮಿಸ್‌ಗೈಡ್ ಮಾಡಿರಬಹುದು, we correct it ಎಂದು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಮುಖ್ಯಮಂತ್ರಿಗಳು ಒಪ್ಪಿಕೊಂಡು ಇವತ್ತು ಆಜ್ಞೆಯನ್ನು ಇಶ್ಯೂ ಮಾಡಿದ್ದಾರೆ, it should be fully implemented and fully enforced. ಎನ್ನುವಂಥ ಆಜ್ಞೆ ಹೊರಟಿದೆ, ಬಹುಶಃ ಅದು ಮಂತ್ರಿಗಳ ಹತ್ತಿರ ಇರಬಹುದು, ಅದನ್ನು ಅವರು ಓದಿ ಹೇಳುತ್ತಾರೆ. ಏಕೆಂದರೆ ನನ್ನ ಹತ್ತಿರ ಸರ್ಕಾರದ ಆಜ್ಞೆ ಇಲ್ಲದಿರುವುದರಿಂದ ನನ್ನ ಸ್ನೇಹಿತರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಭಾರತದ ಗಡಿಯಲ್ಲಿ ಬರುವಂಥ ಸಿಲ್ಕ್‌ನ್ನು ತಡೆಯುವಂಥ ಸಂಪೂರ್ಣವಾದ ಜವಾಬ್ದಾರಿ, ಕರ್ತವ್ಯ ಕೇಂದ್ರ ಸರ್ಕಾರದ್ದು ಹಾಗೂ ಕೂಡ ನುಸುಳಿ ಬಂದರೆ, ಅದನ್ನು ತಂದು ಕಾಳಸಂತೆಯಲ್ಲಿ ಮಾರಾಟ ಮಾಡುವ ಖದೀಮರನ್ನು ಮೆಟ್ಟು ಹಾಕುವಂಥ ಜವಾಬ್ದಾರಿ ನಮ್ಮ ಸರ್ಕಾರದ್ದು, ಅದನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ವಾದ ವಿವಾದ ಇಲ್ಲವೇ ಇಲ್ಲ. ಮೊದಲು ಆಮದು ಶುಲ್ಕ ಎಷ್ಟಿತ್ತು? ಅಂಕಿಅಂಶವನ್ನು ಕೊಡಬೇಕು ಎನ್ನುವುದರ ಬಗ್ಗೆ ವಿರೋಧ ಪಕ್ಷದವರು ಕೇಳಿದ್ದಾರೆ. ನನಗೆ ವಿರೋಧ ಪಕ್ಷದ ನಾಯಕರ ಬಗ್ಗೆ ಬಹಳ ಗೌರವ ಮತ್ತು ಅಭಿಮಾನವಿದೆ. ಅವರು ಅತ್ಯಂತ ಗೌರವವಾಗಿ ಮತ್ತು ಗಂಭೀರವಾಗಿ ನಡೆದುಕೊಳ್ಳುತ್ತಾರೆ. ಅವರಿಗೆ ಮತ್ತೆ ಗೌರವದಿಂದ ಹೇಳುತ್ತಿದ್ದೇನೆ, ಈ ಸಮಸ್ಯೆ ಮೊದಲು ಇರಲಿಲ್ಲ. ಆಮದು ಶುಲ್ಕವನ್ನು ಹಾಕತಕ್ಕ ಸಮಸ್ಯೆ ಬಂದದ್ದು ಡಬ್ಲ್ಯೂಟಿಓ ಬಂದಾದ ಮೇಲೆ. ಪರ್ಟಿಕ್ಯುಲರ್‌ಲಿ ಆದರ ಬಗ್ಗೆ ನಿಜಾಂಶವನ್ನು ಹೇಳಿದರೆ ಅವೆಲ್ಲಾ ನೋವಿನ ಸಂಗತಿಗಳಾಗುತ್ತದೆ. 'ಹರಕೊಲ್ಲಲ್ ಪರ ಕಾರ್ಯನೇ' ಎಂಬ ನಾಣ್ಣುಡಿಯನ್ನು ಯಾವಾಗ ಹೇಳಿದೆ ಎಂದರೆ, ನಮ್ಮ ರಾಜ್ಯದವರೇ ಕಾಮರ್ಸ್ ಮಂತ್ರಿಯಾಗಿದ್ದಾಗ, ನಮ್ಮ ರಾಜ್ಯದವರೇ ಕಾಮರ್ಸ್ ಸೆಕ್ರೆಟರಿಯೂ ಆಗಿದ್ದಂಥ ಸಂದರ್ಭದಲ್ಲಿ ಈ ದೇಶಕ್ಕೆ ಮುಕ್ತವಾಗಿ ರೇಷ್ಮೆಯನ್ನು ಆಮದು ಮಾಡಿಕೊಳ್ಳುವಂಥ ಅನ್ಯಾಯದ ಆಜ್ಞೆಯನ್ನು ಹೊರಡಿಸಿದರು. ಈ ರೀತಿ ಮಾಡಿದ್ದನ್ನು ಯಾರಾದರೂ ಡಿಸ್‌ಪ್ಯೂಟ್ ಮಾಡಿ ಹೇಳಲಿ. ನಮ್ಮ ರಾಜ್ಯದವರೇ ಮಂತ್ರಿಗಳು, ಸೆಕ್ರೆಟರಿಗಳೂ ಆಗಿದ್ದಾಗ ಮುಕ್ತ ರೇಷ್ಮೆ ಆಮದಿಗೆ ಅಂಕಿತವನ್ನು ಹಾಕಿದರು. ಅವತ್ತು ನಾನು ಅವರಿಗೆ 'ಹರಕೊಲ್ಲಲ್ ಪರ ಕಾಯ್ವನೇ' ಎಂದು ಕಾಗದವನ್ನು ಬರೆದೆ. ತಾವು ಯಾವುದನ್ನು ವಿರೋಧ ಮಾಡಿದಿರೋ, ಯಾವುದರಿಂದ ಈ ದೇಶದ ರೈತ ಹಾಳಾಗುತ್ತಾನೆಂದು ಹೇಳಿದಿರೋ ಅದನ್ನು ನೀವೇ ಮಾಡಿದ್ದೀರಿ, ಅದನ್ನು ನೀವೇ ಕಾಪಾಡದಿದ್ದರೆ ಇನ್ಯಾರು ಕಾಪಾಡುತ್ತಾರೆ ಎಂದು ಆದ್ದರಿಂದ ಅವತ್ತು ಆಮದು ಶುಲ್ಕವನ್ನು ಹಾಕುವಂಥ ಪ್ರಶ್ನೆ ಇರಲಿಲ್ಲ. ಆಮದು ಶುಲ್ಕವನ್ನು ಹಾಕುವಂಥ ಪ್ರಶ್ನೆ ಬಂದಿರುವುದು ಫೈನಲ್ ಅಗ್ರಿಮೆಂಟ್ ಆದ ಮೇಲೆ. ಇವತ್ತಿನ ಪರಿಸ್ಥಿತಿಯ ಅಂಕಿ ಅಂಶವನ್ನು ಅವರು ಕೇಳುತ್ತಾರೆ, ಸಧ್ಯಕ್ಕೆ I am subject to correction, because

I am neither in the State Government nor in the Central Government. The maximum import duty that can be levied is 300 per cent. They were levying 40%. It has been reduced to 35%. Why? ಈಗ ನಾನು ಸೂಟ್‌ಕೇಸ್‌ಗಳು ಎಕ್ಸ್‌ಚೇಂಜ್ ಆಗಿದೆಯೆಂದು ಹೇಳುವುದಕ್ಕಾಗುತ್ತದೆಯೇ? ನಲವತ್ತು ಪರ್‌ಸೆಂಟ್ ಇದ್ದಂಥ ಆಮದು ಶುಲ್ಕವನ್ನು 35 ಪರ್‌ಸೆಂಟ್‌ಗೆ ಇಳಿಸಲಾಗಿದೆ. ಇದಕ್ಕೆ ಕಾರಣವನ್ನು ಸೂಟ್‌ಕೇಸ್ ಎಕ್ಸ್‌ಚೇಂಜ್‌ನಿಂದ ಇಳಿಸಿದ್ದಾರೆಂದು ನಾನು ಹೇಳುವುದಿಲ್ಲ. ಯಾವ ಕಾರಣಕ್ಕಾಗಿ ಇಳಿಸಿದ್ದಾರೆ ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ನನಗೆ ಬೇಕಾಗಿರುವುದು ರೈತನ ಹಿತ. ಸೂಟ್‌ಕೇಸ್‌ಗಳು, ಈ ಭ್ರಷ್ಟತನಗಳು ಈ ಪಕ್ಷಪಾತಗಳು ಇವತ್ತೇನೂ ಬಂದಿದ್ದಲ್ಲ, ಚುನಾವಣೆಯ ಜೊತೆಯಲ್ಲೇ ಇವುಗಳೆಲ್ಲಾ ಹುಟ್ಟಿದ್ದಾವೆ. ನನ್ನ ಸ್ನೇಹಿತರು ಭ್ರಷ್ಟತನದ ಗಂಗೋತ್ರಿಯು ಚುನಾವಣೆಯ ಜೊತೆಯಲ್ಲೇ ಹುಟ್ಟಿತು ಎಂದು ಹೇಳಿದರು. ಆದ್ದರಿಂದ ಅದನ್ನು ನಾನು ಹೇಳುವುದಿಲ್ಲ. ನನ್ನ ಪ್ರಶ್ನೆ ಇಷ್ಟೇ, 300 ಪರ್‌ಸೆಂಟ್ ಆಮದು ಶುಲ್ಕವನ್ನು ಹಾಕಬಹುದು, ಆದರೆ ತಮ್ಮ ಸರ್ಕಾರಕ್ಕೆ ಹೇಳಿ ಅದನ್ನು 250 ಪರ್‌ಸೆಂಟ್‌ಗೆ ಹಾಕಿಸಿಬಿಡಿ, ಎಲ್ಲಾ ಸರಿಯಾಗುತ್ತದೆ. ಎರಡನೆಯದಾಗಿ, 40 ಪರ್‌ಸೆಂಟ್ ಲೆವಿ ಮಾಡುತ್ತಿದ್ದರು, ಅದನ್ನು 35 ಪರ್‌ಸೆಂಟ್‌ಗೆ ಇಳಿಸಿದ್ದಾರೆ, ತಾವು ದಯಮಾಡಿ ದೆಹಲಿಗೆ ಹೋದಾಗ ನನ್ನನ್ನು ಕರೆದುಕೊಂಡು ಹೋಗುತ್ತಾರೋ ಇಲ್ಲವೋ ಗೊತ್ತಿಲ್ಲ, ಏಕೆ 5 ಪರ್‌ಸೆಂಟ್ ರೆಡ್ಯೂಸ್ ಆಯಿತು ಎಂದು ನಾವು ನೀವೆಲ್ಲರೂ ಕೇಳೋಣ. Let us know What exactly is the genuine reason? ಮಾನ್ಯ ಭೈರೇಗೌಡರು ಬರಲಿ, ಒಟ್ಟಿಗೆ ಎಲ್ಲರೂ ಕೇಳೋಣ. ಇದರಲ್ಲಿ ವಾದವಿವಾದದ ಪ್ರಶ್ನೆಯೇ ಇಲ್ಲ. ಏತಕ್ಕಾಗಿ ನಾವು ಇಲ್ಲಿ ಕಿತ್ತಾಡುತ್ತಿದ್ದೇವೋ ಅದು ನನಗೆ ಅರ್ಥ ಆಗುತ್ತಿಲ್ಲ. ಇದು ಈಗ ಇರುವಂಥ ಪರಿಸ್ಥಿತಿ. I once again request my friends to increase the import price. ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

ಶ್ರೀ ಸಿ. ಬೈರೇಗೌಡ:- ಹಿಂದೆ ನಾವು ಒಂದು ಸಲ ಡೆಲಿಗೇಷನ್ ಹೋಗಿದ್ದೆವು. ನಮ್ಮ ಜೊತೆಯಲ್ಲಿ ಮಾನ್ಯ ರಾಮಯ್ಯನವರೂ ಇದ್ದರು. ಆವತ್ತಿನ ದಿವಸ ಏನು ನಡೆಯಿತು ಎನ್ನುವುದಕ್ಕೆ ಮಾನ್ಯ ರಾಮಯ್ಯನವರೂ ಪ್ರತ್ಯಕ್ಷದರ್ಶಿ. ನಾನು ಏನಾಯಿತು ಎನ್ನತಕ್ಕದ್ದನ್ನು ಅವರಿಗೆ ಜ್ಞಾಪಕ ಮಾಡಿಕೊಟ್ಟೆ. ತಾವೂ ಇದ್ದಿರಿ, ಬೇರೆಯವರೂ ಇದ್ದರು. ಅವರು ಮರೆತಿದ್ದಾರೆಂದು ಅನ್ನಿಸುತ್ತದೆ. ಅದಕ್ಕೆ ಆಕ್ಷೇಪಣೆ ತೆಗೆದುಕೊಳ್ಳುವುದಿಲ್ಲ.

ಡಾ|| ಜಿ. ಪರಮೇಶ್ವರ್:- ನಾವು ಮರೆತಿಲ್ಲ. ನಾನೇ ಡೆಲಿಗೇಷನ್‌ನನ್ನು ತೆಗೆದುಕೊಂಡು ಹೋಗಿದ್ದು, ಹಾಗೆ ಡೆಲಿಗೇಷನ್ ತೆಗೆದುಕೊಂಡು ಹೋಗಿ ಮಾನ್ಯ ನರಸಿಂಹರಾಯರು, ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ ಮೇಲೆ ಆ ಓ.ಜಿ.ಎಲ್. ನಲ್ಲಿ ಅದನ್ನು ಸ್ಪೆಶಲ್ ಆಗಿ ಆವತ್ತೇ ಆ್ಯಂಟಿ ಡಂಪಿಂಗ್ ಆ್ಯಕ್ಟ್‌ನ್ನು ರಿವೋಕ್ ಮಾಡಿದ್ದು. ಅದಕ್ಕಾಗಿ ಈ ಪ್ರೈಸ್ ಜಾಸ್ತಿಯಾಗಿದ್ದು. ಇದನ್ನೂ ತಾವು ಜ್ಞಾಪಿಸಿಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:- ಅಲ್ಲಿ ನಡೆದಿರತಕ್ಕಂಥ ನಡವಳಿಕೆಗಳೇನು ಎನ್ನತಕ್ಕದ್ದು ಮಾನ್ಯ ರಾಮಯ್ಯನವರಿಗೆ ಜ್ಞಾಪಿಸುತ್ತಿದ್ದೇನೆ. ಆದರೂ ಅವರು ಹೇಳುತ್ತಿಲ್ಲ. ಈ ಆಮದು ಶುಲ್ಕ ಮೊದಲು ಇರಲಿಲ್ಲವೆಂದು ಹೇಳುತ್ತಿದ್ದಾರೆ, ಅದು ಸರಿಯಾದುದಲ್ಲ. ಯಾವಾಗ ಹೊರಗಡೆಯಿಂದ

ಈ ಸರಕು ಬರಲು ಪ್ರಾರಂಭವಾಯಿತು ಆವತ್ತಿನಿಂದಲೇ ಆಮದು ಶುಲ್ಕವಿದೆ. ಕೆಲವು ಸಂದರ್ಭಗಳಲ್ಲಿ ಹೆಚ್ಚಾಗಿದೆ, ಕೆಲವು ಸಂದರ್ಭಗಳಲ್ಲಿ ಕಡಿಮೆಯಾಗಿದೆ. ಶೇಕಡ 60 ಇದ್ದದ್ದು ಈಗ 30ಕ್ಕೆ ಇಳಿದಿರುವುದು ನಿಜ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಆಗಿನ ಸಂದರ್ಭದಲ್ಲಿ ಆಮದು ಶುಲ್ಕವಿರಲಿಲ್ಲ. ಆಗ ಏನಿದ್ದರೂ ಗೆಟ್ ಬ್ಯಾಕ್ ಸಿಸ್ಟಂ ಇತ್ತು. ಯಾರು ಹಂಡ್ರೆಡ್ ಪರ್ಸೆಂಟ್ ಎಕ್ಸ್‌ಪೋರ್ಟ್ ಯೂನಿಟ್ಸ್ ಹೊಂದಿದ್ದಾರೆ ಅವರು ಮಾತ್ರ ತರಿಸಿಕೊಳ್ಳಬೇಕು, ಅದಕ್ಕೆ ಬದಲಾಗಿ ಅದನ್ನು ಕನ್‌ವರ್ಟ್ ಮಾಡಿ ಫ್ಯಾಬ್ರಿಕ್ಸ್ ಮಾಡಿ ಕಳುಹಿಸತಕ್ಕ ವ್ಯವಸ್ಥೆ ಇತ್ತು. ಅವತ್ತು ಆ ಒಂದು ರೇಷ್ಮೆಗೆ ಎಕ್ಸೈಜ್ ಡ್ಯೂಟಿ ಇರಲಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ನಾನು ಸರ್ವಗುಣ ಸಂಪನ್ನನಲ್ಲ, ಸರ್ವಜ್ಞನಲ್ಲ, even now I asserts that there was no import duty at that stage. ಏಕೆಂದರೆ, It was in the negative list. ನಮ್ಮ ಸ್ನೇಹಿತರು ಇದನ್ನು ಹತ್ತನೆ ಸಲವೋ ಹದಿನೈದನೇ ಸಲವೋ ಪ್ರಸ್ತಾಪ ಮಾಡಿದ್ದಾರೆ. ನಾನು ಒಂದು ಮಾತನ್ನು ಬೆಳಿಗ್ಗೆ ಪ್ರಾರಂಭದಲ್ಲೇ ಹೇಳಿದ್ದೇನೆ. ಈ ಆಮದು ಮಾಡಿಕೊಳ್ಳುವಂಥ ಅನಿಷ್ಟ ನೀತಿಯನ್ನು ಎಲ್ಲಾ ಪಕ್ಷದ ಸರ್ಕಾರಗಳು, ಕೇಂದ್ರ ಸರ್ಕಾರಗಳು ಮಾಡಿದ್ದಾರೆ. ಒಂದು ಮಾತನ್ನು ಮರೆತೆ, ಒಂದು ಸಂತೋಷದ ಸುದ್ದಿ ಏನೆಂದರೆ, ಅದೇ ರೀತಿ ಸ್ವಾತಂತ್ರ್ಯ ಬಂದ ದಿವಸದಿಂದಲೇ ಎಲ್ಲಾ ರಾಜ್ಯ ಸರ್ಕಾರಗಳು ಈ ಆಮದನ್ನು ವಿರೋಧ ಮಾಡಿದ್ದಾರೆ. ಪಕ್ಷಾತೀತವಾಗಿ ವಿರೋಧ ಮಾಡಿದ್ದಾರೆ. ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಮಾನ್ಯ ರಾಜೀವ್‌ಗಾಂಧಿಯವರಿಗೆ ಬರೆದಂಥ ಪತ್ರ ನನ್ನ ಹತ್ತಿರ ಇದೆ. ಗೌರವಾನ್ವಿತ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆಮದಿನಿಂದ ಆಗುವಂಥ ಅನಿಷ್ಟಗಳ ಬಗ್ಗೆ ಬರೆದಿರುವ ಪತ್ರ ನನ್ನ ಹತ್ತಿರ ಇದೆ. ಮತ್ತೆ ಆಮದು ಮಾಡಿಕೊಳ್ಳಬೇಕೆಂದು ಆಜ್ಞೆ ಕೊಟ್ಟಂಥ ಪತ್ರವೂ ನನ್ನ ಹತ್ತಿರ ಇದೆ. ಇದನ್ನೆಲ್ಲಾ ಹೇಳುವುದಕ್ಕೆ ಹೋದರೆ ನಾನು ಎಮೋಷನಲ್ ಆಗುತ್ತೇನೆಂದು ಹೇಳುತ್ತಿಲ್ಲ. ಇತ್ತೀಚಿಗೆ ನಮ್ಮ ಮುಖ್ಯಮಂತ್ರಿಗಳು ಅದನ್ನು ವಿರೋಧ ಮಾಡತಕ್ಕಂಥ ಪತ್ರವೂ ನನ್ನ ಹತ್ತಿರ ಇದೆ. ಕೇಂದ್ರ ಸರ್ಕಾರಗಳು ಆಮದು ಮಾಡಿಕೊಳ್ಳುವುದು ಎಷ್ಟು ಸಹಜವೊ ಅಷ್ಟೇ ಸಹಜವಾಗಿ ಅಷ್ಟೇ ಸತ್ಯವಾಗಿ ಎಲ್ಲಾ ರಾಜ್ಯ ಸರ್ಕಾರಗಳೂ ಆಮದನ್ನು ವಿರೋಧ ಮಾಡಿದ್ದಾವೆ. ಇದು ಇರುವಂಥ ಸೂರ್ಯ ಚಂದ್ರ ಬೆಳಕಿನಷ್ಟು ಸತ್ಯದ ಸಂಗತಿ. ಇದರ ಬಗ್ಗೆಯೂ ಯಾವುದೇ ವಿವಾದಗಳು ಇಲ್ಲ. ಇನ್ನೊಂದು ಮಾತನ್ನು ನನ್ನ ಸ್ನೇಹಿತರು ಹೇಳಿರುವುದಕ್ಕೆ ಹೇಳಬೇಕಾಗುತ್ತದೆ. ಬೆಲೆ ಬಿದ್ದಾಗ ರಾಜ್ಯ ಸರ್ಕಾರ ಏನು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಕೇಂದ್ರ ರೇಷ್ಮೆ ಮಂಡಳಿ ಎಂದು ಒಂದು ಮಂಡಳಿ ಇದೆ. ಇದು ಏನು ಮಾಡುತ್ತಿದೆ? ಎಲ್ಲಿದೆ ಇದು? ರಾಷ್ಟ್ರದ ರೇಷ್ಮೆ ಉತ್ಪತ್ತಿಯಲ್ಲಿ 70 ರಿಂದ 75 ಭಾಗ ಕರ್ನಾಟಕದ್ದು. ನಾನು ಯಾವ ಸರ್ಕಾರವೆಂದು ಹೇಳುವುದಿಲ್ಲ, 70 ರಿಂದ 75 ಭಾಗ ಕೇಂದ್ರ ಸರ್ಕಾರದಿಂದ ಆ ಹಣ ಬಂದಿದೆಯೇನು? ಕೇಂದ್ರ ರೇಷ್ಮೆ ಮಂಡಳಿಯಿಂದ ಅಷ್ಟು ಹಣ ಕರ್ನಾಟಕ ರಾಜ್ಯಕ್ಕೆ ಬಂದಿದೆಯೇ? ನಾವು ಯಾರಾದರೂ ಇದನ್ನು ಗಮನಿಸಿದ್ದೇವೆಯೇ? ನಾನು ಆ ಸರ್ಕಾರ, ಈ ಸರ್ಕಾರವೆಂದು ಹೇಳುವುದಿಲ್ಲ. We are producing 70% of the silk in this Country. Are we getting 70% of funds from the Central

Government? ಇದರ ಬಗ್ಗೆ ಚರ್ಚೆ ಮಾಡೋಣ. ಇದರಲ್ಲಿ ಏನಾದರೂ ಅವ್ಯವಹಾರವಿದೆಯೇ ಹೇಳಿ. ಇಲ್ಲದಿದ್ದರೆ ನಾಳೆ ಡೆಲಿಗೇಷನ್ ಹೋದಾಗ ಈ ವಿಷಯವನ್ನು ಚರ್ಚೆ ಮಾಡಲು ವಿವಾಧವಿದೆಯೇ? ನಾವು 70 ಪರ್‌ಸೆಂಟ್ ಪ್ರೊಡ್ಯೂಸ್ ಮಾಡುತ್ತೇವೆ, ನ್ಯಾಯವಾಗಿ, ಸತ್ಯವಾಗಿ, ಧರ್ಮವಾಗಿ we should get 70% of the funds from the Central Silk Board. ಇದನ್ನು ಚರ್ಚೆ ಮಾಡೋಣ. ನಾವೆಲ್ಲಾ ಒಟ್ಟಾರೆ ಇದರ ಗ್ಗೆ ಕೇಂದ್ರ ಸರ್ಕಾರದ ಮೇಲೆ ಫೈಟ್ ಮಾಡೋಣ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇಷ್ಟೆಲ್ಲಾ ವಾದಗಳು ಆದಮೇಲೂ ಸಮಸ್ಯೆಗೆ ಇರುವಂಥ ಮಾರ್ಗಗಳು ಎರಡೇ ಎರಡು. ಎರಡರ ಬಗ್ಗೆಯೂ ಮಾನ್ಯ ಸಿಂಧ್ಯಾರವರು ಹೇಳಿದ್ದಾರೆ. ಅದನ್ನು ನಾನೂ ಬೆಂಬಲಿಸುತ್ತೇನೆ. ಒಂದು, ಬೆಂಬಲ ಬೆಲೆಯನ್ನು ಕೊಡತಕ್ಕದ್ದು. ಇದನ್ನು ರಾಜ್ಯ ಸರ್ಕಾರ ಒಂದೇ ಕೊಡಲು ಆಗುವುದಿಲ್ಲ. ನೀವು ರಾಗಿಗೆ, ಜೋಳಕ್ಕೆ ಬೆಂಬಲ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುತ್ತೀರಿ, ಅದೇ ರೀತಿ ರೇಷ್ಮೆಗೂ ಒಂದು ಬೆಂಬಲ ಬೆಲೆಯನ್ನು ಕೊಡವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಇದನ್ನು ಕೇಂದ್ರ ಸರ್ಕಾರ ಮಾಡಬೇಕು, ರಾಜ್ಯ ಸರ್ಕಾರ ಮಾಡಬೇಕು ಎಂದು ಒಬ್ಬರ ಕಡೆ ಒಬ್ಬರು ಕೈ ತೋರುವುದು ಬೇಡ. ನಮ್ಮ ರಾಜ್ಯದ ಮಂತ್ರಿಗಳಲ್ಲೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನ್ನ ಸ್ನೇಹಿತರ ಮುಖಾಂತರ ಕೇಂದ್ರ ಸರ್ಕಾರಕ್ಕೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. Let there be a revolving fund, ಇದನ್ನು ಆವರ್ತ ನಿಧಿ ಎಂದು ಕರೆಯುತ್ತೀರೋ ಅಥವಾ ಏನೆಂದು ಕರೆಯುತ್ತೀರೋ, Whatever it may be. ನೀವು ಯಾವ ಹೆಸರಿನಲ್ಲಾದರೂ ಕರೆಯಿರಿ. 500 ಕೋಟಿ ರೂಪಾಯಿಗಳನ್ನು ಅವರು ಕೊಡಲಿ, ರಾಜ್ಯ ಸರ್ಕಾರದವರು 100 ಕೋಟಿ ರೂಪಾಯಿಗಳನ್ನು ಕೊಡಲಿ. ಇಲ್ಲವೇ ಅವರು 900 ಕೋಟಿ ರೂಪಾಯಿಗಳನ್ನು ಕೊಡಲಿ, ಇವರು 100 ಕೋಟಿ ರೂಪಾಯಿಗಳನ್ನು ಕೊಡಲಿ. ಒಂದು ಆವರ್ತ ನಿಧಿಯನ್ನು ಮಾಡೋಣ. ಇದನ್ನು ಮಾಡಿ, ಯಾವಾಗ ರೇಷ್ಮೆ ಗೂಡಿನ ಬೆಲೆ ಕಡಿಮೆಯಾಗುತ್ತದೋ ಆಗ ನನ್ನ ಸ್ನೇಹಿತರು ಹೇಳಿದ ಹಾಗೆ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿ, ಗೂಡನ್ನು ಕೊಂಡು ಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಮಾಡುವಂತಾದ್ದು ನಮಗೆ ಇರುವಂಥ ಒಂದು ಮಾರ್ಗ. ಇನ್ನು ಎರಡನೆಯದು, ಆಮದು ಶುಲ್ಕವನ್ನು ಜಾಸ್ತಿ ಮಾಡುವುದು. ಆಮೇಲೆ, ನನ್ನ ಮಾನ್ಯ ಸ್ನೇಹಿತರು ಸಿಲ್ಕ್ ಫಿಲೇಚರ್ ಬಗ್ಗೆ ರೆಫರ್ ಮಾಡಿದರು. ಅದಕ್ಕೆ ಒಂದು ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಸಿಲ್ಕ್ ಫಿಲೇಚರ್ಸ್-ಮೈಸೂರು ಮಹಾರಾಜರಿಗೆ ನಿಕಟವಾದಂಥ ಸಂಬಂಧ ಇದೆ. ಇಡೀ ಭಾರತ ದೇಶದಲ್ಲಿ ಯಾರಾದರೂ ಒಬ್ಬ ಡಿಕ್ಟೇಟರ್, ಒಬ್ಬ ರಾಜ benevolent ಇದ್ದ ಎನ್ನುವುದಾದರೆ It is Mysore Maharaja alone. ಶಿಂಷಾದಲ್ಲಿ ವಿದ್ಯುಚ್ಛಕ್ತಿ ಸ್ಥಾಪನೆ ಮಾಡುವುದರಿಂದ ಹಿಡಿದು, ಮೈಸೂರು ಯೂನಿವರ್ಸಿಟಿ ಸ್ಥಾಪನೆ ಮಾಡುವುದರಿಂದ ಹಿಡಿದು ಪ್ರಪಂಚದಲ್ಲಿ ಮೊಟ್ಟಮೊದಲಿಗೆ ಸಿಲ್ಕ್ ಫಿಲೇಚರನ್ನು ಎಸ್ಟಾಬ್ಲಿಷ್ ಮಾಡಿದವರು ಮೈಸೂರಿನ ಮಹಾರಾಜರು. ಯಾರಾದರೂ ಅದರ ಚರಿತ್ರೆಯನ್ನು ಓದಿದರೆ ಗೊತ್ತಾಗುತ್ತದೆ. Silk Filatures, Every year they are undergoing loss. Inevitable, they are incurring loss. Still the State Government has offered to maintain it to protect the farmers. ಇಂತಹ ಒಂದು ಸಂದರ್ಭ ಬಂದಾಗ ಯಾರು

ವ್ಯಾಪಾರಸ್ಥರು ಇದ್ದಾರೋ, ಇವರು ರೈತರನ್ನು ಕೈಬಿಟ್ಟಾಗ ಅಂತಹ ಒಂದು ಸಂದರ್ಭದಲ್ಲಿ ಗೂಡನ್ನು ಕೊಂಡುಕೊಂಡು ರೈತರನ್ನು ರಕ್ಷಣೆ ಮಾಡಲಿ ಎಂದು ಮೈಸೂರು ಮಹಾರಾಜರ ಕಾಲದಿಂದ ಇವತ್ತಿನವರೆಗೂ ರಾಜ್ಯ ಸರ್ಕಾರ ಗೌರ್ವನಮೆಂಟ್ ಸಿಲ್ಕ್ ಫಿಲೇಚರನ್ನು ಮೈನ್‌ಟೇನ್ ಮಾಡಿಕೊಂಡು ಬಂದಿದೆ. ನಾನು, ನಮ್ಮ ಸ್ನೇಹಿತರ ಜೊತೆ ಸೇರಿಕೊಂಡು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇದರ ಪರ್ಚೇಸ್ ಪರ್ಸೆಂಟೇಜ್ ಈಗ ಎಷ್ಟಿದೆಯೋ ನನಗೆ ಅರಿವಿಲ್ಲ. ಈಗ ಸರ್ಕಾರದವರು ಅವನ್ನು ಕೊಂಡುಕೊಳ್ಳುವುದಕ್ಕೆ ಯೋಜನೆ ಮಾಡಬೇಕಾಗುತ್ತದೆ. ಇದನ್ನು ಹೆಚ್ಚು ಮಾಡಬೇಕಾದರೆ, ಸಿಲ್ಕ್ ಫಿಲೇಚರನ್ನು ರಿವ್ಯೆವ್ ಮಾಡಬೇಕಾಗುತ್ತದೆ. ಅವು ಯಾವ ಯಾವ ಸ್ಥಿತಿಯಲ್ಲಿವೆಯೋ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಬೇಕು. ಇದು ನನಗೆ ಗೊತ್ತಿದೆ. ಆದರೆ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅವುಗಳನ್ನು ಕ್ವಾಲಿಟಿ ಅಫ್ ಗ್ರೇಡೇಷನ್ ಮಾಡಿ, ಪರ್ಚೇಸ್ ಮಾಡಬೇಕು. Market intervention, banning the import if possible and the support price, ಈ ಮೂರು ಇರುವಂಥ ಪರಿಹಾರ. ಈ ಮೂರನ್ನೂ ಮಾಡುವ ವಿಚಾರದಲ್ಲಿ ಇಲ್ಲಿರುವ ಯಾರಿಗೂ ವಿವಾದ ಇಲ್ಲದೇ ಇರುವುದರಿಂದ, ನಾವೆಲ್ಲಾ ಒಗ್ಗಟ್ಟಾಗಿ ಈ ಕೆಲಸಗಳನ್ನು ಮಾಡಲು ತೀರ್ಮಾನ ಮಾಡಬೇಕೆಂದು ನಮ್ಮ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ):- ಮಾನ್ಯ ಸಭಾಧ್ಯಕ್ಷರೇ, ರೇಷ್ಮೆಯನ್ನು ಹೊರದೇಶದಿಂದ ಆಮದು ಮಾಡಿಕೊಂಡಿದ್ದರಿಂದ ಸಂಪೂರ್ಣವಾಗಿ ಬೆಲೆ ವಿಫಲವಾಗಿದೆ ಎನ್ನತಕ್ಕಂಥಾದ್ದು ಅಷ್ಟೊಂದು ಸಮಂಜಸವಲ್ಲ. ಚೈನಾದಿಂದ ಆಮದು ಮಾಡಿಕೊಂಡಂಥ ರೇಷ್ಮೆ ಅಷ್ಟೇ ಪ್ರಮಾಣದಲ್ಲಿ ಬಟ್ಟೆ ತಯಾರು ಮಾಡಿ ರಫ್ತು ಮಾಡಬೇಕೆಂಬುದು ಕೇಂದ್ರದ ನೀತಿಯಾಗಿದೆ. ಈ ರೀತಿ ಆಮದು ಮಾಡಿಕೊಂಡಂವ ರೇಷ್ಮೆಗೆ ಹೆಚ್ಚು ಕಸ್ಟಮ್ಸ್ ಡ್ಯೂಟಿ ಕೊಡಬೇಕೆಂದು ನಿಗಧಿಯಾಗಿದೆ. ಅಗ ಏನು ಆಮದು ಮಾಡಿಕೊಳ್ಳತಕ್ಕ ರೇಷ್ಮೆಗೂ ಮತ್ತು ಸ್ವದೇಶಿ ರೇಷ್ಮೆಗೂ ಸರಿ ಸಮಾನವಾಗಿ ಬೆಲೆ ಇರಬೇಕೆಂದು ನಿಗದಿ ಮಾಡಲಾಗಿತ್ತು. ಇದಾದ ಮೇಲೂ ನೇಪಾಳದಿಂದ, ಕೊರಿಯಾದಿಂದ ರೇಷ್ಮೆ ಕದ್ದು ಹೊರಗಡೆ ಬರುತ್ತಾ ಇತ್ತು. ಅದನ್ನು ತಡೆಗಟ್ಟಬೇಕೆಂದು ರೇಷ್ಮೆ ವಿನಿಮಯ ಕೇಂದ್ರದಲ್ಲಿ ಏನು ಎನ್‌ಫೋರ್ಸ್‌ಮೆಂಟ್ ಸೆಲ್ ಎಂದು ಇತ್ತು ಅದು ತಡೆಗಟ್ಟುತ್ತಾ ಇತ್ತು. ಈ ರೀತಿ ಎನ್‌ಫೋರ್ಸ್‌ಮೆಂಟ್ ಸೆಲ್ ಇದ್ದಾಗ್ಯೂ ಕಳ್ಳ ಸಾಗಾಣಿಕೆ ಸ್ವಲ್ಪಮಟ್ಟಿಗೆ ತಡೆಗಟ್ಟಿತ್ತು. ಆದಾದ ಮೇಲೆ ಹಿಂದಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದವರು, ಈ ಕಾಯಿದ್ದೆಗೆ ತಿದ್ದುಪಡಿ ತರುತ್ತೇವೆ ಎನ್‌ಫೋರ್ಸ್‌ಮೆಂಟ್ ಸೆಲ್ ತೆಗೆಯುತ್ತೇವೆಂಬ ಸುದ್ಧಿ ಹೊರಡಿಸಿದರು, ಅದರಿಂದ ಇವತ್ತೆಲ್ಲಾ ಚೇತರಿಸಿಕೊಂಡು ಕದ್ದು ಮಾರಾಟ ಮಾಡುವುದಕ್ಕೆ ಶುರು ಮಾಡಿದರು. ಆದ್ದರಿಂದ ಮೊದಲು ಇದನ್ನು ರಿವ್ಯೆವ್ ಮಾಡಬೇಕು. ಒಂದು ಸಂತೋಷ ಏನೆಂದರೆ, ಈ ತಿದ್ದುಪಡಿಯನ್ನು ನಿಲ್ಲಿಸಿರುವುದು ನಮ್ಮೆಲ್ಲರ ಒತ್ತಡದ ಮೇಲೆ. ಆದಾದ ಮೇಲೆ, ಎಲ್ಲಾ ಪಕ್ಷಗಳವರೂ ಒಪ್ಪಿಕೊಂಡಿರುವುದರಿಂದ, ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಬೇಕೆಂಬ ಒಮ್ಮತದ ನಿರ್ಣಯವನ್ನು ನಾವು ಪಾಸ್ ಮಾಡಬೇಕು ಹಾಗೂ ಅದನ್ನು ಕೇಂದ್ರಕ್ಕೆ ಕಳುಹಿಸಬೇಕು ಮತ್ತು ಬೆಂಬಲ ಬೆಲೆಯನ್ನು ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):- ಮಾನ್ಯ ಸಭಾಧ್ಯಕ್ಷರೇ, ಇಂದು ಗಮನ ಸೆಳೆಯುವ ಸೂಚನೆಯಡಿಯಲ್ಲಿ ಪ್ರಾರಂಭವಾದಂಥ ಚರ್ಚೆ, ಕರ್ನಾಟಕ ರಾಜ್ಯದ ರೇಷ್ಮೆ ಉದ್ದಿಮೆಯಲ್ಲಿರತಕ್ಕಂಥ ಟ್ವಿಸ್ಟರ್ಸ್, ರೀಲರ್ಸ್ ಮತ್ತು ಬೆಳೆಗಾರರು ಇತ್ಯಾದಿ ವಿವಿಧ ಹಂತದಲ್ಲಿರತಕ್ಕವರ ಬಗ್ಗೆ ಬಹಳ ಉನ್ನತಮಟ್ಟದ ಚರ್ಚೆಯಾಗಿರುತ್ತದೆ. ಇದರಲ್ಲಿ ಅನೇಕ ವಿಷಯಗಳು ಚರ್ಚೆಯಾಗಿ, ಕರ್ನಾಟಕದ ರೇಷ್ಮೆಯ ಹಿರಿಮೆ ಏನಿದೆ ಅದನ್ನು ಉಳಿಸಬೇಕೆಂಬ ಚಿಂತನೆ ಸರ್ವಪಕ್ಷಗಳ ಎಲ್ಲಾ ಸದಸ್ಯರ ಇಚ್ಛೆಯಾಗಿದೆ. ಇದರ ಅಡಿಯಲ್ಲಿ ಕರ್ನಾಟಕ ಸರ್ಕಾರ ಈಗಾಗಲೇ ಏನು ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನು ತಿಳಿಸಿದ್ದೇನೆ. ಈಗ ಉದ್ಭವವಾಗಿರತಕ್ಕ ಈ ಮೂರು ವರ್ಷಗಳಲ್ಲಿ ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯರವರು ಹೇಳಿದ ರೀತಿಯಲ್ಲಿ ಏನು ಮಾರ್ಕೆಟ್ ಇಂಟರ್‌ವೆನ್‌ಷನ್ ಆಗಬೇಕು ಎಂಬುದು ಎಲ್ಲರ ಆಸೆಯಾಗಿದೆ. ಅದರಲ್ಲಿ ಕೆ.ಎಸ್.ಐ.ಸಿ. ಈಗಾಗಲೇ 28 ಕೋಟಿ ರೂ. ದಾಸ್ತಾನು ಕೊಂಡಿದ್ದೇವೆ. 2001-02ರಲ್ಲಿ 222 ಟನ್ ಖರೀದಿಸಿದ್ದು ಈ ವರ್ಷ 312 ಟನ್‌ನ್ನು ಖರೀದಿಸಿದ್ದೇವೆ. ಕೆಎಸ್‌ಐಸಿ ನಲ್ಲಿ 3 ಕೋಟಿ ರೂಪಾಯಿ ಬೇಕೆಂಬ ಉದ್ದೇಶದಿಂದ ಕೇಂದ್ರ ಸಿ.ಎಸ್.ಪಿ. ಯಿಂದ 1.5 ಕೋಟಿ ರೂ. ಮತ್ತು ಕರ್ನಾಟಕ ಸರ್ಕಾರದಲ್ಲಿ 1.5 ಕೋಟಿ, ಈ ಮೂರು ಕೋಟಿಗೆ ಸರ್ಕಾರದ ಮುಂದೆ ಬೇಡಿಕೆಯನ್ನು ಇಟ್ಟಿದ್ದೇವೆ. ಈ ವಿಷಯ ಆರ್ಥಿಕ ಇಲಾಖೆಯಲ್ಲಿದೆ. ಇದರ ಜೊತೆಗೆ ಕೆ.ಎಸ್.ಎಂ.ಬಿ. ಯನ್ನು ನಾವು ಸಧೃಡ ಮಾಡಬೇಕು. ಈಗೇನು 28 ಕೋಟಿ ರೂ. ಇರುವುದರ ಜೊತೆಗೆ ಇನ್ನೂ 5 ಕೋಟಿ ರೂ. ಬೇಕೆಂಬ ಮನವಿ ಆರ್ಥಿಕ ಇಲಾಖೆಯಲ್ಲಿದೆ. ಇದರ ಅಡಿಯಲ್ಲಿ ಏನು ಸಿಲ್ಕ್ ಆಕ್ಟ್ ಅಮೆಂಡ್‌ಮೆಂಟ್ ಆಗಬೇಕೆಂದು ಹೇಳುತ್ತಿದ್ದಾರೆ. ಅದನ್ನು ನಾವು ಪರಿಶೀಲನೆ ಮಾಡುತ್ತಾ ಇದ್ದೇವೆ. ಎನ್‌ಫೋರ್ಸ್‌ಮೆಂಟ್ ಬಗ್ಗೆ ಎಲ್ಲರೂ ಹೇಳಿದ ಒಂದು ಮಾತು ಇವತ್ತು ಬೆಳೆಗಾರರ ಪರವಾಗಿ ಮಾತನಾಡತಕ್ಕ ಸಂದರ್ಭದಲ್ಲಿ ಈ ಎನ್‌ಫೋರ್ಸ್‌ಮೆಂಟ್ ಬಗ್ಗೆ ಹೆಚ್ಚಿನ ಒತ್ತು ಕೊಡಬೇಕೆಂಬುದು ಎಲ್ಲರ ಆಸೆ. ಅದೇ ರೀತಿ ಈ ನೇಕಾರರ ಬಗ್ಗೆಯೂ ಯೋಚನೆ ಮಾಡಿದಾಗ, ಕನಿಷ್ಟ ಕಚ್ಚ ನಮಗೆ ಚೈನಾ ರೇಷ್ಮೆ ಬೇಕು ಎಂಬ ವಾದವಿರತಕ್ಕ ಸಮಯದಲ್ಲಿ, ಆ ಒಂದು ಉದ್ದೇಶದಿಂದ ಈ ರಾಜ್ಯದ ನೇಕಾರರ ಪರವಾಗಿ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಂಡಾಗ ಅವರು ಒಂದು ತಡೆಯನ್ನು ಕೊಟ್ಟಿದ್ದರು. ಆದರೆ, ಈ ಉದ್ದಿಮೆಗಳು ಸಂಕಷ್ಟದಲ್ಲಿವೆಯೆಂದು ತಿಳಿದ ತಕ್ಷಣ ಮುಖ್ಯಮಂತ್ರಿಗಳ ಆ ಆಜ್ಞೆಯನ್ನು ವಾಪಸ್ ತೆಗೆದುಕೊಂಡಿದ್ದಾರೆ. ಈಗ ಕಟ್ಟುನಿಟ್ಟಾಗಿ ಚೈನಾ ರೇಷ್ಮೆ ನಮ್ಮ ರಾಜ್ಯದಲ್ಲಿ ಬರದ ರೀತಿಯಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆಂಬುದನ್ನು 14-6-2002 ರಂದು ಸರ್ಕಾರದ ಪತ್ರದ ಆಜ್ಞೆ, ರೇಷ್ಮೆ ಕಾಯ್ದೆ ಜಾರಿಗೆಯ ಬಗ್ಗೆ, ಪುನರ್ ಆರಂಭಿಕ ಮತ್ತು ಬಲಪಡಿಸುವ ಬಗ್ಗೆ ಪತ್ರದ ಸಂಖ್ಯೆ 370 ಎಸ್‌ಎಲ್‌ಎಸ್ 2001 ಇದನ್ನು ಈಗಾಗಲೇ ನಾವು ಜಾರಿಗೆ ತಂದಿದ್ದೇವೆ. ನಾವು ಈಗ ಚೈನಾ ರೇಷ್ಮೆಯನ್ನು ಒಳಕ್ಕೆ ಬಿಟ್ಟುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ನಮ್ಮ ರಾಜ್ಯದ ಬೆಳೆಗಾರರು ಹಾಗೂ ಈ ಉದ್ದಿಮೆಯಲ್ಲಿರತಕ್ಕ ಎಲ್ಲರ ಬಗ್ಗೆ ಕಾಳಜಿ ಇದೆ. ಈ ದಿಸೆಯಲ್ಲಿ ಕಳೆದ ಸಾರಿ ಮಾನ್ಯ ಬೈರೇಗೌಡರೂ ಕೂಡ ಮಾನ್ಯ ಪರಮೇಶ್ವರರವರ ಜೊತೆಯಲ್ಲಿ ಹೋಗಿದ್ದರು. ಈ ನಮ್ಮ ಕ್ರಮಗಳನ್ನು ಗಮನಿಸಿದಾಗ ಸರಕಾರಕ್ಕೆ ರೇಷ್ಮೆ ಬೆಳೆಗಾರರ ಹಿತಚಿಂತನೆಯ ಕುರಿತಾದ ಬದ್ಧತೆಯನ್ನು

ತೋರಿಸುತ್ತದೆ ಎಂದು ಹೇಳಬಯಸುತ್ತೇನೆ ಇವೊತ್ತು ನಾವೆಲ್ಲರೂ ಸೇರಿ ರೇಷ್ಮೆ ಬೆಳೆಗಾರರಿಗೆ ಬಂದ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಇದರಲ್ಲಿ ಒಂದು ಪಕ್ಷದವರಾಗಲೀ, ಯಾವುದೇ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ವಿಚಾರ ಇದಲ್ಲ. ಈ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರನ್ನೂ ಕೂಡ ನಾನು ಕೇಳಿಕೊಂಡಿದ್ದೇನೆ. ಅವರೂ ಕೂಡ ನಿಯೋಗದಲ್ಲಿ ಬರಲಿ ಎಂದು ನಾನು ಕೇಳಿಕೊಂಡಿದ್ದೇನೆ. 18ನೇತಾರೀಖಿನಂದು ಸರ್ವಪಕ್ಷದ ನಿಯೋಗ ಏನು ಕೇಂದ್ರದವರಲ್ಲಿಗೆ ಹೋಗುತ್ತಿದ್ದೇವೆ, ಆ ಸಂದರ್ಭದಲ್ಲಿ ಕೇಂದ್ರ ಸರಕಾರದವರ ಜೊತೆಗೆ ಚರ್ಚಿಸಿ, ಆಮದು ಶುಲ್ಕವನ್ನು ಹೆಚ್ಚಿಸುವಂಥ ಕೆಲಸವನ್ನು ನಾವು ಮಾಡಬೇಕಾಗಿದೆ. ತಮ್ಮೆಲ್ಲರ ವಿಚಾರಗಳೊಂದಿಗೆ ನಮ್ಮ ರಾಜ್ಯದವರೇ ಆಗಿರತಕ್ಕಂಥ ರೇಷ್ಮೆ ಹಾಗೂ ಜವಳಿ ಸಚಿವರಾದ ಶ್ರೀ ಬಸವನಗೌಡ ಪಾಟೀಲ್ ಯತ್ನಾಳ್ ರವರೂ ಕೂಡ ನಮ್ಮ ಹಿತರಕ್ಷಣೆಗಾಗಿ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ ಎಂಬ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಅವರ ಇಂಗಿತ ಕೂಡ ನಮ್ಮ ಪರವಾಗಿಯೇ ಇದೆ ಎಂಬುದನ್ನು ಈ ಸಭೆಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಹೇಳಿದಂತೆ ಫಿಲೇಚರ್ ವಿಚಾರವು ಬಹಳ ಸಂಕಷ್ಟದಲ್ಲಿದೆ, ಈಗಾಗಲೇ ಅದು ಕೆಎಸ್‌ಐಸಿ ಅಧೀನದಲ್ಲಿರುವುದರಿಂದ ಮತ್ತು ಬಿಐಎಫ್‌ಆರ್ ನವರು ಇದನ್ನು ಮುಚ್ಚಬೇಕೆಂದು ಸೂಚನೆಯನ್ನು ಕೊಟ್ಟಿರುವುದರಿಂದ, ಹಾಗೂ ತಾವೆಲ್ಲರೂ ಆ ಕುರಿತು ಆಸಕ್ತಿ ವಹಿಸಿರುವುದರಿಂದ ಮತ್ತೆ ಅದರ ಬಗ್ಗೆ ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಮತ್ತು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕುರಿತು ನಾನು ಪರಿಶೀಲಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಅದು ಬಿಐಎಫ್‌ಆರ್ ಮುಂದೆ ಹೋಗಿದ್ದು ನಿಜ. ಅವರು ಇದನ್ನು ಸಿಕ್ ಇಂಡಸ್ಟ್ರೀ ಎಂದು ಕನ್ಸಿಡರ್ ಮಾಡಿ ಇದನ್ನು ಮುಚ್ಚಿ ಎಂದು ಹೇಳಿದ್ದು ಕೂಡ ನಿಜ. ಮೂರು ವರ್ಷಗಳ ಹಿಂದೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಆಗಿತ್ತು. ಅದರಲ್ಲಿ ಫೈನಾನ್ಸ್ ಸೆಕ್ರೆಟರಿ ಇದ್ದರು, ಇಂಡಸ್ಟ್ರೀಸ್ ಸೆಕ್ರೆಟರಿ ಇದ್ದರು, ಆ ಡಿಪಾರ್ಟ್‌ಮೆಂಟ್‌ನಲ್ಲಿ ಇದೇ ಐಎಎಸ್ ಆಫೀಸರ್‌ಗಳು ಇದ್ದರು. ಬೇರೆಯವರು ಇರಲಿಲ್ಲ. ಆಗ ಏನು ತೀರ್ಮಾನವಾಯಿತು ಅಂದರೆ, ಇದನ್ನು ಬಿಐಎಫ್‌ಆರ್‌ಗೆ ರೆಫರ್ ಮಾಡುವ ಬದಲಾಗಿ ರೆಗ್ಯೂಲರ್ ಆಗಿ ಸೆರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ತೆಗೆದುಕೊಂಡು ರನ್ ಮಾಡಬೇಕು ಎಂದು ಆಯಿತು. ಮಾನ್ಯ ವೈ.ಕೆ. ರಾಮಯ್ಯನವರು ಏನು ಹೇಳಿದರು ಅಂದರೆ, ಕಾಲಾನುಕಾಲದಲ್ಲಿಯೂ ಕೂಡ ಇದು ನಷ್ಟದಲ್ಲಿಯೇ ಇದ್ದಂಥಾದ್ದು. ಇದನ್ನು ಏಕೆ ಇಟ್ಟುಕೊಂಡಿದ್ದೇವೆ? ಗೂಡಿನ ರೇಟ್ ಕಡಿಮೆಯಾಗತಕ್ಕಂಥ ಸಂದರ್ಭದಲ್ಲಿ, ಹೆಚ್ಚಾದಂಥ ಸಂದರ್ಭದಲ್ಲಿ ಒಂದು ರೆಗ್ಯುಲೇಷನ್ ಇರಬೇಕು, ರೈತರಿಗೆ ಪ್ರೊಟೆಕ್ಷನ್ ಕೂಡ ಸಿಗಬೇಕೆಂದು ಇದನ್ನು ನಾವು ಮಾಡಿರತಕ್ಕಂಥಾದ್ದು. ಅದಕ್ಕೋಸ್ಕರವಾಗಿ ಇದನ್ನು ರೇಷ್ಮೆ ಇಲಾಖೆ ರೆಗ್ಯುಲರ್ ಡಿಪಾರ್ಟಮೆಂಟ್ ಆಗಿ ತೆಗೆದುಕೊಂಡು ರನ್ ಮಾಡಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿಯ ತೀರ್ಮಾನ ಇದೆ. ಕ್ಯಾಬಿನೆಟ್ ಸಬ್ ಕಮಿಟಿ ತೀರ್ಮಾನಗಳನ್ನು ಅಧಿಕಾರಿಗಳು ಚರ್ಚೆಯೇ ಮಾಡುವುದಿಲ್ಲ. ಮಾನ್ಯ ಮಹದೇವ್‌ರವರು ಸೆರಿಕಲ್ಚರ್ ಮಿನಿಸ್ಟರ್ ಆಗಿ ಕರೆದಿದ್ದ 2-3 ಸಭೆಗಳಿಗೆ ನಾನೂ ಕೂಡ ಹೋಗಿದ್ದೆನು. ಅಧಿಕಾರಿಗಳು ಆ ಕುರಿತು ಚರ್ಚೆ ಮಾಡಿಲ್ಲ. "This

has gone to BIFR and BIFR has recommended. We will close it. You go to dogs". This kind of reply, ಇಂಥ ಒಂದು ಅಟಿಟ್ಯೂಡ್ ಅವರಲ್ಲಿದೆಯಲ್ಲಾ ಅದು ಅವರಿಗೆ ಚನ್ನಾಗಿ ಇರುತ್ತದೆ. But, the political leadership, we have to prevail upon the bureaucracy. ಅವರು ಹೇಳುತ್ತಾರೆ. ಹಾಗಾದರೆ ಇವರೆಲ್ಲರೂ ನಲವತ್ತು ವರ್ಷಗಳಿಂದ ಚೆನ್ನಾಗಿ ನಡೆಸಿಕೊಂಡು ಬಂದಿದ್ದರೆ, ಹೀಗೇಕೆ ಆಗುತ್ತಿತ್ತು? ಈ ಬ್ಯೂರೆಕ್ರಸಿಯವರು ಹೇಳಿದ ಹಾಗೆಯೇ ನಾವು ನೀವು ನಡೆದುಕೊಂಡು ಬಂದಿರುವುದು? ಪರ್ಫಾಮೆನ್ಸ್ ಬಗ್ಗೆ ನಾವುಗಳು ಏನೆಂದು ಬರೆದುಕೊಂಡು ಬಂದಿದ್ದೇವೆ? ಒಂದು ಗುಡ್, ಇನ್ನೊಂದು ವೆರಿಗುಡ್, ಮತ್ತೊಂದು ಎಕ್ಸ್‌ಲೆಂಟ್ ಹಾಗೂ ಔಟ್‌ಸ್ಟ್ಯಾಂಡಿಂಗ್ ... ನಾನೂ ಅದನ್ನೇ ಮಾಡಿದ್ದೇನೆ, ಬೇರೆಯವರೂ ಅದನ್ನೇ ಮಾಡುವುದು. ಹಾಗಾಗಿ ಇದನ್ನು ನಾವು ಚರ್ಚೆ ಮಾಡುವುದು ಬೇಡ. ಬಹಳ ಮುಖ್ಯವಾಗಿ ನಮಗೆ ಬೇಕಾಗಿರುವುದು ಅಂದರೆ, ಬಿಐಎಫ್‌ಆರ್ ಮುಂದೆ ಹೋಗಿರತಕ್ಕಂಥಾದ್ದನ್ನು ನಿಲ್ಲಿಸಿ, You please take over. ಈ ಐದು ಫಿಲೇಚರ್‌ಗಳೇನಿವೆ ಅವುಗಳನ್ನು ನೀವೇ ತೆಗೆದುಕೊಳ್ಳಿ. ಇದು ಕೇವಲ 3-4 ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದು ಅಲ್ಲ. ಇದರಿಂದ ಕರ್ನಾಟಕ ರಾಜ್ಯದಲ್ಲಿ ಪೂರ್ಣವಾಗಿ ಸೆರಿಕಲ್ಚರ್ ಇಂಡಸ್ಟ್ರೀಸ್ ಕೊಲ್ಯಾಪ್ಸ್ ಆಗುತ್ತದೆ. ತಾವು ಏನು ಹೇಳಿದ್ದೀರಿ I fully agree with you. It is not the weaver. I am not talking about the owner of the powerloom. I am not talking about the owner of the reeling unit. ಅಲ್ಲಿ ಸಾವಿರಾರು ಜನರು ಕಾರ್ಮಿಕರು ಇದ್ದಾರೆ, ವೀವರ್ಸ್ ಇದ್ದಾರೆ, ರೀಲರ್ಸ್ ಇದ್ದಾರೆ, ನೂಲು ಬಿಚ್ಚತಕ್ಕಂಥವರಿದ್ದಾರೆ, ಅವರೆಲ್ಲರೂ ನಾಶವಾಗುತ್ತಾರೆ. ಅದರಿಂದಾಗಿ You don't require much money at all. ಒಂದು ಸಾರಿ ಕೇಂದ್ರ ಸರಕಾರದವರು ಸ್ವಲ್ಪ ಮಟ್ಟಿಗೆ ರೆಗ್ಯುಲೇಟ್ ಮಾಡುತ್ತೇವೆಂದು ಹೇಳಿದರೆ, ಅಟೋಮೆಟಿಕಲೀ ಇಲ್ಲಿಯೂ ಆಗುತ್ತದೆ. ಈಗ ಮತ್ತೆ ಎಕಾನಮಿ ರಿವೈವ್ ಆಗುತ್ತಾ ಇದೆ. ರೇಷ್ಮೆಗೆ ಡಿಮ್ಯಾಂಡ್ ಜಾಸ್ತಿಯಾಗುತ್ತಾ ಇದೆ. ಆದುದರಿಂದ ತಾವುಗಳು ದಯವಿಟ್ಟು ನಾನು ಮುಖ್ಯಮಂತ್ರಿಯವರಲ್ಲಿ ಮತ್ತು ಹಿರಿಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ತಾವುಗಳು ಸೆರಿಕಲ್ಚರ್ ಮಿನಿಸ್ಟರ್‌ಗೆ ಅಸಿಸ್ಟ್ ಮಾಡಬೇಕು, ಕ್ಯಾಬಿನೆಟ್‌ನಲ್ಲಿ ಬೆಂಬಲ ಬೆಲೆಯನ್ನು ಅನೌನ್ಸ್ ಮಾಡಬೇಕು. ಯಾವುದೇ ಕಾರಣಕ್ಕಾಗಿಯಾದರೂ ಸೆರಿಕಲ್ಚರ್ ಫಿಲೇಚರ್‌ಗಳನ್ನು ಡಿಪಾರ್ಟ್‌ಮೆಂಟ್‌ಗೆ ತೆಗೆದುಕೊಂಡು ರನ್ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ:- ಮಾನ್ಯ ಅಧ್ಯಕ್ಷರೇ, ಬೆಂಬಲ ಬೆಲೆಯ ವಿಚಾರದಲ್ಲಿ ಮಾನ್ಯ ವೈ.ಕೆ. ರಾಮಯ್ಯನವರೂ ಕೂಡ ಹೇಳಿದರು. ರಾಜ್ಯದವರೇ ಇದರ ಎಲ್ಲಾ ಭಾರವನ್ನು ಹೊರಲು ಸಾಧ್ಯವಾಗುವುದಿಲ್ಲ, ಕೇಂದ್ರ ಸರ್ಕಾರದವರು ಭಾರವನ್ನು ಹೊರಬೇಕಾಗುತ್ತದೆ. ಅದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ತಾವು ಇರಲಿಲ್ಲ, ಸಾರ್. ನಾವೇನು ಹೇಳಿದ್ದೀವಿ ಎಂದರೆ, ಇದರ ಬಗ್ಗೆ ಡಿಸ್‌ಫ್ಯಾಷನೇಟ್ ಆಗಿ ನಾವು ಮಾತನಾಡಬೇಕು. ಇದರಲ್ಲಿ ಕೇಂದ್ರ ಸರ್ಕಾರದವರದ್ದು ಜವಾಬ್ದಾರಿ ಇದೆ. ಜವಳಿ ನೀತಿಯೂ ಇದೆ. ಎನ್‌ಟಿಸಿ ಎಲ್ಲವೂ ಕ್ಲೋಶರ್ ಆಗುತ್ತಾ ಇದೆ. ಇದರಿಂದಾಗಿ ತೊಂದರೆಯಾಗುತ್ತಿರುವುದು ಯಾರಿಗೆ? It is not the workers

alone, it is the cotton growing ಕಂಪ್ಲೀಟ್ ಆಗಿ ಮುಳುಗಿ ಹೋಗುತ್ತಿದೆ. ತಮಗೂ ಗೊತ್ತಿರುವ ವಿಚಾರವೇ ಆಗಿದೆ. ಚಿತ್ರದುರ್ಗ, ದಾವಣಗೆರೆ ಭಾಗಗಳಲ್ಲಿ ಇವೊತ್ತು ಒಂದೂ ಕಾಟನ್ ಮಿಲ್ ಇಲ್ಲವಾಗಿದೆ. In the similar way, it is the dual responsibility of the Union Government and both State Government also to control this and regulate this. ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಒಪ್ಪಿಕೊಂಡಿದ್ದಕ್ಕೆ ನಾನು ಅವರನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಫೆಬ್ರವರಿ ತಿಂಗಳಿನಲ್ಲಿ ಕೆಲವರು ಬಂದು ನಮಗೆ ಹೇಳಿದರು. ನಾವು ಎನ್‌ಫೋರ್ಸ್‌ಮೆಂಟ್ ಅನ್ನು ಸಡಿಲಿಗೊಳಿಸಿದ್ದೆವು, ಈಗ ಮತ್ತೆ ಅದನ್ನು ಸ್ಟ್ರಿಕ್ಟ್ ಮಾಡಿದ್ದೇವೆ. I appreciate this kind of answer. ಇದನ್ನು ಮಾಡಿ. ನಾವು ಇಷ್ಟೆಲ್ಲಾ ಚರ್ಚೆ ಮಾಡಿದ್ದು ಮತ್ತು ಆಡಳಿತ ಪಕ್ಷದವರನ್ನು ಅಪ್ರೀಷಿಯೇಟ್ ಮಾಡಿದ್ದು ಏಕೆ? You come to the protection of the farmers? ನೀವು ಇದನ್ನು ಮಾಡುತ್ತೇವೆಂದು ಹೇಳಿ. Let the Union Government also support.

Sri K.H. Ranganath:- Textile Industry, whether it is Silk Industry or Cotton Industry, it is agro-based industry, ಮೊದಲು ಈ ರಾಷ್ಟ್ರದಲ್ಲಿ ಪ್ರಾರಂಭವಾಗಿರತಕ್ಕಂತಹ ಇಂಡಸ್ಟ್ರಿ ಎಂದರೆ ಟೆಕ್ಸ್‌ಟೈಲ್ ಇಂಡಸ್ಟ್ರೀ. ಮುಂಬೈ ಅಥವಾ ಅಹಮದಾಬಾದ್ ಯಾವುದೇ ಆಗಲಿ ಅವರು ಈ ಮಟ್ಟಕ್ಕೆ ಬರಬೇಕಾದರೆ, ಮೊದಲು ಅವರನ್ನು ಅಟ್ರ್ಯಾಕ್ಟ್ ಮಾಡಿದ್ದೇ ಈ ಟೆಕ್ಸ್‌ಟೈಲ್ ಇಂಡಸ್ಟ್ರಿ. ಅದು ಕೊಲಾಪ್ಸ್ ಆಗಬೇಕಾದರೆ, ಆಗಿರುವಾಗ ಅದರ ಕಡೆಗೆ ಯಾರು ಗಮನ ಕೊಡಬೇಕು? ಕೇಂದ್ರ ಸರ್ಕಾರದವರು ಗಮನ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರಗಳು ಇಂತಹ ಹೊಣೆಯನ್ನು ಸಬ್ಸಿಡೈಸ್ಡ್ ಮಾಡುವಂತಹ ಶಕ್ತಿಯನ್ನು ಹೊಂದಿರುವುದಿಲ್ಲ. ಇದನ್ನು ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರ ಜಿಲ್ಲೆ ಧಾರವಾಡ, ದಾವಣಗೆರೆ ಚಿತ್ರದುರ್ಗ ಇವೆಲ್ಲಾ ಕಾಟನ್ ಬೆಳೆಯತಕ್ಕಂಥ ಜಿಲ್ಲೆಗಳು. ನಲವತ್ತು ಮತ್ತು ಇಪ್ಪತ್ತು ಕೌಂಟ್‌ನ ಹತ್ತಿ ಉತ್ಪಾದನೆ ನಮ್ಮಲ್ಲಿ ಇದ್ದು ಇವೊತ್ತು ನಮ್ಮಲ್ಲಿ ಅದು ಏನೂ ಇಲ್ಲದ ಹಾಗೆ ಆಗಿದೆ. ಚಿತ್ರದುರ್ಗ, ದಾವಣಗೆರೆ, ಗದಗ, ಹುಬ್ಬಳ್ಳಿ, ಧಾರವಾಡಗಳ ಎಪಿಎಂಸಿಗಳಲ್ಲಿ ಹತ್ತಿ ವ್ಯವಹಾರವೇ ಇಲ್ಲ. ಹೀಗಿರುವ ಕೇಂದ್ರದವರು ಗಮನಹರಿಸಬಾರದೇ? ಒಂದು ಅಂಡಿಗೆ ಹತ್ತಿಯನ್ನು ಖರೀದಿ ಮಾಡಿದರೆ ಎಷ್ಟು ದುಡ್ಡು ಆಗುತ್ತದೆ? ಇವುಗಳನ್ನು ಸಬ್ಸಿಡೈಸ್ಡ್ ಮಾಡುವ ಶಕ್ತಿ ರಾಜ್ಯ ಸರ್ಕಾರಕ್ಕೆ ಇದೆಯೇ? ಒಂದು ಕೆಜಿ ಗೂಡಿಗೆ ಎಷ್ಟು ದುಡ್ಡಾಗುತ್ತದೆ? ಸಣ್ಣಪುಟ್ಟ ಪ್ರಮಾಣದಲ್ಲಿ ಟೊಮ್ಯಾಟೊ ಇತ್ಯಾದಿಗಳನ್ನು ಖರೀದಿ ಮಾಡಿದ ಹಾಗೆ ಇರುವ ಪ್ರಶ್ನೆ ಅಲ್ಲ. ಇದಕ್ಕೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ರಾಜ್ಯ ಸರ್ಕಾರದ ವಶದಲ್ಲಿರತಕ್ಕ ಕಾರ್ಖಾನೆಗಳಿವೆ. ಫಿಲೇಚರ್ಸ್ ಏನಿದ್ದಾವೆ, ಅವರು ಅಲ್ಲಿಗೆ ಹೋಗಿ ಕೊಂಡುಕೊಳ್ಳಲು ಮುಂದಾದರೆ ಒಂದು ದಿವಸದಲ್ಲಿ ರೈತರಿಗೆ ಒಂದೆರಡು ರೂಪಾಯಿಗಳ ದರವಾದರೂ ಹೆಚ್ಚಿಗೆ ಸಿಕ್ಕಿದರೂ ಅದೇ ಒಂದು ದೊಡ್ಡ ಮೊತ್ತವಾಗುತ್ತದೆ. ಆ ಕೆಲಸವನ್ನು ಸರ್ಕಾರ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ, ಟೆಕ್ಸ್‌ಟೈಲ್ ಇಂಡಸ್ಟ್ರಿ ಬಹಳ ಮುಖ್ಯವಾದ ಇಂಡಸ್ಟ್ರಿ. ಅದು ಸಿಲ್ಕ್ ಅಥವಾ ಕಾಟನ್ ಇಂಡಸ್ಟ್ರೀಯಾಗಿರಬಹುದು. ಇವೊತ್ತು ಅದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಹೆಚ್ಚಿನ ಗಮನವನ್ನು ಹರಿಸದೆ ಹೋದರೆ ಕೇಂದ್ರದವರು ಗಮನ ಕೊಡದೆ ಹೋದರೆ ರಾಜ್ಯ ಸರ್ಕಾರಗಳು ಆ ಪ್ರಮಾಣದಲ್ಲಿ ಸಬ್ಸಿಡೈಸ್ಡ್ ಮಾಡಲು ಆಗುವುದಿಲ್ಲ. ಇದನ್ನು ಯಾವುದೇ ಅರ್ಥಶಾಸ್ತ್ರಜ್ಞರನ್ನೂ ಕೇಳಿದರೂ ಅವರೂ ಕೂಡ ಹೇಳುತ್ತಾರೆ. ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡುತ್ತಾ ಆ ಕಾಲದಲ್ಲಿ ಮಹಾರಾಜರು ಅದನ್ನು ಹೇಗೆ ಅಸ್ತಿತ್ವಕ್ಕೆ ತಂದರೆಂಬುದನ್ನು ಹೇಳಿದ್ದಾರೆ. ಅದನ್ನು ಬೆಳೆಸಲು ಅವರು ಮಾಡಿದ ಪ್ರಯತ್ನಗಳ ಬಗ್ಗೆ ಹೇಳಿದ್ದಾರೆ. ಇವೊತ್ತು ಟೆಕ್ಸ್‌ಟೈಲ್ ಇಂಡಸ್ಟ್ರಿಯೇ as such ಇವೊತ್ತು ಕಷ್ಟದಲ್ಲಿದೆ. ಇದು ಏಕೆ ಹೀಗೆ ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇದಕ್ಕೆ ಕೇಂದ್ರ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ಅದು ಆಗದಿದ್ದರೆ ರಾಜ್ಯ ಸರ್ಕಾರಗಳು ಎಷ್ಟು ಶಕ್ತಿ ಹೊಂದಿವೆ ಎಂಬುದನ್ನು ನೋಡಬೇಕಾಗುತ್ತದೆ. ಒಂದು ರಿವಾಲ್ವಿಂಗ್ ಫಂಡನ್ನು ಇಡಬೇಕಾಗುತ್ತದೆ ಎಂಬುದನ್ನೂ ಕೂಡ ವೈ.ಕೆ. ರಾಮಯ್ಯನವರು ಹೇಳಿದ್ದಾರೆ. What is the total production of silk and total production of the cotton production in the State? ಇದಕ್ಕೆ ಎಷ್ಟು ಹಣಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಸುಮಾರು ಐವತ್ತು ಕೋಟಿ ರೂಪಾಯಿಗಳಷ್ಟು ಇದೆ. ಆ್ಯಕ್ಟ್‌ನಲ್ಲಿ ಅದು ಸಿರಿಕಲ್ಚರ್ ಇಂಡಸ್ಟ್ರಿಗೆ ಬಳಕೆಯಾಗತಕ್ಕಂಥಾದ್ದು ಎಂದು ಇದೆ. ಆದರೆ, ಆ್ಯಕ್ಟ್‌ನಲ್ಲಿ ಇರುವುದನ್ನೂ ಮೀರಿ ಆ ಹಣವು ಜನರಲ್ ಪೂಲ್‌ಗೆ ಹೋಗುತ್ತಾ ಇದೆ. ಅದನ್ನು ಬಳಸಿಕೊಳ್ಳಲು ಸಾಧ್ಯವಿದೆ. ಅದನ್ನಾದರೂ ಯೋಚನೆ ಮಾಡಲಿ.

(ಗೊಂದಲ)

ಶ್ರೀ ಹೆಚ್.ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಎಂ. ಶ್ರೀನಿವಾಸಗೌಡ:- ಮಾನ್ಯ ರೇವಣ್ಣನವರೇ ದಯವಿಟ್ಟು ಒಂದ್ನಿಮಿಷ ಯಿಲ್ಲಾಗಿ ನಾವೇ ದುಡ್ಡು ಕೊಡಿಸುತ್ತೇವೆ; ಇಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ರಾಜ್ಯ ಸರ್ಕಾರವೂ ಮುಂದೆ ಬರಬೇಕಾಗುತ್ತದೆ. ನೀವೂ ಸ್ವಲ್ಪ ಫಂಡ್ಸ್ ಕ್ರಿಯೇಟ್ ಮಾಡಬೇಕಾಗುತ್ತದೆ. ಹಣ ಕೊಡಿಸಲಿಕ್ಕೆ ನಾವು ತಯಾರಿದ್ದೇವೆ. ನೀವೂ ತನ್ನಿ.

ಗೊಂದಲ

ಶ್ರೀ ಎಚ್.ಎಂ. ರೇವಣ್ಣ:- ಮೊನ್ನೆ ನಡೆದ ವಿಚಾರ ಸಂಕಿರಣದಲ್ಲಿ ಕೇಂದ್ರದ ಅಂದಿನ ಜವಳಿ ಸಚಿವರು ಕೇಂದ್ರ ಸರ್ಕಾರ ಮುಕ್ತ ಮನಸ್ಸಿನಿಂದ ಇದೆ, ಇಷ್ಟು ದುಡ್ಡು ಕೊಡಲು ತಯಾರಿದ್ದೇವೆಂದು ಆಗ ಮಾನ್ಯ ಧನಂಜಯಕುಮಾರ್ ರವರು ಹೇಳಿದ್ದು, ಅದರ ಬಗ್ಗೆ ನಾವು ಪತ್ರ ವ್ಯವಹಾರ ಮಾಡಿದ್ದೇವೆ. ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ನಾವು ಯಾವುದೇ ಬೆಂಬಲ ಬೆಲೆ ಕೊಡುವುದಕ್ಕೆ ಆಗುವುದಿಲ್ಲವೆಂದು ಬರೆದಿರುವ ಪತ್ರ ನನ್ನ ಮುಂದಿದೆ. ನಿಮಗೆ ಬೇಕಾದ ಸಾಫ್ಟ್‌ಲೋನ್ ಕೊಡಲಿಕ್ಕೆ ಸಹಾಯ ಮಾಡುತ್ತೇವೆಯೇ ವಿನಃ ಬೆಂಬಲ ಬೆಲೆ ಕೊಡಲಿಕ್ಕೆ ನಾವು

ಹಣ ನಿಗದಿ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ನಮಗೆ ತಿಳಿಸಿದೆ. ಆದಕ್ಕೇ ನಾನು ಹೇಳಿದ್ದು. ಇವುಗಳನ್ನೆಲ್ಲಾ ನಾವು ಮನಗಾಣಿಸಿಕೊಂಡು ಕೇಂದ್ರದೊಡನೆ ಚರ್ಚೆ ಮಾಡಿ, ನಾವೂ ಕೂಡ ಮುಕ್ತ ಮನಸ್ಸಿನಿಂದಿದ್ದೇವೆ, ನಾವೇನೂ ರೈತರ ಪರವಾಗಿಲ್ಲದೇ ಇರುವವರಲ್ಲ, ಬೆಂಬಲ ಬೆಲೆ ಈಗಾಗಲೇ ಕೊಟ್ಟಿರುವಂಥವರು, ಇದಕ್ಕೂ ಬೆಂಬಲ ಬೆಲೆ ಕೊಡುವ ಬಗ್ಗೆ ಚರ್ಚೆ ಮಾಡೋಣ. ದೆಹಲಿಯಿಂದ ಬಂದ ಮೇಲೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಇವತ್ತು ಸಂಕಷ್ಟದಲ್ಲಿರುವ ರೈತ ಬೆಳೆಗಾರರ ಪರವಾದ ತೀರ್ಮಾನ ತೆಗೆದುಕೊಳ್ಳಲು ನಾವು ನೀವೆಲ್ಲಾ ಸೇರಿ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಇಷ್ಟು ಹೊತ್ತು ಕರ್ನಾಟಕದ ರೇಷ್ಮೆ ಬೆಳೆಗಾರರ ಬಗ್ಗೆ ಎಲ್ಲರೂ ಚರ್ಚೆ ಮಾಡಿದ್ದೇವೆ...

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಧನಂಜಯಕುಮಾರ್ ಆ ರೀತಿ ಮಾತು ಹೇಳಿದರು ಎಂದು ಹೇಳಿದಿರಿ. 18ನೇ ತಾರೀಖು ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ ಬಂದ ಮೇಲೆ ಕುಳಿತು ವಿಚಾರ ಮಾಡೋಣ. ಆದರೆ ರೈತರೇನು ಇಲ್ಲಿ ಸಾಯುತ್ತಿದ್ದಾರೆ ಅವರ ಬಗ್ಗೆ ಕಾಳಜಿಯಿಂದ ತಕ್ಷಣ ನೀವು ಇಂಟರ್‌ವೀನ್ ಮಾಡಬೇಕಲ್ಲಾ. ನೀವು ಡೆಲಿಗೇಷನ್ ಹೋಗಿ ಬಂದು ಮಾತನಾಡುವ ವೇಳೆಗೆ ರೈತ ಸತ್ತು ಹೋಗುತ್ತಾನೆ. ಸ್ವಲ್ಪ ಹಣವನ್ನು ಇದಕ್ಕೆ ನೀವು ತೆಗೆದಿಡಬೇಕಾಗಿತ್ತು. ಈಗಾಗಲೇ ಮಾರ್ಕೆಟ್ ಇಂಟರ್‌ವೆನ್‌ಶನ್ ತಕ್ಷಣ ಮಾಡಿ ರೇಷ್ಮೆ ಬೆಳೆಗಾರರ ಸಹಾಯಕ್ಕೆ ಬರಬೇಕಾಗಿತ್ತು. No, No, No, I am very sorry. ಮಾನ್ಯ ಅಧ್ಯಕ್ಷರೇ, ಇವರು ರೇಷ್ಮೆ ಬೆಳೆಗಾರರ ಸಹಾಯಕ್ಕೆ ಬರುತ್ತಾ ಇಲ್ಲ. ಎನ್‌ಫೋರ್ಸ್‌ಮೆಂಟ್ ಸೆಲ್ ಅನ್ನು ಮುಚ್ಚಿ ಒಂದು ವರ್ಷವಾಯಿತು, ಇಲ್ಲಿಯವರೆಗೆ ತೆರೆಯಲಿಲ್ಲ. ಇವರ ನೀತಿ ವಿರುದ್ಧ ನಾವು ಇವತ್ತು ಪ್ರತಿಭಟನೆ ಮಾಡುತ್ತಿದ್ದೇವೆ, ನಾವು ಸಭಾತ್ಯಾಗ ಮಾಡುತ್ತಿದ್ದೇವೆ, ಇವರು ತಕ್ಷಣ ಇಂಟರ್‌ವಿನ್ ಮಾಡಬೇಕಾಗಿತ್ತು ಎಂದು ಹೇಳಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾಜಪ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ ನಾವು ಸುಮಾರು ನಾಲ್ಕೈದು ಗಂಟೆಗಳ ಕಾಲ ಚರ್ಚೆ ಮಾಡಿದ್ದೇವೆ. ನಾವು ಕನಿಷ್ಟ ಎರಡು ಮೂರು ಬೇಡಿಕೆ ರೂಪದಲ್ಲಿ ಪ್ರಸ್ತಾಪಿಸಿದ್ದೇವೆ, ತಾವೂ ಸಹಿತ ರೇಷ್ಮೆ ಬೆಳೆಗಾರರ ಪ್ರದೇಶದಿಂದ ಬರುತ್ತಿರುವುದರಿಂದ ಮಧ್ಯ ಪ್ರವೇಶ ಮಾಡಿ ನಮ್ಮನ್ನು ಕರೆಸಿ ಪರಿಹಾರವನ್ನು ಕಂಡುಹಿಡಿಯುವ ಭರವಸೆಯನ್ನು ಸರ್ಕಾರ ಕೊಡಬೇಕೆಂದು ನಾವು ಮಾತನಾಡಿದೆವು. ಕೇಂದ್ರ ಸರ್ಕಾರ ಕಳುಹಿಸಿರುವ ಪತ್ರ ವಿಚಾರವೇನಿದೆ ಅದನ್ನು ಈಗ ಸುಟ್ಟು ಹಾಕಿ ನೀವು. ಕರ್ನಾಟಕದ ರೇಷ್ಮೆ ಬೆಳೆಗಾರರು ಇವತ್ತು ಕೇಂದ್ರ ಸರ್ಕಾರದ ಆಜ್ಞೆಯನ್ನು ಸಂಪೂರ್ಣವಾಗಿ ಧಿಕ್ಕರಿಸಬೇಕು. ಮಂತ್ರಿಗಳು ಹೇಳಿದರು, ನೂರಲ್ಲ ಇನ್ನೂರು ಕೋಟಿ ರೂ. ನಾವು ಕೊಡುತ್ತೇವೆ ಎಂದು. ಎರಡನೆಯದಾಗಿ ನಾನು ಮಂತ್ರಿಗಳಿಂದ ಏನು ನಿರೀಕ್ಷೆ ಮಾಡಿದ್ದೆ ಅಂದರೆ, ರಾಗಿ ವಿಚಾರದಲ್ಲಿ ನೀವು ಇಂಟರ್‌ವೇನ್ ಮಾಡಿದ್ದೀರಿ ಅದೇ ರೀತಿಯಲ್ಲಿ ಎನ್‌ಫೋರ್ಸ್‌ಮೆಂಟ್ ಆರ್ಡರ್ ಮಾಡಿದ್ದನ್ನು ಸಡಿಲ ಮಾಡಿದ್ದೀರಿ ನಿಜ, ಈಗ ಅದು ಬೆಳಕಿಗೆ ಬಂದಿದೆ, ನೀವು ಸಡಿಲ ಮಾಡದೇ ಹೋಗಿದ್ದಿದ್ದರೆ ಬೆಲೆ ಕಡಿಮೆಯೇ

ಆಗುತ್ತಿರಲಿಲ್ಲ. ನಿಮ್ಮ ಆಟಿಟ್ಯೂಡ್ ನಾನು ಹೇಳುತ್ತಿದ್ದೇನೆ. ಆದ್ದರಿಂದ ಈಗ ನೀರು ಘೋಷಣೆ ಮಾಡಬೇಕು. ನಾವು ಶುಕ್ರವಾರ ದೆಹಲಿಗೆ ಹೋಗುತ್ತಿದ್ದೇವೆ, ನೀವೇನು ಮಾಡಿದ್ದೀರಿ ಎಂದು ಕೇಂದ್ರ ಸರ್ಕಾರದವರು ಕೇಳುತ್ತಾರೆ. ಆದಕ್ಕೆ ನೀವು ಏನು ಹೇಳುತ್ತೀರಿ ಉತ್ತರ? ಇವತ್ತೇನು ಬೇರೆ ಬೆಳೆಗಳಲ್ಲಿ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿದ್ದೀರಿ, ಕೇಂದ್ರ ಸರ್ಕಾರ ಆ ಹಣವನ್ನು ರಿ-ಇಂಬರ್ಸ್ ಮಾಡುತ್ತಾರೆ, ಆ ಹಣವನ್ನು ನೀವೇನು ಕೊಡತಕ್ಕಂಥದಲ್ಲ. ಟೆಂಪರರಿಯಾಗಿ ನೀವು ಅಡ್ವಾನ್ಸ್ ಮಾಡುತ್ತೀರಿ ಅಷ್ಟೆ. ಅದೇ ರೀತಿ ರೇಷ್ಮೆ ಬೆಳೆಗಾರರಿಗೂ ಯಾಕೆ ಕೊಡಬಾರದು? ಅದ್ದರಿಂದ ಈ ಸರ್ಕಾರ ರೇಷ್ಮೆ ಬೆಳೆಗಾರರ ಪರವಾಗಿಲ್ಲವೆಂದು ಅತ್ಯಂತ ನೋವಿನಿಂದ ನಾನು ಹೇಳುತ್ತಿದ್ದೇನೆ. You have failed to protect. ಇಲ್ಲದೇ ಹೋದರೆ ನೀವು ಇಂಟರ್‌ವೀನ್ ಆಗಬೇಕಾಗಿತ್ತು. ಇದನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಜನತಾದಳ-(ಯು) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಚ್.ಎಂ. ರೇವಣ್ಣ:- ಬಾವಿಗೆ ಬಿದ್ದದ್ದಾಯಿತು, ಈಗ ಸಭಾತ್ಯಾಗ - ಇದು ರಾಜಕೀಯವಲ್ಲವೆ? ಕೇಂದ್ರದಲ್ಲಿ ನಿಮ್ಮ ನಾಯಕ ಮಾನ್ಯ ರಾಮಕೃಷ್ಣ ಹೆಗಡೆ ಇದರಲ್ಲಿ ಅವರೇನು ಮಾಡಿದರು ಎಂಬುದು ಗೊತ್ತಿಲ್ಲವೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಖಾತೆ ಸಚಿವರು):- ಇವತ್ತು ಕಷ್ಟದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ದುರುದ್ದೇಶ ಇವರದ್ದು ಇದೆಯೇ ಹೊರತು ರೈತರ ರಕ್ಷಣೆ ಮಾಡಬೇಕೆಂಬ ಆಸಕ್ತಿ, ಕಾಳಜಿ ಇವರಿಗೆ ಖಂಡಿತ ಇಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾರ್ಕೆಟ್ ಇಂಟರ್‌ವೆನ್‌ಶನ್ ಮಾಡಬೇಕು. ಬೆಂಬಲ ಬೆಲೆ ಕೊಡಬೇಕೆಂಬ ನನ್ನ ಸ್ನೇಹಿತರ ವಾದವನ್ನು ನಾನು ಒಪ್ಪುತ್ತಾ ಒಂದು ಮಾತನ್ನು ಅವರಿಗೆ ಕೇಳಲಿಕ್ಕೆ ಇಷ್ಟಪಡುತ್ತೇನೆ. ಅವರು ಎಲ್ಲಾ ಹೊರಟು ಹೋಗಿ ಬಿಟ್ಟರು. ನಾವು ಇಲ್ಲಿ ಬೆಂಬಲ ಬೆಲೆ ಕೊಟ್ಟು ಕೊಂಡುಕೊಳ್ಳುವುದು, ಇವರು ಅಲ್ಲಿ ಹೊರದೇಶದಿಂದ ಸಲೀಸಾಗಿ ತರಿಸುತ್ತಿರುವುದು. ಇವೆರಡೂ ಸಾಧ್ಯವಿಲ್ಲವೇ ಇರುವ ಕೆಲಸ. ಕೇಂದ್ರ ಸರ್ಕಾರ ಸಂಪೂರ್ಣವಾಗಿ ಕಳ್ಳಸಾಗಾಣಿಕೆ ಮತ್ತು ಆಮದು ಈ ಎರಡನ್ನೂ ತಡೆಯುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಲಿ. ಆಮೇಲೆ ಬೆಲೆ ಕಡಿಮೆಯಾದರೆ ರಾಜ್ಯ ಸರ್ಕಾರ ಅದನ್ನು ನಿಭಾಯಿಸುತ್ತದೆ.

ಶ್ರೀ ಎ. ನಾಗರಾಜು (ಮಾಲೂರು):- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಪ್ರತಿಭಟನೆ ಮಾಡಿ ಆಚೆ ಹೋಗಿದ್ದಾರೆ. ಆದ್ದರಿಂದ, ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವ ಪ್ರಶ್ನೆ ಉದ್ಭವಿಸುತ್ತದಾ? ಸರ್ವ ಪಕ್ಷಗಳ ನಿಯೋಗವನ್ನು ನಾವು ಏತಕ್ಕೆ ತೆಗೆದುಕೊಂಡು ಹೋಗಬೇಕು.?

Sri D.B. Chandregowda:- He is very much right.

ಅಧ್ಯಕ್ಷರು:- ಅದನ್ನು ನಾನು ಹೇಳಲು ಆಗುವುದಿಲ್ಲ. ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ಬಹಳ ಮುಖ್ಯವಾದ ವಿಚಾರವೆಂದು ನಾವು ಅಧ್ಯಕ್ಷರ ಕೋಣೆಗೆ ಹೋಗಿ ಎಲ್ಲಾ ತೀರ್ಮಾನ ಮಾಡಿಕೊಂಡು, ಸರ್ಕಾರ ಕೂಡ ಅನೇಕ ವಿಷಯಗಳನ್ನು

ಒಪ್ಪಿಕೊಂಡಿದ್ದಾರೆ. ಅಲ್ಲಿ ಒಪ್ಪಿಕೊಂಡು ಇಲ್ಲಿ ಈ ರೀತಿ ಹೋಗುವುದು ಅರ್ಥವೇ ಇಲ್ಲ. There is no meaning in it. They have agreed in my chambers. Again they are walking out. ಇರಲಿ ಅದು ಬಿಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ಪರಿಹಾರ ಬೇಕೋ ಅಥವಾ ಪ್ರಚಾರ ಬೇಕೋ ಅಂದರೆ ಪ್ರಚಾರ ಬಪೇಕು ಅಂತಾರೆ ಈ ಜನ. ಏನು ಮಾಡುವುದಕ್ಕೆ ಆಗುತ್ತದೆ? ಇವರು ಪರಿಹಾರ ಕಂಡುಹಿಡಿಯಲು ತಯಾರಿಲ್ಲ. ಇವರಿಗೆ ಪ್ರಚಾರ ಬೇಕಷ್ಟೆ! ಇದೆಂಥದು? ಇದು ರೇಷ್ಮೆ ಬೆಳೆಗಾರರ ಬಗ್ಗೆ ಇವರಿಗಿರುವ ಕಾಳಜಿ!

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುದ್ದಹನುಮೇಗೌಡರು ಮತ್ತು ಇತರರು ನಮ್ಮ ಪಕ್ಷದವರೇ ಸಹಿ ಮಾಡಿ ಗಮನ ಸೆಳೆಯುವ ಸೂಚನೆಯನ್ನು ತಂದವರು. ಇದು ಬಹಳ ಗಹನವಾದ ವಿಷಯವೆಂದು ತಾವು ಅವರಿಗೊಂದು ಅವಕಾಶ ಮಾಡಿಕೊಟ್ಟಿರಿ. ತಮ್ಮ ಸೌಜನ್ಯದ ದುರುಪಯೋಗ ಮಾಡಿಕೊಂಡು ಸತತವಾಗಿ ಸದನದ ಕಾಲಹರಣ ಮಾಡಿ ಒಂದು ರಾಜಕೀಯ ಕುತಂತ್ರ ಮಾಡುವ ಪ್ರಕೃತಿ ಸದಾಕಾಲ ಇರುವಂಥಾದ್ದು ಅವರದ್ದು. ಅದಕ್ಕೆ ಇನ್ನು ಮುಂದೆ ಇದು ಆಗದಂತೆ ನೋಡಿಕೊಳ್ಳಬೇಕು. ತಾವು ದಯವಿಟ್ಟು ನಿಯಮಕ್ಕೆ ಬದ್ಧರಾಗಿ ಸದನವನ್ನು ನಡೆಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಮೂರು ದಿವಸಗಳ ಹಿಂದೆಯೇ ಒಂದು ರೂಲಿಂಗ್‌ನ್ನು ತಯಾರು ಮಾಡಿಸಿದ್ದೆ, ಆದರೆ ಕೊಡಲು ಆಗಿರಲಿಲ್ಲ, ಅದನ್ನೀಗ ಕೊಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು, ಸಂಸದೀಯ ಸಚಿವರು):- ಮಾನ್ಯ ವಿರೋಧ ಪಕ್ಷದವರೂ ಬರಲಿ. ಅವರು ಇಲ್ಲದಿದ್ದಾಗ ಏಕೆ ಕೊಡಬೇಕು? ರೂಲಿಂಗ್‌ನ್ನು ವಿರೋಧ ಪಕ್ಷದವರಿದ್ದಾಗಲೇ ಕೊಡಿ. ನಮಗೆ ಆ ರೂಲಿಂಗ್‌ಗಳ ಅಗತ್ಯವಿಲ್ಲ. ರೂಲಿಂಗ್‌ಗಳು ನಮಗೆ ಬೇಕಾದ್ದಲ್ಲ. ಅದು ಸದನಕ್ಕೆ ಬೇಕಾದ್ದು. ಆದ್ದರಿಂದ ರೂಲಿಂಗ್ ಕೊಡುವಾಗ ಪ್ರತಿಪಕ್ಷದವರೂ ಇರಬೇಕು. ನಾವು ಮೂರೂವರೆ ಗಂಟೆಗಳ ಕಾಲ ಕಾಲಿಂಗ್ ಅಟೆನ್‌ಷನ್‌ನ ಬಗ್ಗೆಯೇ ಚರ್ಚೆ ಮಾಡಿದ್ದೇವೆ. ಗಮನ ಸೆಳೆಯುವ ಸೂಚನೆ ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳಲು ಇರತಕ್ಕದ್ದು. ಆದರೆ ಇಲ್ಲಿ ದೊಡ್ಡ ಡಿಬೇಟೇ ನಡೆಯುತ್ತದೆ. ಇಲ್ಲಿ ನಿಯಮಗಳು ಯಾವುದೂ ಇಲ್ಲದಂತಾಗಿದೆ. ಕನಿಷ್ಟ ಪಕ್ಷ ಆಡಳಿತ ಪಕ್ಷ....

ಅಧ್ಯಕ್ಷರು:- ತಮ್ಮ ಪ್ರಕಾರವೇ ಮಾಡೋಣ. I have no objection, we will go according to the rules; do not worry. ಅವರನ್ನು ಕರೆಸಿ.

(ವಿರೋಧ ಪಕ್ಷದ ಸದಸ್ಯರು ಆಗಮಿಸಿದರು)

ನಾನು ಮೂರು ದಿವಸಗಳ ಹಿಂದೆಯೇ ಈ ರೂಲಿಂಗ್‌ನ್ನು ತಯಾರು ಮಾಡಿದ್ದೆ. ಆದರೆ ಅದನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಈಗ ನಾನು ಈ ರೂಲಿಂಗ್ ಅನ್ನು ಕೊಡುತ್ತಿದ್ದೇನೆ.